ದುಡಿವ ಜನರ ಪ್ರಾಣಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 2 ಸಂಚಿಕೆ 26

ಜೂನ್ 29, 2008

ರೂ. 5/-

www.janashakthi.org

ಕೃಷಿ ಬಿಕ್ಕಟ್ಟಿನ ಸ್ಫೋಟ

ಸಾಲಬಾಧೆ-
ರಸಗೊಬ್ಬರ ಕೊರತೆ:
ನಿಲ್ಲದ ಬಲಿ





ಪದ್ಮಪ್ರಿಯ ಸಾವಿನ ಸುತ್ತ ಸಂಶಯದ ಹುತ್ತ



ಅಣು ಒಪ್ಪಂದ:
ಸಾರ್ವಭೌಮತೆ ಒತ್ತೆ ಇಡಲು
ಸರ್ಕಾರದ ತಹತಹ

ದಶಾವತಾರಂ



ಗುಂಡೂರಾಯರ ಸರ್ಕಾರವನ್ನು ನೆನಪಿಸಿದ ಗೋಲಿಬಾರ್

ಗುಪ್ತ ಅಜೆಂಡಾಗಳ ಅನಾವರಣ

ಬೆಳೆಯ ಸಿರಿಯನ್ನು ಮೊಳಕೆಯಲ್ಲೇ ನೋಡು ಎಂಬಂತೆ ರಾಜ್ಯದ ಬಿಜೆಪಿ ಸರ್ಕಾರದ ಕಾರ್ಯವೈಖರಿ, ಜವಾಬ್ದಾರಿಯಿಂದ ನುಣುಚಿಕೊಳ್ಳುವುದು, ರೈತರ ಮೇಲೆ ಗೋಲಿಬಾರ್, ಆರ್‌ಎಸ್‌ಎಸ್‌ನ ಗುಪ್ತ ಅಜೆಂಡಾಗಳನ್ನು ಮುಂದೊತ್ತುವುದು, ಗೃಹ ಇಲಾಖೆಯ ದುರುಪಯೋಗ.... ಹೀಗೆ ನಡೆಯುತ್ತಾ ಸಾಗಿದೆ. ಈ ಎಲ್ಲ ಬೆಳವಣಿಗೆ, ಚುನಾವಣಾ ಫಲಿತಾಂಶದ ಕುರಿತು ಇತ್ತೀಚೆಗೆ ಸೇರಿದ್ದ ಸಿಪಿಐ(ಎಂ) ರಾಜ್ಯ ಸಮಿತಿಯು ಚರ್ಚಿಸಿದ್ದು ಅದರ ಹೇಳಿಕೆಯ ಪೂರ್ಣ ಪಾಠ ಹೀಗಿದೆ.

ಸಿಪಿಐ(ಎಂ) ಕರ್ನಾಟಕ ರಾಜ್ಯಸಮಿತಿಯು ಎರಡು ದಿನಗಳ ಸಭೆ ಇದೇ ಜೂನ್ 15 ಮತ್ತು 16ರಂದು ಬೆಂಗಳೂರಿನಲ್ಲಿ ಜರುಗಿತು. ಪಕ್ಷದ ಪೊಲಿಟ್ ಬ್ಯೂರೊ ಸದಸ್ಯರಾದ ಕೆ.ವರದರಾಜನ್ ಮತ್ತು ಕೋಡಿಯೇರಿ ಬಾಲಕೃಷ್ಣನ್ ಭಾಗವಹಿಸಿದ್ದರು. ಸಭೆಯಲ್ಲಿ ಕರ್ನಾಟಕ ವಿಧಾನಸಭೆಗೆ ನಡೆದ ಮಧ್ಯಂತರ ಚುನಾವಣೆ, ಸರ್ಕಾರ ರಚನೆಯಾದ ರೀತಿ ಮತ್ತು ಅಲ್ಪಾವಧಿಯಲ್ಲಿ ಬಯಲಾದ ಅದರ ಆಡಳಿತ ವೈಖರಿಯನ್ನು ಕುರಿತು ಚರ್ಚಿಸಲಾಯಿತು.

ಬಹುತೇಕವಾಗಿ ಬಿಜೆಪಿ ವಿರೋಧಿ ಮತಗಳನ್ನು ಪಡೆದು ಗೆದ್ದ ಸ್ವತಂತ್ರ ಅಭ್ಯರ್ಥಿಗಳನ್ನು ಸೆಳೆದು ಬಿಜೆಪಿ ಅಲ್ಪ ಬಹುಮತದ ಸರ್ಕಾರವನ್ನು ರಚಿಸಿಕೊಂಡಿದೆ ಎಂದು ಸಿಪಿಐ(ಎಂ) ಅಭಿಪ್ರಾಯಪಡುತ್ತದೆ. 6 ಜನ ಪಕ್ಷೇತರ ಶಾಸಕರ ಬೆಂಬಲವನ್ನು ಅವಲಂಬಿಸಿರುವ ಈ ಸರ್ಕಾರ ಸ್ಥಿರವಾಗಲು ಸಾಧ್ಯವಿಲ್ಲ. ಚುನಾವಣೆಯಲ್ಲಿ ಬಂಡಾಯ ಅಭ್ಯರ್ಥಿಗಳಾಗಿ ಸ್ಪರ್ಧಿಸಿ ಜಯಗಳಿಸಿದ ಈ ಪಕ್ಷೇತರ ಶಾಸಕರು ಹಣ, ಮಂತ್ರಿ ಪದವಿ ಮುಂತಾದ ಆಮಿಷಗಳಿಗೆ ಆಕರ್ಷಿತರಾಗಿ ಬಿಜೆಪಿಯನ್ನು ಬೆಂಬಲಿಸಲು ಮುಂದಾಗಿದ್ದಾರೆ. ಇದರಿಂದಾಗಿ ಬಿಜೆಪಿ ಅಧಿಕಾರಕ್ಕಾಗಿ ಯಾವ ಅಕ್ರಮವನ್ನು ಎಸಗಲು ಹಿಂಜರಿಯುವುದಿಲ್ಲ ಎಂಬುದು ಸಾಬೀತಾಗಿದೆ.

ಗಣಿ ಧಣಿಗಳ ಬಾರೀ ಮೊತ್ತದ ಹಣವನ್ನು ಬಳಕೆ ಮಾಡಿ ಬಿಜೆಪಿ ಈ ಸಲ ಅಧಿಕಾರಕ್ಕೆ ಬಂದಿದೆ ಎಂದು ಸಿಪಿಐ(ಎಂ) ಅಭಿಪ್ರಾಯಪಡುತ್ತದೆ. ತಾನೊಂದು ಸ್ವಚ್ಛವಾದ ಪಕ್ಷವೆಂದು ಬಿಂಬಿಸುತ್ತಿರುವ ಬಿಜೆಪಿಯ ಈ ಸಲದ ಅದರ ಶಾಸಕರಲ್ಲಿ ಮಾತ್ರವಲ್ಲ ಮಂತ್ರಿಗಳಲ್ಲಿಯೂ ಸಹ ಕಳಂಕಿತ ವ್ಯಕ್ತಿಗಳನ್ನು, ಮಾಫಿಯಾ ದೊರೆಗಳನ್ನು ಮತ್ತು ಕ್ರಿಮಿನಲ್ ಪ್ರಕರಣಗಳಲ್ಲಿ ಭಾಗಿಯಾದವರನ್ನು ಸೇರ್ಪಡೆ ಮಾಡಿರುವುದು ಪಕ್ಷದ ಪರಿಶುದ್ಧತೆಗೆ ಹಿಡಿದ ಕನ್ನಡಿಯಂತಿದೆ. ಸರ್ಕಾರವಾಗಲಿ, ರಾಜ್ಯದ ಜನತೆಯೇ ಆಗಲಿ, ಈ ಕಳಂಕಿತ ವ್ಯಕ್ತಿಗಳ ಕಪಿಮುಷ್ಟಿಯಿಂದ ಹೊರಬರುವುದು ಸಾಧ್ಯವಿಲ್ಲ. ರಾಷ್ಟ್ರೀಯ ಸ್ವಯಂ ಸೇವಕ ಸಂಘ (ಆರ್.ಎಸ್.ಎಸ್))ದ ಆಣತಿಯಂತೆ ಮಂತ್ರಿಮಂಡಲ ರಚನೆಯಾಗಿದ್ದು, ಸರಕಾರವು ಆರ್‌ಎಸ್‌ಎಸ್‌ನ ಮಧ್ಯ ಪ್ರವೇಶದಿಂದ ತಪ್ಪಿಸಿಕೊಳ್ಳುವಂತಿಲ್ಲ.

ಬಿಜೆಪಿ ಸರಕಾರ ಎತ್ತ ಸಾಗುತ್ತಿದೆ ಎಂಬುದು ಅಧಿಕಾರಕ್ಕೆ ಬಂದ 10 ದಿನಗಳಲ್ಲೇ ವ್ಯಕ್ತವಾಗುತ್ತಿದೆ. ಪ್ರತಿಭಟನೆ ನಡೆಸುತ್ತಿದ್ದ ರೈತರ ಮೇಲೆ ಗೋಲಿಬಾರ್ ನಡೆಸಿ ಸಿದ್ದಲಿಂಗಪ್ಪ ಚೂರಿ ಮೃತಪಟ್ಟಿದ್ದು ಹಲವಾರು ರೈತರು ಗಾಯಗೊಂಡಿರುವುದನ್ನು ನೆನಪಿಸಿಕೊಂಡರೆ ಗುಂಡೂರಾವ್ ಸರಕಾರದ ಸರ್ವಾಧಿಕಾರಿ ರಾಜ್ಯಭಾರ ನೆನಪಿಗೆ ಬರುತ್ತದೆ.

ಹಾವೇರಿ ಘಟನೆಗೆ ಸಂಬಂಧಪಟ್ಟಂತೆ ಬಿಜೆಪಿ ಸರಕಾರವು ಹಲವಾರು ರೈತರನ್ನು ಇನ್ನೂ ಜೈಲಿನಲ್ಲಿಟ್ಟಿದೆ. 1983ರ ಜನತಾ ಪಕ್ಷದ ಸರಕಾರವು ಚಳುವಳಿ ನಿರತ ರೈತರು ಮತ್ತು ಕಾರ್ಮಿಕರ ಮೇಲಿನ ಕೇಸುಗಳನ್ನು ವಾಪಾಸು ತೆಗೆದುಕೊಂಡಿದ್ದರು. ಕಾಂಗ್ರೆಸ್ ವಿರೋಧಿ ಪರಂಪರೆ ತಾನೆಂದು ಹೇಳಿಕೊಳ್ಳುತ್ತಿರುವ ಬಿಜೆಪಿ ಸರಕಾರವು ರಸಗೊಬ್ಬರ ಮತ್ತು ಬೀಜ ಬೇಕೆಂದು ಒತ್ತಾಯಿಸಿದ ರೈತರನ್ನು ಜೈಲಿನಲ್ಲಿಟ್ಟಿದೆ.

ಬಿಜೆಪಿ ಆಡಳಿತವಿರುವ ರಾಜಸ್ತಾನದಲ್ಲಿ 50 ಗೋಲಿಬಾರ್ ಪ್ರಕರಣದಲ್ಲಿ 80 ಜನ ಸತ್ತಿದ್ದಾರೆ. ಕರ್ನಾಟಕದಲ್ಲಿ ಬಿಜೆಪಿ ಆಡಳಿತದಲ್ಲಿ ಆಗಬಹುದಾದ ಮುನ್ಸೂಚನೆಯಾಗಿದೆ.

ಪದ್ಮಪ್ರಿಯ ಪ್ರಕರಣ : ಉಡುಪಿ ಬಿಜೆಪಿ ಶಾಸಕರ ಪತ್ನಿಯವರ ನಾಪತ್ತೆ, ಪೊಲೀಸರಿಂದ ಅವರ ಪತ್ತೆಯ ವರದಿ ಮತ್ತು ದೆಹಲಿಯಲ್ಲಿನ ಫ್ಲಾಟ್ ಒಂದರಲ್ಲಿ ಅವರ ಶವದ ಪತ್ತೆ, ಬಿಜೆಪಿ ಸರಕಾರವು ಇದನ್ನು ನಿರ್ವಹಿಸಿದ ರೀತಿ-ಹಲವಾರು ಸಂಶಯಗಳಿಗೆ ಕಾರಣವಾಗಿದೆ. ಈ ಪ್ರಕರಣದ ಪೂರ್ತಿ ವಿವರಗಳು ಕರ್ನಾಟಕದ ಜನತೆಗೆ ತಿಳಿಯಬೇಕಾಗಿದ್ದು ಬಿಜೆಪಿ ಸರಕಾರವು ತನ್ನ ಜವಾಬ್ದಾರಿಯಿಂದ ನುಣುಚಿಕೊಳ್ಳುವಂತಿಲ್ಲ.

ಬಿಜೆಪಿ ಸರಕಾರದ ಆರ್ಥಿಕ ನೀತಿಯು ಇಂದಿನ ಕೇಂದ್ರ ಸರಕಾರದ ನೀತಿಗಿಂತ ಭಿನ್ನವಾಗಿರದೆ, ಬೆಲೆ ಹೆಚ್ಚಳವನ್ನು ಹತೋಟಿಗೆ ತರಲು ಯಾವುದೇ ಕ್ರಮವು ಈ ಸರಕಾರದಲ್ಲಿಲ್ಲ.


ಸರಕಾರದ ಖರ್ಚಿನಲ್ಲಿ ವಿಶೇಷ ಪೂಜೆಗಳನ್ನು ನಡೆಸಬೇಕೆಂದು ಸುತ್ತೋಲೆ ನೀಡಿದ್ದದ್ದು ಕೋಮುವಾದಿ ಕಾರ್ಯಸೂಚಿಯ ಭಾಗವಾಗಿದೆ. ಮುಂದೆ ಇಂತಹ ಅನೇಕ ಗುಪ್ತ ಹಾಗೂ ನೇರ ಹೆಜ್ಜೆಗಳನ್ನು ಬಿಜೆಪಿ ಸರಕಾರ ತೆಗೆದುಕೊಳ್ಳಲಿದೆ.

ಸ್ಥಿರ ಸರಕಾರದ ಘೋಷಣೆಯೊಂದಿಗೆ ಅಧಿಕಾರಕ್ಕೆ ಬಂದ ಬಿಜೆಪಿ ಜನತೆಗೆ ಯಾವುದೇ ಸ್ಥಿರತೆಯನ್ನು ನೀಡಲು ಸಾಧ್ಯವಾಗುತ್ತಿಲ್ಲ.

ಬೆಲೆ ಏರಿಕೆ ಮತ್ತು ಜನತೆಯ ಇತರ ಸಮಸ್ಯೆಗಳನ್ನು ಕೈಗೆತ್ತಿಕೊಂಡು ಅದನ್ನು ಬಗೆಹರಿಸಲು ಪ್ರಬಲ ಚಳುವಳಿ ನಡೆಸಬೇಕೆಂದು ಸಿಪಿಐ(ಎಂ) ತನ್ನೆಲ್ಲಾ ಕಾರ್ಯಕರ್ತರಿಗೆ ಹಾಗೂ ಜನತೆಗೆ ಕರೆ ನೀಡುತ್ತದೆ.

ವಿಜಾಪುರ ಜಿಲ್ಲೆಯ ರೈತಸಂಘ ಮುಖಂಡ ಕಾ. ನಭಿಸಾಬ ಢವಳಗಿ ನಿಧನ

ವಿಜಾಪುರ ಜಿಲ್ಲೆಯ ಪ್ರಾಂತ ರೈತ ಸಂಘ ಮುಖಂಡ ನಭಿಸಾಬ ಢವಳಗಿಯವರು ತೀವ್ರ ಅನಾರೋಗ್ಯದಿಂದ ದಿನಾಂಕ : 8.6.08ರಂದು ನಿಧನರಾದರು. ಅವರಿಗೆ 76 ವರ್ಷ ವಯಸ್ಸಾಗಿತ್ತು. ಬಸವನ ಬಾಗೇವಾಡಿ ತಾಲ್ಲೂಕಿನ ಕೂಡಗಿ ಗ್ರಾಮದವರಾಗಿದ್ದ ಢವಳಗಿಯವರಿಗೆ ಎರಡು ಹೆಣ್ಣು ಎರಡು ಗಂಡು ಮಕ್ಕಳು ಇದ್ದಾರೆ.



1995ರಲ್ಲಿ ನವೆಂಬರ್‌ದಲ್ಲಿ ಬಸವನ ಬಾಗೇವಾಡಿ ತಾಲ್ಲೂಕಿನ ಮಟ್ವಾಳ ಕ್ರಾಸ್‌ನಲ್ಲಿ ಪ್ರಾಂತ ರೈತಸಂಘ ನೇತೃತ್ವದಲ್ಲಿ ಕೃಷ್ಣಾ ಕೊಳ್ಳದ ಮುಳವಾಡ ಏತ ನೀರಾವರಿ ಯೋಜನೆ ಜಾರಿಗೆ ಆಗ್ರಹಿಸಿ ಒಂದು ತಿಂಗಳು ಕಾಲ ನಡೆದ ಧರಣಿ ಸತ್ಯಾಗ್ರಹದಲ್ಲಿ ಭಾಗವಹಿಸಿ ಜನಸಂಘಟಿಸುವಲ್ಲಿ ಬಹಳ ಮಹತ್ವದ ಪಾತ್ರ ವಹಿಸಿದ ಅವರು ಹಳ್ಳಿಯಿಂದ ಹಳ್ಳಿಗೆ ಕಾಲು ನಡಿಗೆಯಿಂದಲೇ ಸಂಚರಿಸಿ ಜನಜಾಗೃತಿ ಮಾಡಿ ಚಳುವಳಿ ಬಲಗೊಳ್ಳುವಂತೆ ಮಾಡಲು ಬಹಳ ಮಹತ್ವದ ಪಾತ್ರ ವಹಿಸಿದ್ದರು.

ಅಂದಿನ ರಾಜ್ಯಸರಕಾರದ ನೀರಾವರಿ ಸಚಿವರಾಗಿದ್ದ ಮುದ್ದಪ್ಪ ಮುನಿಯಪ್ಪ ಅವರು ಸ್ಥಳಕ್ಕೆ ಭೇಟಿ ನೀಡಿ 17 ಕೋಟಿ ರೂ.ಗಳು ಮಂಜೂರು ಮಾಡಿ ಸ್ಥಗಿತಗೊಂಡಿದ್ದ ಮುಳವಾಡ ಏತನೀರಾವರಿ ಯೋಜನೆಗೆ ಮರುಜನ್ಮ ನೀಡಿದ್ದು ಇಲ್ಲಿ ಸ್ಮರಿಸಬಹುದು.

ಬೆಂಗಳೂರು ಚಲೋ, ದೆಹಲಿ ಚಲೋ, ಮುಂತಾದ ಚಳುವಳಿಗೆ ಕಾಲು ನಡಿಗೆಯಿಂದಲೇ ಹಳ್ಳಿ ಹಳ್ಳಿಗಳಿಗೆ ಸಂಚರಿಸಿ ಜನರನ್ನು ಅಣಿಗೊಳಿಸಲು ಶ್ರಮಿಸುತ್ತಿದ್ದ ಢವಳಗಿಯವರು ಎಲ್ಲರಿಗೂ ಅಚ್ಚುಮೆಚ್ಚಿನವರಾಗಿದ್ದರು.

ಜಿಲ್ಲೆಯಲ್ಲಿ ಪಕ್ಷ ಹಾಗೂ ಸಾಮೂಹಿಕ ಸಂಘಟನೆಯ ನೇತೃತ್ವದಲ್ಲಿ ನಡೆಯುತ್ತಿದ್ದ ಯಾವುದೇ ಹೋರಾಟಗಳಿರಲಿ ಸ್ಫೂರ್ತಿ ನೀಡುತ್ತಿದ್ದ ಅವರು ಹೋರಾಟಗಳಲ್ಲಿ ಭಾಗವಹಿಸುವ ಪ್ರತಿಯೊಬ್ಬ ಕಾಯಕರ್ತರ ಊಟದ ವ್ಯವಸ್ಥೆ, ವಸತಿ ವ್ಯವಸ್ಥೆ ಕುರಿತು ವಿಶೇಷ ಕಾಳಜಿ ವಹಿಸುತ್ತಿದ್ದರು. ಸಿಪಿಐ(ಎಂ)ದ ಹಿಂದಿನ ಜಿಲ್ಲಾ ಸಮಿತಿ ಸದಸ್ಯರೂ ಆಗಿದ್ದ ಅವರು ಅತ್ಯಂತ ಸರಳ ಜೀವನ ನಡೆಸುವವರಾಗಿದ್ದರು.

ಕೂಡಗಿ ಗ್ರಾಮದಲ್ಲಿ ನಡೆದ ಅವರ ಅಂತ್ಯಕ್ರಿಯೆಯಲ್ಲಿ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಅಣ್ಣಾರಾಯ ಈಳಿಗೇರ, ಪ್ರಾಂತ ರೈತಸಂಘ ಜಿಲ್ಲಾ ಅಧ್ಯಕ್ಷ ಭೀಮಶಿ ಕಲಾದಗಿ ರಾಮಣ್ಣ ಶಿರಾಗೋಳ, ಪರುತಯ್ಯ ಹಿರೇಮಠ, ಖಾಜೇಸಾಬ ಕೋಲಾರ ಜನವಾದಿ ಮಹಿಳಾ ಸಂಘದ ಮುಖಂಡರಾದ ಸುರೇಖಾ ರಜಪೂತ ಮುಂತಾದವರು ಭಾಗವಹಿಸಿ ಕೆಂಪುಬಾವುಟ ಹಿಡಿದುಕೊಂಡು ವಂದನೆಗಳು ಹೇಳುವುದರ ಮೂಲಕ ಮೃತರಿಗೆ ಅಂತಿಮ ಗೌರವ ಸಲ್ಲಿಸಿದರು. ○

ಪೆಟ್ರೋಲ್-ಡೀಸೆಲ್ ಬೆಲೆ ಇಳಿಕೆ ಸಾಲದು– ಸಿಪಿಐ(ಎಂ)

ಪೆಟ್ರೋಲ್, ಡೀಸೆಲ್, ಗ್ಯಾಸ್ ದರಗಳ ಮೇಲೆ ದೇಶದಲ್ಲಿಯೇ ತೆರಿಗೆ ಅತ್ಯಂತ ಹೆಚ್ಚಿರುವ ಕರ್ನಾಟಕದಲ್ಲಿ ರಾಜ್ಯ ಸರ್ಕಾರ ವಿಧಿಸುತ್ತಿದ್ದ ಮಾರಾಟ ತೆರಿಗೆ ಸಂಗ್ರಹದಲ್ಲಿ ಶೇ.3 ರಷ್ಟು ಮಾತ್ರ ಇಳಿಸಿದ್ದು, ಜನರ ಮೇಲಿನ ಹೊರಗೆ ಪರಿಹಾರ ಒದಗಿಸಲಾರದ್ದಾಗಿದೆ. ಆದ್ದರಿಂದ ಈಗಿನ ಬೆಲೆಗಳು ಕೋಲ್ಕತ್ತಾ ನಗರದಲ್ಲಿರುವಂತಾದರೂ ಪೆಟ್ರೋಲ್ ಲೀಟರಿಗೆ ರೂ.52.20 ಡೀಸೆಲ್‌ನ್ನು ರೂ.35.81 ಗಳಿಗೆ ಲಭ್ಯವಾಗುವಂತೆ ಮಾರಾಟ ತೆರಿಗೆ ಇಳಿಕೆ ಮಾಡಬೇಕೆಂದು ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಮುಖ್ಯಮಂತ್ರಿ ಯಡಿಯೂರಪ್ಪನವರನ್ನು ಆಗ್ರಹಿಸಿದೆ.

ಪದ್ಮ ಪ್ರಿಯ ಪ್ರಕರಣ : ಪದ್ಮಪ್ರಿಯ ಸಾವಿನ ಪ್ರಕರಣದ ಬಗ್ಗೆ ಸಿಬಿಐಗೆ ಗೃಹ ಸಚಿವರ ನಿರಾಕರಣೆಯು ಬಿಜೆಪಿ ಪಕ್ಷ ಮತ್ತು ಅದರ ಶಾಸಕ ರಘುಪತಿಭಟ್‌ರನ್ನು ರಕ್ಷಿಸಲು ಕೈಗೊಂಡ ನಿರ್ಣಯಕವಾಗಿದೆಯೆಂದು ಸಿಪಿಐ(ಎಂ) ಖಂಡಿಸಿದೆ.

ಸಿಬಿಐ ತನಿಖೆಗೆ ರಾಜ್ಯಾದ್ಯಂತ ವ್ಯಕ್ತವಾಗಿರುವ ಜನರ ಅಭಿಪ್ರಾಯ, ರಾಜಕೀಯ ಪಕ್ಷಗಳ ಒತ್ತಾಯ ಬಿಜೆಪಿ ಸರ್ಕಾರವೇ ಸೃಷ್ಟಿಸಿದ ಗೊಂದಲಗಳಿಂದ ಮೂಡಿದ ಅನಿವಾರ್ಯತೆ ಮುಖ್ಯಮಂತ್ರಿ, ಗೃಹ ಮಂತ್ರಿ, ಪೋಲೀಸ್ ಮೂಲಗಳು ನೀಡಿದ ತದ್ವಿರುದ್ಧವಾದ ಹೇಳಿಕೆಗಳು ಮತ್ತು ಸ್ವತಃ ರಘುಪತಿಭಟ್‌ರವರ ವರ್ತನೆಯಿಂದ ಮೂಡಿದ ಸಂಶಯಗಳಿಂದಾಗಿ ನಿಷ್ಪಕ್ಷಪಾತವಾದ ಹಾಗೂ ಬಿಜೆಪಿ ಸರ್ಕಾರದ ಹಿಡಿತವಿಲ್ಲದ ಸಂಸ್ಥೆಯಿಂದ ತನಿಖೆ ನಡೆಸುವುದು ಅಗತ್ಯವಾಗಿದೆ. ಜೊತೆಗೆ ರಘುಪತಿಭಟ್ ಮತ್ತು ಅವರ ಪತ್ನಿಯ ನಡುವೆ ಹಲವಾರು ತಿಂಗಳ ಹಿಂದಿನಿಂದಲೇ ವಿವಾದವಿತ್ತೆಂದೂ ಅದನ್ನು ಬಗೆಹರಿಸಲು ಸ್ವತಃ ಗೃಹ ಸಚಿವರು ಬಿಜೆಪಿಯ

ಪುಟ 16ಕ್ಕೆ

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ಕಾರ್ಷಿಕ ಬಿಕ್ಕಟ್ಟಿನ ಸ್ಫೋಟ

ರೈತರ ಆತ್ಮಹತ್ಯೆಗಳು ಸ್ಫೋಟಿಸಿರುವುದರ ಹಿಂದೆ ವಿರೋಧ ಪಕ್ಷಗಳ ಕೈಬಾಡವಿದೆಯೆಂಬ ಬಾಲಿಷತನದ ಪಾಠ ಒಪ್ಪಿಸುವುದನ್ನು ಮುಖ್ಯ ಮಂತ್ರಿಗಳು ನಿಲ್ಲಿಸಿ, ಪ್ರಸಕ್ತವಾಗಿರುವ ಗಂಭೀರ ಕೃಷಿ ಬಿಕ್ಕಟ್ಟಿಗೆ ಪರಿಹಾರೋ ಪಾಯ ರೂಪಿಸಲು ತಕ್ಷಣವೇ ಸಮಾ ಲೋಚನಾ ಸಭೆ ಕರೆಯಬೇಕು. ಈಗ ಮಾಡುವ ಕಾಲಹರಣವು ರೈತರ ಕೊರಳಿನ ನೇಣಿನ ಕುಣಿಕೆಯನ್ನು ಇನ್ನಷ್ಟು ಬಿಗಿಗೊಳಿಸಲಿದೆ.

ಕರ್ನಾಟಕದಲ್ಲಿ ರೈತರ ಆತ್ಮಹತ್ಯೆಗಳು ಮತ್ತೊಮ್ಮೆ ಸ್ಫೋಟಿಸಿವೆ. ರೈತರ ಆತ್ಮಹತ್ಯೆಗಳ ಸರಣಿ ನಡೆದೇ ಇದ್ದರೂ ಈ ವಾರವೊಂದರಲ್ಲೇ ಸಾಯುತ್ತಿರುವ ರೈತರ ಸಂಖ್ಯೆ ಗಮನಿಸಿದರೆ ಸನ್ನಿವೇಶ ಆತಂಕವನ್ನು ಹುಟ್ಟಿಸುತ್ತಿದೆ. ಕಳೆದ ಗುರುವಾರ ಐದು ಜನ, ಶುಕ್ರವಾರ ನಾಲ್ಕು ಜನ, ರೈತ ಕುಟುಂಬದವರ ಆತ್ಮಹತ್ಯೆಗಳು ವಾತಾವರಣ ಪರಿಸ್ಥಿತಿಯು ಇನ್ನಷ್ಟು ಕೆಡುವ ಸೂಚನೆಗಳನ್ನೇ ನೀಡುತ್ತಿವೆ. ಸಾಲದ ಬಾಧೆ, ಕೃಷಿ ಕಾರ್ಯ ನಿರ್ವಹಣೆ ಅಸಾಧ್ಯವಾದ ಜೊತೆಯಲ್ಲೇ ಈಗ ಗೊಬ್ಬರದ ಅಭಾವವೂ ರೈತರನ್ನು ಹತಾಶೆಗೊಳಿಸಿ, ಕೊನೆಗೊಳಿಸುತ್ತಿದೆ. ಆತ್ಮಹತ್ಯೆ ಇದಕ್ಕೆ ಪರಿಹಾರವೇನಲ್ಲ. ಆದರೆ ಭವಿಷ್ಯವೇ ಅಂಧಕಾರದಲ್ಲಿ ಮುಳುಗುತ್ತಿರುವಾಗ, ನಿಂತ ನೆಲವೇ ಕುಸಿಯುತ್ತಿರುವಾಗ ಯಾರೊಬ್ಬರೂ ನೆರವಿಗೆ ಸಿಗದ ಹತಾಶ ಸ್ಥಿತಿಯು ಇಡೀ ಕಾರ್ಷಿಕ ಸಮುದಾಯವನ್ನೇ ಕಾಡುತ್ತಿದೆ. ಇದೊಂದು ಗಂಭೀರ ಸನ್ನಿವೇಶವೆಂದು ಮುಖ್ಯಮಂತ್ರಿಗಳಿಗೂ, ಕೃಷಿ ಸಚಿವರಿಗೂ ಆಡಳಿತ ಯಂತ್ರಕ್ಕೂ ಅನ್ನಿಸುತ್ತಿಲ್ಲ, ಅದನ್ನು ಪರಿಶೀಲಿಸಿ ಪರಿಗಣಿಸುತ್ತಿಲ್ಲವೆಂಬುದೇ ಒಂದು ದುರಂತ. ಸಂವೇದನೆಗಳೇ ಸತ್ತುಹೋಗಿರುವ ಸರ್ಕಾರ ಹಾರ, ತುರಾಯಿಗಳ ಅದ್ದೂರಿ ಸನ್ಮಾನಗಳಲ್ಲೇ ಸಂತೃಪ್ತಿ ಮೆರೆಯುತ್ತಿದೆ.

ಗೊಬ್ಬರಕ್ಕಾಗಿ ವಾರಗಟ್ಟಲೇ ಕಾದು ಕಾದು ದಾರಿ ಕಾಣದ ರೈತರು ಚಳುವಳಿ ಮಾಡುವುದನ್ನು ಸಹಿಸದ ಸರ್ಕಾರ ಹಾವೇರಿಯಲ್ಲಿ ಗುಂಡುಹಾಕಿ ವಿನಾಕಾರಣ ರೈತನೊಬ್ಬನನ್ನು ಕಗ್ಗೊಲೆ ಮಾಡಿದ ಬಳಿಕವಾದರೂ ಎಚ್ಚೆತ್ತುಕೊಳ್ಳಬೇಕಿತ್ತು. ಆದರೆ ಸಮಸ್ಯೆಯ ಇತ್ಯರ್ಥಕ್ಕೆ ತಕ್ಷಣ ಪರಿಹಾರದ ಕ್ರಮ ಕೈಗೊಳ್ಳಲಿಲ್ಲ. ಅದೇ ಪರಿಸ್ಥಿತಿಯು ಮುಂದುವರಿದಿದೆ. ಹದಗೊಂಡು ಹೊಲವಿದ್ದರೂ ಗೊಬ್ಬರ ಸಿಗದೇ ಬೀಜ ಹಾಕಲಾಗದೇ ವರುಷದ ಅನ್ನಕ್ಕೆ ಸಂಚಕಾರ ಒದಗಿಬಂದುದು ದಾರಿ ಕಾಣದ ಸ್ಥಿತಿಯಲ್ಲಿ ರೈತರನ್ನು ನಿಲ್ಲಿಸಿದೆ. ಗೊಬ್ಬರ, ಬೀಜ ಸಿಗಬೇಕೆಂದೂ ಸರ್ಕಾರ ಕ್ರಮವಹಿಸಲು ಕೇಳಿದರೆ 'ಗುಂಡೇಟಿನ ಪರಿಹಾರ'ವೇ ಸಿಗುವುದೆಂಬ ಸರ್ಕಾರದ ಎಚ್ಚರಿಕೆಯ ನಡುವೆ ರೈತನ ಅಸಹಾಯಕತೆ ರೈತನ ಮಗ ಮುಖ್ಯಮಂತ್ರಿಗೆ ಅರ್ಥವಾಗುತ್ತಿಲ್ಲವೇಕೆ? ಬೆನ್ನೂರು, ದಾವಣಗೆರೆ, ಚಿಂಚೋಳಿ, ಸ್ವತ: ಮುಖ್ಯಮಂತ್ರಿಗಳ ಕ್ಷೇತ್ರ ಶಿಕಾರಿಪುರ, ಮುಂತಾದೆಡೆಗಳಲ್ಲಿ ಸತ್ತ ರೈತರ ಗಂಭೀರ ಸಮಸ್ಯೆ ಗೊಬ್ಬರದ ಅಭಾವವೇ ಆಗಿದೆ. ಆದರೆ ಮಾನ್ಯ ಮುಖ್ಯಮಂತ್ರಿ ಯಡ್ಯೂರಪ್ಪನವರಿಗೆ ಇದು ಗೊಬ್ಬರಕ್ಕೆ ಸಂಬಂಧಿಸದೇ ಕೃಷಿ ಸಾಲಕ್ಕೆ ಸಂಬಂಧಿಸಿದ್ದು ಎನ್ನುವಂತಹ ಬಾಲಿಷತನದ ಮಾತುಗಳನ್ನಾಡುತ್ತಿದ್ದಾರೆ. ಇದು 'ವಿರೋಧಪಕ್ಷದವರ ಪಿತೂರಿ' ಎಂದು ಹೇಳಿ ಇನ್ನೊಬ್ಬರ ತಲೆಗೆ ಕಟ್ಟಿ ಪಲಾಯನ ಮಾಡುವುದು ಜಾಣತನವಲ್ಲ. ಅದು ಹೊಣೆಗೇಡಿತನ, ವಂಚಕತನವಾಗಿದೆ. ಜನವಿರೋಧಿಯಾಗಿದೆ. ಇಲ್ಲವಾದರೆ ಅವರ ಶಿಕಾರಿಪುರದಲ್ಲೇ ರೈತ ವಿಷ ಸೇವಿಸಿ ವಿಲಿವಿಲಿ ಒದ್ದಾಡಿ ಸಾಯುತ್ತಿರುವಾಗ ಸಂವೇದನೆಗಳಿದ್ದರೆ ಸನ್ಮಾನ ಮಾಡಿಸಿಕೊಳ್ಳುತ್ತಿರಲಿಲ್ಲ.


ಇಂತಹ ಗಂಭೀರ ಕೃಷಿ ಬಿಕ್ಕಟ್ಟಿಗೆ ಇಂದಿನ ಕಾಂಗ್ರೆಸ್ ನೇತೃತ್ವದ ಯು.ಪಿ.ಎ ಸರ್ಕಾರದ ಹೊಣೆಗಾರಿಕೆ ಇರುವಾಗಲೇ, ಹಿಂದಿದ್ದ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರದ ಹೊಣೆಗಾರಿಕೆಯೂ ಹೆಚ್ಚಿನದ್ದಾಗಿದೆ. ಉದಾರೀಕರಣ, ಜಾಗತೀಕರಣದ ನೀತಿಗಳನ್ನು ಇಂದಿಗೂ ಕೈಬಿಡಲು ನಿರಾಕರಿಸುತ್ತಿರುವ ಬಿಜೆಪಿ ನಿಜಕ್ಕೂ ಕೃಷಿ ಬಿಕ್ಕಟ್ಟಿನಿಂದ ದೇಶವನ್ನು ಪಾರು ಮಾಡೀತೇ? ಅದೇ ನೀತಿಗಳನ್ನೇ ಪ್ರತಿಪಾದಿಸುತ್ತಿರುವಾಗ ಯಡ್ಯೂರಪ್ಪನವರು ಹೊಸ ಹಾದಿ ಹಿಡಿಯುವ ಮಾತಿನಲ್ಲಿ ಎಷ್ಟು ಸತ್ಯವಿದೆ?

ರಾಜ್ಯಕ್ಕೆ ಅಗತ್ಯವಿರುವ ರಸಗೊಬ್ಬರದ ಪ್ರಮಾಣ ಪೂರೈಕೆಯಾಗಿದೆ ಎಂದು ಕೇಂದ್ರ ಸರ್ಕಾರದ ಅಂಕಿಅಂಶಗಳು ಹೇಳುತ್ತಿವೆ. ಅಂದರೆ ರೈತರ ಕೈಗೆ ಸಿಗುತ್ತಿಲ್ಲ ಎನ್ನುವಾಗ ಅವು ಖಾಸಗಿ ವ್ಯವಹಾರಸ್ಥರ ಜೇಬುಸೇರಿವೆ ಎಂಬುದೂ ಸ್ಪಷ್ಟ. ಇಂತಹ ಕಾಳಸಂತೆಖೋರರು ಬಿಜೆಪಿ ಪಕ್ಷದ ಬೆನ್ನೆಲುಬು ಕೂಡ. ಹೀಗಾಗಿ ಮುಖ್ಯ ಮಂತ್ರಿಗಳು ನಿಜಕ್ಕೂ ರೈತರ ಮೇಲೆ ಕಾಳಜಿ ಇದ್ದರೆ ಅಂತಹ ಕಾಳಸಂತೆಕೋರರ ಮೇಲೆ ಧಾಳಿ ನಡೆಸಲಿ. ಇದು ಅವರಿಗೆ ಸತ್ವ ಪರೀಕ್ಷೆಯೂ ಹೌದು. ಆದರೆ ಅಂತಹದ್ದರಲ್ಲಿ ಯಡ್ಯೂರಪ್ಪ ನಪಾಸಾಗಿದ್ದಾರೆ. ಅದಕ್ಕೆಂದೇ ಹಾದಿ ತಪ್ಪಿಸುವ ಮಾತುಗಳು ನಡೆದಿವೆ.

ಕೃಷಿಕರ ಸಮಸ್ಯೆಗಳ ಬಗ್ಗೆ ತಕ್ಷಣವೇ ಅಗತ್ಯ ಗಮನ ಹರಿಸಬೇಕಾಗಿದೆ. ಕಬ್ಬು ಬೆಳೆಗೆ ಬೆಲೆಯಿಲ್ಲ, ಇದು ಇತರೆ ಫಸಲಿಗೂ ಅನ್ವಯಿಸುತ್ತದೆ. ಸಾಲಮನ್ನಾವೆಂಬ ಯೋಜನೆಗಳು ರೈತರನ್ನು ಪೂರ್ಣವಾಗಿ ತಲುಪಲಿಲ್ಲ. ಕೇವಲ ಬಡ್ಡಿ ಮನ್ನಾವೂ ಸಮಸ್ಯೆಯನ್ನು ಪರಿಹರಿಸಲಾರದು. ಹೊಸ ಸಾಲಗಳೂ ಸಿಗದೇ ಕೃಷಿ ಕಾರ್ಯಗಳೇ ಸ್ಥಗಿತಗೊಂಡಿವೆ. ಕೃಷಿ ಸಾಧನ, ಪರಿಕರ ವಸ್ತುಗಳು ದುಬಾರಿಯಾಗಿ ಕೈಗೆಟುಕದಂತಿದೆ. ಜೀವನ ನಿರ್ವಹಣೆಯೇ ದುಸ್ತರವಾಗಿದೆ. ಇಂತಹ ದು:ಸ್ಥಿತಿಯನ್ನು ರೈತರು ಕೃಷಿ ಕೂಲಿಕಾರರೂ ಎದುರಿಸುತ್ತಿರುವಾಗ ಇಂದಿನ ಗಂಭೀರ ಸನ್ನಿವೇಶವನ್ನು ಪರಿಗಣಿಸಿ ಪರಿಹಾರೋಪಾಯ ರೂಪಿಸಲು ವಿವಿಧ ರೈತ, ಕೂಲಿಕಾರ ಸಂಘಟನೆಗಳ ಪ್ರತಿಗಳೊಂದಿಗೆ ಸಮಾಲೋಚಿಸಲು ರಾಜ್ಯಮಟ್ಟದ ಸಭೆಯನ್ನು ಸಿ.ಎಂ ಕರೆಯಬೇಕು. ಬಂದ ಸಲಹೆಗಳನ್ನು ಪರಿಗಣಿಸಿ ಕ್ರಮವಹಿಸಲು ಮುಂದಾದಲ್ಲಿ ಇದು ಕೃಷಿಕರಲ್ಲಿ ಆತ್ಮವಿಶ್ವಾಸ ಮೂಡಿಸಿ, ಅವರು ಬದುಕುಳಿಯಲು ಸಾಧ್ಯ.

ಆದರೆ ಶಿವಮೊಗ್ಗದಲ್ಲಿ ವಿಮಾನ ನಿಲ್ದಾಣವನ್ನು ಮುಖ್ಯಮಂತ್ರಿಗಳು ಉದ್ಘಾಟಿಸುತ್ತಿರುವಾಗಲೇ ಮಣ್ಣಿನ ಮಕ್ಕಳು ಮಣ್ಣು ಪಾಲಾಗುತ್ತಿರುವ ದೃಶ್ಯ ನೆನೆದರೆ ಯಡ್ಯೂರಪ್ಪನವರ ಅಭಿವೃದ್ಧಿ ಮಾದರಿ ಎಂತಹುದು ಅವರು ಎಂಬುದರ ಸಂಕೇತ ಸಿಗುತ್ತದೆ.

ಯಾವುದು ಆದ್ಯತೆ !?



ಇದೊಂದು ಮತ್ತೊಂದು ಹೊಸ ಬೆಳವಣಿಗೆ. ಕಾಂಗ್ರೆಸ್ ಮತ್ತು ಜೆ.ಡಿಎಸ್ ಹತ್ತಿರ ಬಂದವು. ಪರಿಣಾಮ ಪರಸ್ಪರ ಲಾಭವನ್ನು ಮಾಡಿಕೊಂಡವು. ಸಂದರ್ಭ-ಇತ್ತೀಚೆಗೆ ತರವಾದ ರಾಜ್ಯ ಸಭಾ ಹಾಗೂ ವಿಧಾನ ಪರಿಷತ್ತಿಗೆ ನಡೆದ ಚುನಾವಣೆಯಲ್ಲಿ ಬೆಸೆದುಗೊಂಡ ಪರಿಣಾಮವಾಗಿ ಒಂದೊಂದು ಸ್ಥಾನಗಳು ಹೆಚ್ಚಿಗೆ ಸಿಕ್ಕಿದವು. ಈಗೀನ ವಿಧಾನಸಭೆಯ ಸಂಖ್ಯಾ ಬಲ ಆಧರಿಸಿದರೆ ಎರಡನ್ನು ನಿರಾಯಸವಾಗಿ ಗೆಲ್ಲಬಹುದಿತ್ತು. ಇನ್ನು ಪಕ್ಷೇತರರನ್ನು ಒಳಗೊಂಡಂತೆ 26 ಸ್ಥಾನಗಳು ಉಳಿಯುತ್ತಿದ್ದವು. ಆಯ್ಕೆಗೆ ಬೇಕಾಗಿರುವ 45 ಸ್ಥಾನಗಳನ್ನು ಹೊರತುಪಡಿಸಿದರೆ 35 ಮತಗಳು ಉಳಿಯುತ್ತಿದ್ದವು ಅಂದರೆ ಒಂದು ಸ್ಥಾನಗಳು ಮಾತ್ರ ಗ್ಯಾರಂಟಿ ಇತ್ತು. ಆದರೆ ಕೇವಲ 26 ಸ್ಥಾನ ಹೊಂದಿರುವ ಜೆ.ಡಿ.ಎಸ್.ಗೆ ಗೆಲ್ಲುವ ಅವಕಾಶವಿರಲಿಲ್ಲ. ಆದರೆ ನಾಲ್ಕನೇ ಅಭ್ಯರ್ಥಿ ಗೆಲುವಿಗೆ ಸಾತ್ ಕೊಡಬಹುದಾಗಿತ್ತು. ಇಂತಹ ಸಂದರ್ಭದಲ್ಲಿ ಕಾಂಗ್ರೆಸ್ ಮತ್ತು ಜೆ.ಡಿ.ಎಸ್. ಹೊಂದಾಣಿಕೆ ಮಾಡಿಕೊಂಡವು. ಹೀಗಾಗಿ ಎಸ್.ಎಂ,ಕೃಷ್ಣ, ಅನಿಲ್ ಲಾಡ್ ರಾಜ್ಯ ಸಭೆಗೂ, ಜೆ.ಡಿ.ಎಸ್.ನ ಎಂ.ಸಿ.ನಾಣಯ್ಯ, ಹಾಗೂ ಕೆ.ವಿ.ನಾರಾಯಣಸ್ವಾಮಿ ವಿಧಾನ ಪರಿಷತ್ತಿಗೆ ಆಯ್ಕೆಯಾದರು ಬಿ.ಜೆ.ಪಿ.ಯು ಸಂಘ ನಿಷ್ಠರಾದ ನ್ಯಾ.ರಾಮಜೋಯಿಸ್, ಮತ್ತು ಕೊನೆ ತನಕ ಕಾಂಗ್ರೆಸ್‌ನಲ್ಲಿದ್ದ ಪ್ರಭಾಕರ್ ಕೋರೆ ಅವರನ್ನು ರಾಜ್ಯ ಸಭೆಗೆ ಆರಿಸಿ ಮೂರನೇ ಸ್ಥಾನಕ್ಕೆ ಯತ್ನಿಸದೇ ತೆಪ್ಪಗಾಯಿತು.



ಈ ಮೈತ್ರಿಯಿಂದ ಕೋಮುವಾದಿಗಳನ್ನು ಸೋಲಿಸಲು ಜ್ಯಾತ್ಯಾತೀತ ಶಕ್ತಿಗಳು ಪರಸ್ಪರ ಹತ್ತಿರ ಬಂದಿವೆ ಎಂದು ಕಾಂಗ್ರೆಸ್ ಜೆ.ಡಿ.ಎಸ್. ಮುಖಂಡರು ಹೇಳಿದ್ದಾರೆ ಈ ಮೈತ್ರಿ ಸಂಸತ್ ಚುನಾವಣೆಯವರೆಗೂ ಮುಂದುವರೆಯುವುದೆ ಎಂದು ಪ್ರಶ್ನೀಸಲಾಗುತ್ತಿದೆ, ನಾಯಕರೇನೋ ನೋ ಕಮೆಂಟ್ಸ್ ಎಂಬಂತ್ತಿದ್ದಾರೆ. ಆದರೆ ಕಾಂಗ್ರೆಸ್ ಒಳಗೆ ಸಿದ್ದರಾಮಯ್ಯ ದೇವಗೌಡರೊಂದಿಗೆ ಕೈಚಾಚಿದ್ದಕ್ಕೆ ಮುನಿಸಿಕೊಂಡಿದ್ದಾರೆ. ಇದನ್ನು ಕಾಂಗ್ರೆಸ್ ನಾಯಕರು ಮನಸ್ಸಿಗೆ ತೊಗಂಡಂತೆ ಕಾಣೋದಿಲ್ಲ. ಹೀಗಾಗಿ ದೇವೆಗೌಡರನ್ನು ಆಕ್ಷೇಪಿಸುವುದೇ ನಿಷ್ಠತೆ ಎಂದುಕೊಂಡಿರುವ ಸಿದ್ದರಾಮಯ್ಯನವರು ಆದದ್ದಾಯಿತ್ತೆಂದು ಸುಮ್ಮನಿದ್ದಾರೆ. ಆದರೆ ಬಿ.ಜೆ.ಪಿಯಲ್ಲಿ ಈಗಾಗಲೇ ಯಡ್ಡಿ ಹಾಗೂ ಅನಂತ್‌ಕುಮಾರ್ ಗುಂಪಿನ ನಡುವೆ ಬುಸುಗುಡುವುದು ನಡೆದಿದೆ. ಮುಖ್ಯವಾಗಿ ನಮ್ಮ ಮಾತಿಗೆ (ಅಭ್ಯರ್ಥಿಗೆ) ಕವಡೆಯ ಕಿಮ್ಮತ್ತಿಲ್ಲ ಎಂದು ಅನಂತ್ ಸಭೆಯಿಂದ ಹೊರ ನಡೆದಿದ್ದಾರಂತೆ. ಈ ಮುಸುಕಿನ ಗುದ್ದಾಟ ಏನಾಗಲಿದೆ ನೋಡಬೇಕು. ಅಂತೂ ಯಡಿಯೂರಪ್ಪನವರು ತಮ್ಮ ಕುದುರೆಯನ್ನ ಓಡಿಸುತ್ತಿದ್ದಾರೆ ! ಮೇಲುಗೈ ಸಾಧಿಸುತ್ತಿದ್ದಾರಂತೆ !

ಇಲ್ಲಿ ಒಂದು ವಿಷಯ ಗಮನಿಸಬೇಕು ಕಾಂಗ್ರೆಸ್-ಜೆ.ಡಿ.ಎಸ್. ಒಂದು ಒಮ್ಮತಕ್ಕೆ ಬಂದಿದ್ದು ಒಳ್ಳೆಯದೇ. ಆದರೆ ಈ ಮೈತ್ರಿ ಕೇವಲ ಸ್ಥಾನಗಳಿಕೆಗೆ ನಿಲ್ಲಬಾರದು. ಜನತೆಯ ಹಿತಾಸಕ್ತಿಯ, ವಿಷಯಗಳ ಪ್ರಶ್ನೆಯಲ್ಲಿ ಇಂತಹ ತಾತ್ಕಾಲಿಕ ಮೈತ್ರಿಯೂ ಮುಖ್ಯ ರಾಜಕೀಯ ವಿಷಯಗಳತ್ತ ಮುಂದುವರೆಯುವುದು ಕೋಮುವಾದಿಗಳನ್ನು ಎದುರಿಸುವುದೆ ಆದ್ಯತೆ ಎಂದು ಭಾವಿಸುವುದು ಅತ್ಯಗತ್ಯ. ಹಾಗೇ ಪ್ರಭಾಕರ್ ಕೋರೆಯನ್ನು ಸೆಳೆಯುವ ಮೂಲಕ ಬಿಜೆಪಿ ಲಿಂಗಾಯಿತ ಮತ ಕ್ರೋಢೀಕರಣದ ಯತ್ನ ಮುಂದುವರೆಸಿದೆ. ಪಾರ್ಲಿಮೆಂಟ್ ಚುನಾವಣೆಗೆ ಸಿದ್ಧತೆ ನಡೆಸಿದೆ. ಸಂಘ ಪರಿವಾರದ ಆಟಕ್ಕೆ ಕಡಿವಾಣ ಹಾಕಬೇಕಲ್ಲವೇ.

ಜನಶಕ್ತಿ ಕನ್ನಡ ವಾರಪತ್ರಿಕೆ
ಜೂನ್ 29, 2008

ವಿನಿವಿಂಕ್ ಶಾಸ್ತ್ರಿಯೂ, ಲಾಲೂ ಪ್ರಸಾದನೂ ಮತ್ತು 'ಭಯೋತ್ಪಾದನೆ' ಸಮಾಚಾರವೂ

ವಿನಿವಿಂಕ್ ಶಾಸ್ತ್ರಿ ಅಂತ ಆ ಪುಣ್ಯಾತ್ಮನ ಹೆಸರು. ಆತನ ಸಾಧನೆ ಎಲ್ಲರಿಗೂ ಗೊತ್ತಿರುವಂತದ್ದೇ.

ಆತನ ಬಾನಾಗಡಿಗಳೆಲ್ಲಾ ಬಯಲಾದಾಗ ಮಾಧ್ಯಮಗಳಲ್ಲಿ ಒಂದು ಸುದ್ದಿಯಾಯ್ತು. ಆತ ಒಬ್ಬ ಬ್ರಾಹ್ಮಣ. ತಾನೊಬ್ಬ ಬ್ರಾಹ್ಮಣ ಅಂತ ಹೇಳಿಕೊಂಡೇ ಆತ ಜನರನ್ನು ನಂಬಿಸಿದ. ಬ್ರಾಹ್ಮಣ ಸಭಾವನ್ನು ತನ್ನ ಉದ್ದೇಶಕ್ಕೆ ಬಳಸಿಕೊಂಡ.

ಇರಲಿ ಇಷ್ಟೆಲ್ಲಾ ಆದರೂ ನಾವು ಬ್ರಾಹ್ಮಣರೆಲ್ಲಾ ವಂಚಕರು, ದುಷ್ಟರು ಅಂತ ಸಾರಾಸಗಟಾಗಿ ತೀರ್ಮಾನಕ್ಕೆ ಬರಲು ಸಾಧ್ಯವಿಲ್ಲ. ಬ್ರಾಹ್ಮಣರನ್ನಷ್ಟೇ ಅಲ್ಲ. ಹಿಂದುಳಿದವರು ದಲಿತರು ಯಾವುದೇ ಸಮುದಾಯ ಇರಲಿ ಕೆಲವೇ ಹಿಡಿಯಷ್ಟು ಜನರು ಮಾಡುವ ತಪ್ಪಿಗಾಗಿ ದುಷ್ಟರು, ವಂಚಕರು ಅಪರಾಧಿಗಳು ಅಂತ ಯಾರನ್ನೂ ನಾವು ದೂರುವುದು ಸಾಧ್ಯವಿಲ್ಲ. ಹಿಂದೂಗಳೆಲ್ಲಾ ಪೂರ್ಣವಾಗಿ ಸಭ್ಯಸ್ಥರು, ಪ್ರಾಮಾಣಿಕರು, ದೇಶಪ್ರೇಮಿಗಳು ಅಂತ ಹೇಳುವುದಕ್ಕೆ ಯಾವ ಆಧಾರವೂ ಇಲ್ಲ. ಇದಕ್ಕೆ ವಿರುದ್ಧವಾದ ಸಾಕ್ಷಿಗಳು ನಮಗೆ ಸಾವಿರಾರು ಸಿಗುತ್ತವೆ.

ಬ್ರಾಹ್ಮಣ, ದಲಿತ, ಶೂದ್ರ ಇತರರಿಗೆ ಅನ್ವಯಿಸುವ ಮಾನದಂಡವೇ ಮುಸ್ಲಿಮರಿಗೂ ಅನ್ವಯಿಸುತ್ತದೆ ಮತ್ತು ಅನ್ವಯಿಸಬೇಕು.

ಆದರೆ ಮುಸ್ಲಿಮರ ಪ್ರಶ್ನೆ ಬಂದಾಗ ಇದೇ ರೀತಿ ಯೋಚಿಸಲು ಎಷ್ಟೋ ಜನಕ್ಕೆ ಸಾಧ್ಯವಾಗುವುದಿಲ್ಲ.

ನಮ್ಮ ದೇಶದಲ್ಲಿ ಅತ್ಯಂತ ವ್ಯವಸ್ಥಿತವಾಗಿ ಮುಸ್ಲೀಮರು ಎಂದರೆ ಭಯೋತ್ಪಾದಕರು, ದೇಶದ್ರೋಹಿಗಳು ಎಂಬ ಭಾವನೆಯನ್ನು ಹರಡುತ್ತಾ ಬರಲಾಗಿದೆ. ಇತ್ತೀಚಿನ ವರ್ಷಗಳಲ್ಲಿ ಇದೊಂದು ಜಾಗತಿಕ ವಿದ್ಯಮಾನವಾಗಿ ಕಂಡುಬರುತ್ತಿದೆ.

ಈ ಎಲ್ಲ ಹಿನ್ನೆಲೆಯಲ್ಲಿ ಹಲವು ಮುಸ್ಲಿಂ ಸಂಘಟನೆ, ಸಂಘ ಸಂಸ್ಥೆಗಳು ಒಂದಾಗಿ ಭಯೋತ್ಪಾದನೆಯ ವಿರುದ್ಧ ಪತ್ವ ಹೊರಡಿಸುವುದು ಸೇರಿದಂತೆ ಹಲವು ಭಯೋತ್ಪಾದನಾ ವಿರೋಧಿ ಕ್ರಮಗಳಿಗೆ ಮುಂದಾಗಿವೆ. ಆ ಮೂಲಕ ದಾರಿ ತಪ್ಪಿರುವ ಮುಸ್ಲಿಂ ಯುವಕರನ್ನು ಸರಿ ದಾರಿಗೆ ತರುವ ಪ್ರಯತ್ನ ಅವರದ್ದು.



ಜಮಾತೆ ಉಲೇಮಾ-ಇ-ಹಿಂದ್ ಈ ವಿಚಾರದಲ್ಲಿ ಮುಂಚೂಣಿಯಲ್ಲಿರುವ ಸಂಘಟನೆ. ಯಾವ ವಿಚಾರ ಇರಲಿ ಧಾರ್ಮಿಕ ಪತ್ವಾ ಹೊರಡಿಸುವ ಕ್ರಮ ಆಧುನಿಕ ಪ್ರಜಾಪ್ರಭುತ್ವದ ಸಂದರ್ಭದಲ್ಲಿ ಅಗತ್ಯವೇ, ಸರಿಯೇ ಸಾಧುವೇ ಎಂಬ ಜಿಜ್ಞಾಸೆಗಳಿದ್ದೇ ಇವೆ. ಇರಲಿ.

ಆದರೂ ಮುಸ್ಲೀಮರೆಲ್ಲಾ ಭಯೋತ್ಪಾದಕರು, ಮುಸ್ಲಿಂ ಧಾರ್ಮಿಕ ಸಂಸ್ಥೆಗಳು, ಮದರಸಗಳು ಇವೆಲ್ಲವೂ ಭಯೋತ್ಪಾದಕತೆಯನ್ನು ಪೋಷಿಸಿ ರಕ್ಷಿಸುವಂಥವು ಎಂಬ ವ್ಯಾಪಕ ಅಪಪ್ರಚಾರಗಳು ನಡೆಯುತ್ತಿರುವಾಗ ಈ ಕ್ರಮ ಸ್ವಾಗತಾರ್ಹ ಎನಿಸುತ್ತದೆ.

ಮೇ 31, 2008ರಂದು ದೆಹಲಿಯಲ್ಲಿ ಒಂದು ಬೃಹತ್ ಅಂತರರಾಷ್ಟ್ರೀಯ ಭಯೋತ್ಪಾದನಾ ವಿರೋಧಿ ಸಮಾವೇಶವನ್ನು ಸಂಘಟಿಸಲಾಗಿತ್ತು. ದೊಡ್ಡ ಸಂಖ್ಯೆಯಲ್ಲಿ ಮುಸ್ಲೀಮರು ಅದರಲ್ಲಿ ಭಾಗವಹಿಸಿದ್ದಾರೆ. ಈ ಸಮಾವೇಶ ಹಲವು

ಪುಟ 10ಕ್ಕೆ

ನಾಗರೀಕ (?) ಸಣ್ಮಾನ

"ಅಲೆಲೆ ಲೆ ಲೇ......, ಏನ್ ಸಿವಾ ಇದು, ನಿಮ್ಮೂರು ಜಗಮಗಿಸ್ತಾಯಿದೆ., ಇದೇನ್ ದೀಪಾಲಂಕಾರ......, ಇದೇನ್ ತೋರಣಗಳು...., ಊರೆಲ್ಲ ಮದ್ವೆ ಎಣ್ಣಂಗೆ ಅಲಂಕಾರ ಆಗದೆ..., ಅಬ್ಬಬ್ಬಬ್ಬಬ್ಬಾ......, ಇದೇನು ಬ್ಯಾನರುಗಳು ನೋಡಾಕೆ ಎರಡು ಕಣ್ಣು ಸಾಕಾಗಾಕಿಲ!. ಏನ್ ನಿಮ್ಮೂರಾಗೆ ಮಾರಾಜ್ರು ಮದ್ವೆನೋ ಏನ್ಕತೆ?"

"ಮಾರಾಜ್ರು ಮದುವೆ ಅಲ್ಲ ಕಣಣ್ಣ, ಅದ್ಕಿಂತಾ ಬಾರಿ ದೊಡ್ಡದು, ಈ ತರ ಅಲಂಕಾರ ಈ ಊರಲ್ಲಿ ಹಿಂದೆಂದೂ ಆಗಿರ್ನಿಲ್ಲ ಬುಡು,"

"ಮದ್ವೆಗಿಂತಾ ದೊಡ್ಡದು ಅಂದ್ಯಲ್ಲ, ಅದೇನ್ಲಾ ಅದು? "

"ಮಾರಾಜ್ರಿಗೆ ಪಟ್ಟಾಬಿಸೇಕ ಆಯ್ತಲ್ಲ, ಅದ್ಕೇ.., ಈಗ 'ನಾಗರೀಕ ಸಣ್ ಮಾನ ಕಣ್ ಸಿವಾ.....,"


"ಔದಾ...., ಅಂಗಂದ್ರೇನಣ್ಣಾ...?".

"ಸಣ್ ಮಾನ ಅಂದ್ರೇ...., ಮಾರಾಜ್ರುನ್ನ ಸಿಂಮ್ಮಾಸನದ ಮ್ಯಾಗೆ ಕುಂಡ್ರುಸೀ...., ಆರ ಆಕದೂ..., ಸಾಲು ಒದಿಸೋದು...., ಅಣ್ಣು ಪಣ್ಣು ಕೊಡದು..., ಕಿರೀಟ ಇಕ್ಕದು..., ಆಮೇಲೆ ಕತ್ತಿನೋ , ಗದೇನೋ, ತ್ರಿಸೂಲಾನೋ...., ಬೆಳ್ಳಿದೋ...., ಚಿನ್ನದ್ದೋ..., ಯಾತ್ರುದ್ದೋ.., ಕೊಡಾದು.., ಆಮೇಲೆ..., ಇವರೇ ಇಂದ್ರ ಚಂದ್ರ..., ಸೊರ್ಗನೇ ಕೆಡವಿ ಇಲ್ಲಿಗೇ ನಮ್ಮೂರ್‌ಗೆ ತಂದು ಮಡುಗ್ತಾರೆ ಅಂತ ಏಳದು...,,,"

"ಅಯ್ಯಯ್ಯೋ.., ಏತ್ತುಚ್ಚೆ ಉಯ್ಯ್ ಕಂಡು ಓದಂಗೆ ಏಳ್ತಾನೇ ಇದೀಯಲ್ಲ, ಸೊಲ್ಪ ನಿಲ್ಸು. ಸಣ್ ಮಾನ ಅಂದ್ರೆ ಇವೆಲ್ಲ ಸರಿ. ಈ "ನಾಗರೀಕ" ಸಣ್ ಮಾನ ಅಂದರೆ ಏನ್ಲಾ?"

ಈಟೊಂದು ಲಕ್ಸಾಂತ್ರ ರುಪಾಯಿ ಅಲಂಕಾರಕ್ಕೆ ಸುರಿದವರಲ್ಲ, ಈ ಮಾರಾಜ್ರು ಅಪ್ಪಾಜಿ ಬಾಳ ಸ್ರೀಮಂತ್ರಾ?"

"ಅಲಂಕಾರಕ್ಕೆ ಲಕ್ಸಾಂತ್ರ ರುಪಾಯಿ ಚೆಲ್ಲೋಕೆ ಅವರ ಅಪ್ಪಾಜಿ ಯಾಕ್ಲಾ ಸ್ರೀಮಂತ ಆಗಬೇಕು? ಈಗ ನಡಿದಿದ್ದು "ನಾ ಗ ರೀ ಕ" ಸಣ್ ಮಾನ. ಅಂದ್ರೆ, ನಾಗರೀಕರು ಬೆವ್ರು, ರಕ್ತ ಸುರಿಸಿ ದುಡಿದದ್ದಕ್ಕೆ ತೆರಿಗೆ ಅಂತ ಕಟ್ಟಿರ್ತಾರಲ್ಲ, ಆ ದುಡ್ಡನ್ನು ಇಂಗೆ ಚಿಂದಿ ಉಡಾಯ್ಸಿ ಮಾಡ್ತಾರಲ್ಲ ಇದುಕ್ಕೇ..., ನಾ ಗ ರೀ ಕ ಸಣ್ ಮಾನ ಅನ್ನಾದು ಕಣ್ ಸಿವಾ".



"ಅಲ್ಲ ಕಣಣ್ಣಾ.., ಬೆಲೆ ಏರಿಕೆ ಅಂತ ಜನ ವದ್ದಾಡ್‌ತಾ ಅವ್ರೆ..., ಬೀಜಿಲ್ಲ, ಗೊಬ್ರಿಲ್ಲ ಅಂತ ರೈತ್ರು ಸಾಯ್ತಾವ್ರೆ.,, ಅಂತಾದ್ರಾಗೆ ಇಂತಾ ಅದ್ದೂರಿ ಸಣ್ ಮಾನ....,?"

"ಅಲ್ಲ ಸಿವಾ..., ದಿನಾ ಸಾಯೋರಿಗೆ ಅಳೋರ್‍ಯಾರು? ಅಂತ ಅಳೇ ಗಾದೇನ ಕೇಳಿಲ್ವಾ? ಅಳ್ತಾ ಕೂತ್ಕಂಡಿರಕ್ಯಾಯ್ತದಾ? ಬೀಜೇಪಿಯೋ ಪರಿಆರ ಅಂತ ವಸಾ ಗಾದೆ ಕೇಳಿಲ್ವಾ? ಸತ್ತೋರಿಗೆ ಪರಿಹಾರದ ಆದೇಸನೋ , ತನಿಕೆ ಆದೇಸನೋ ಏನೋ ಒಂದು ಮಾಡಿದ್ರಾಯ್ತು. ಅದಿಕಾರಕ್ಕೇರಿ ಕುಂತ್ ಮ್ಯಾಗೆ ಸಣ್ ಮಾನ ಗಿಣ್ಮಾನ ಅಂತ ಏನೂ ಇಲ್ಲದಿದ್ರೇ ಏನ್ಮಾಡಕ್ಕೇ?"

"ರಾಜ್ಯ ಆಳೋದು ಇಸ್ಟು ಸುಲಬ ಅಂತ ಗೊತ್ತಿದ್ರೆ .., ನಾನೇ ರಾಜ ಆಗ್ಬೋದಾಗಿತ್ತು ಕಣಣ್ಣಾ.,"

"ಇದೇನ್ ಮಾತೂಂತ ಆಡ್ತಿಯಾ ಸಿವಾ...,?"

"ಮತ್ತಿನ್ನೇನೂ..,'ಒಳ್ಳೇದಾಗಿದ್ದೆಲ್ಲಾ ನನ್ನಿಂದನೇ' ಅನ್ನಾದು, 'ಅನಿಸ್ಟಕ್ಕೆಲ್ಲ ರಾಮೇಶ್ವರ ಕಾರಣ' ಅನ್ನೋದು ..,'ಕುಣೀಲಾರದ್ದಕ್ಕೆ ಕೇಂದ್ರ ಸರಕಾರದ ಮಲತಾಯಿ' ಅನ್ನೋದು,"

"ಸುಮ್ಕಿರು ಸಿವಾ, ಅಂಗೆಲ್ಲ ಅನ್ನಬಾರ್ದು, ಈ ರಾಜ್ಯ ಆಳೋದು, ಅದಿಕಾರ ಅನುಬೋಸೋದು, ತನಿಕೆ ಆದೇಸ ಮಾಡದು ಇವೆಲ್ಲ ಅಸ್ಟು ಸುಲಬ ಅಲ್ಲ, ಬುದ್ದಿವಂತಿಕೆ ಬೇಕು, ಬುದ್ದಿವಂತಿಕೆ."

"ಔದೌದು, ಬಾಳ ಕಸ್ಟ, ಬಾಳ ಬುದ್ದಿವಂತಿಕೆ ಬೇಕು! ಆ ಸಾಸಕ್ರು ಎಂಡ್ರು ಇಚಾರದಾಗೆ, ಏಸ್ಟು ಬುದ್ದಿವಂತಿಕೆ ಕರ್ಚಾತು, ಏನು ಅದಿಕಾರ ಚಲಾವಣೆ ಅಬ್ಬಬ್ಬಬ್ಬಾ,,,,"

"ಯಾಕ್ ಸಿವಾ ಇಂಗ್'ಂತಿದೀಯ?"

"ಊ ಮತೆ ಎಲ್ಲ 'ಸಮ' ಮಾಡಕೆ ಪೋಲೀಸೋರ ಬಾಯಿ ಮುಚ್ಚಿಸಿ, ಜನಗಳನ್ನ, ಟೀವಿಯೋರನ್ನ, ಪೇಪರ್‍ನೋರನ್ನ, ಜೂನ್ ತಿಂಗಳಲ್ಲಿ 'ಏಪ್ರಿಲ್ ಪೂಲ್' ಮಾಡದು ಅಂದ್ರೆ ಸುಮ್ಕೆನಾ?" ಆ ಸಾಸಕ್ರು ಬ್ಯಾರೇ ಪಕ್ಸದೋರಾಗಿದ್ರೇ....., ??".

"ಅದೇನಣ್ಣ ಅದು, ಜೂನಲ್ಲಿ 'ಏಪ್ರಿಲ್ ಪೂಲು' ಅಂತೇನೋ ಅಂದ್ಯಲ್ಲ?"

"ಊ ಕಣ್ ಸಿವಾ..., ಸಾಸುಕ್ರು ಎಂಡ್ರು ಕಾಣೆ ಆಗಿದ್ರಲ್ಲ, ಆಗ 'ಮಾಲೂರಲ್ಲಿ ಸಿಕ್ಕವರೆ', 'ಆ ಊರಲ್ಲಿ ಸಿಕ್ಕವರೆ', 'ಈ ಊರಲ್ಲಿ ಸಿಕ್ಕವರೆ', 'ಎಲ್ಲ ನೆಟ್ ಗಾಯ್ತದೆ'ಅಂಗೆ ಇಂಗೆ ಅಂತ ಕತೆ ಏಳಿದ್ರು, ನಮ್ಮ ಟೀವಿಯೋರು, ಪೇಪರ್‍ನೋರು ಸೊಂತ ಬುದ್ದಿ ಇಲ್ಲೋರಂಗೆ ಅವ್ರು ಏಳಿದ್ದೆಲ್ಲ ಕೇಳಿ ನಮಗೆ ಊದಿದ್ರು. ಆದ್ರೆ, ಆ ಯಮ್ಮ ದಿಲ್ಲೀಲಿ ಎಣ ಆಗಿತ್ತು, ಆಮೇಲೆ ಅವೆಲ್ಲ ಸುಮ್ಕೆ ಏಳಿದ್ದು ಅಂದ್ರು, ಪೂಲ್ ಮಾಡದು ಅಂದ್ರೆ ಇಂಗೇ ಅಲ್ವಾ?"

"ಸುಮ್ಕಿರಣ್ಣ, ಅಂಗೆಲ್ಲ ಅನ್ಬೇಡ, ತನಿಕೆ ಅಂದ್ರೆ, ಕರಟ್ಟಾಗೇ ಮಾಡತರೇ, ಈಗ ನೋಡು ರೈತ ಸತ್ರೇ, ಪರಿಆರ ಕೊಡೋ ಮುಂಚೆ, ಅವನು ರೈತ ಔದೋ ಅಲ್ಲವೋ, ಅವ್ನ ತಕ ಜಮೀನಿತ್ತೋ ಇಲ್ವೋ, ಸಾಲ ಇತ್ತೋ ಇಲ್ವೋ, ಸಾಯ ಮುಂಚೆ ಅವ್ನ ಜೀವಂತ ಇದ್ನೋ ಇಲ್ವೋ., ಅಂತೆಲ್ಲ ತನಿಕೆ ಮಾಡಿ ಆಮೇಲೆ ಪರಿಹಾರ ಕೊಡತರಂತೆ."

"ಊ ಕಣ್ ಸಿವಾ ತನಿಕೆ ಮಾಡಬೇಕು ಮತೆ, ಬೀಜೇಪಿಯೋ ಪರಿಆರ ಅಂತ, ಸತ್ ಸತ್ತೋರಿಗೆಲ್ಲ ಪರಿಆರ ಕೊಡಾಕಾಯ್ತದ? ಅಂಗೆಲ್ಲ ಅಣ ಪೋಲು ಮಾಡಕೆ ಅದೇನು ನಾ ಗ ರೀ ಕ ಸಣ್ ಮಾನನ? "

"ಅಂತೂ ನೀರು ಬರದಿದ್ರೂ, ನೀರಿನ ತೆರಿಗೆ, ರಸ್ತೆ ಇಲ್ದಿದ್ರೂ ರಸ್ತೆ ತೆರಿಗೆ ಅಂತೆಲ್ಲ ಕಟ್ಟಿದ್ದು ಇಂಗೆ ನೀರಲ್ಲಿ ಓಮ ಮಾಡಿದಂಗಾತು, ತೆರಿಗೆ ಕಾಸೆಲ್ಲ ಸಣ್ ಮಾನಕ್ಕೆ ಲೂಟಿ ಆತು ಅಂತೀಯಾ?"

"ಆದ್ರೂ, ನಾಕ್ ಜನಕೆ ಉಪಕಾರ ಆತು, ನಾಕ್ ಜನ ಬದಿಕ್ಕತರೆ , ಸಾಕ್ ಬುಡು,"

"ಅದೇನು ಸರ್‍ಯಾಗಿ ಏಳ್ ಸಿವಾ".

"ಅದೇ, ಡೆಕೋರೇಸನ್ ಮಾಡಿದ ಕಂತ್ರಾಟುದಾರ್ರು, ಮದ್ಯಸ್ತ್ರು, ಅವ್ರು ಇವ್ರೆಲ್ಲ ಬದಿಕ್ಕತರೆ, ಆ ಪ್ಲೆಕ್ಸ್ ಬ್ಯಾನರ್ ಇರ್ತವಲ್ಲ ಅವು ಬಾಳ ಚನಾಗಿರ್ತವೆ, ಗುಡುಸ್ಲು ಮ್ಯಾಲೆ ಸೂರು ಹೊದಿಸಿದ್ರೆ, ಈ ಮಳೆಗಾಲದಲ್ಲಿ ಒಂಚೂರು ಸೋರಾಕಿಲ್ಲ ಕಣಣ್ಣಾ......" ○

ರಸಗೊಬ್ಬರದ ಅಭಾವ ಯಾಕೆ ಬಂದಿದೆ? ಅದರಲ್ಲಿ ಕೇಂದ್ರದ ಪಾತ್ರವೇನು, ರಾಜ್ಯದ ಪಾತ್ರವೇನು? ಬೆಂಗಳೂರಿನಲ್ಲಿ ನಡೆದ ವಿಚಾರಸಂಕಿರಣದ ವರದಿ

ರಸಗೊಬ್ಬರ ಅಭಾವ ರೈತರ ಎದೆಗೆ ಗುಂಡು ಸರ್ಕಾರದ ಹೊಣೆಗೇಡಿತನ



ರೈತನ ಶವದೊಂದಿಗೆ ಪ್ರತಿಭಟನೆ. ದಾವಣಗೆರೆಯಲ್ಲಿ

ಕೇಂದ್ರದಲ್ಲಿ ಆಡಳಿತ ನಡೆಸಿದ ಹಿಂದಿನ ಎನ್.ಡಿ.ಎ ಹಾಗೂ ಈಗಿನ ಯುಪಿಎ ಸರ್ಕಾರಗಳು ಅನುಸರಿಸಿದ ಕೃಷಿ ವಿರೋಧಿ ನೀತಿಗಳಿಂದಾಗಿ ರೈತ ಸಮುದಾಯ ಆತ್ಮಹತ್ಯೆ ದಾರಿ ಹಿಡಿಯಬೇಕಾದ ಪರಿಸ್ಥಿತಿ ಬಂದೊದಗಿದೆ ಎಂದು ಅಖಿಲ ಭಾರತ ಕಿಸಾನ್ ಸಭಾದ ಪ್ರಧಾನ ಕಾರ್ಯದರ್ಶಿ ಕೆ.ವರದರಾಜನ್ ವಿಶ್ಲೇಷಿಸಿದರು. ಬೆಂಗಳೂರಿನ ಶಾಸಕರ ಭವನದಲ್ಲಿ ನಡೆದ 'ರಸಗೊಬ್ಬರ ಕೊರತೆಗೆ ಕಾರಣಗಳೇನು? ಇದರ ಹೊಣೆಗಾರಿಕೆ ಯಾರದು? ಪರಿಹಾರಗಳೇನು? ಎಂಬ ವಿಷಯ ಕುರಿತು ವಿಚಾರ ಸಂಕಿರಣದಲ್ಲಿ ಪಾಲ್ಗೊಂಡು ಅವರು ಮಾತನಾಡುತ್ತಿದ್ದರು.

ಕಳೆದ ಹತ್ತು ವರ್ಷಗಳ ಹಿಂದೆ ರಾಷ್ಟ್ರಕ್ಕೆ ಅಗತ್ಯವಾದ ರಸಗೊಬ್ಬರವನ್ನು ನಾವೇ ಉತ್ಪಾದಿಸುತ್ತಿದ್ದೆವು.ಆದರೆ ಎನ್.ಡಿ.ಎ. ಅಧಿಕಾರಕ್ಕೆ ಬಂದ ಕೂಡಲೇ ರಸಗೊಬ್ಬರ ಉತ್ಪಾದನೆಗೆ ಕನಿಷ್ಠ




ವಿಚಾರಸಂಕಿರಣದಲ್ಲಿ ಭಾಗವಹಿಸಿದ್ದ ಜಿ.ವಿ.ಶ್ರೀರಾಮರೆಡ್ಡಿ, ಕೆ.ವರದರಾಜನ್, ಮಾರುತಿ ಮಾನ್ಪಡೆ, ಕೋಡಿಹಳ್ಳಿ ಚಂದ್ರಶೇಖರ್ ಮತ್ತು ಭೀಮುಶಿ ಕಲಾದಗಿ

ಆದ್ಯತೆಯನ್ನೂ ನೀಡಲಿಲ್ಲ. ಬದಲಾಗಿ ರಸಗೊಬ್ಬರ ಉತ್ಪಾದನೆ ಸಂಸ್ಥೆಗಳಿಗೆ ನೀಡಲಾಗುತ್ತಿದ್ದ ಸಹಾಯಧನವನ್ನು ನಿಲ್ಲಿಸಿತು. ಹೀಗಾಗಿ ಅಭಾವ ಸೃಷ್ಟಿಯಾಗಲು ಪ್ರಮುಖ ಕಾರಣ.

ದುರದೃಷ್ಟವಶಾತ್ ನಂತರ ಯುಪಿಎ ಸರ್ಕಾರ ಎನ್.ಡಿ.ಎ. ಹಾದಿಯಲ್ಲೇ ಸಾಗುತ್ತಿರುವುದರಿಂದ ಈ ಸಮಸ್ಯೆಗಳು ಇನ್ನಷ್ಟು ಬಿಗಡಾಯಿಸಿದೆ ಎಂದು ದೂರಿದರು ಮತ್ತು ಕಳೆದ 15 ವರ್ಷಗಳಿಂದ ರಸಗೊಬ್ಬರ ತಯಾರಿಕಾ ಕಂಪನಿಗಳಲ್ಲಿ ಹಣ ತೊಡಗಿಸಿಲ್ಲ. ಹೀಗಾಗಿ ಅನಿವಾರ್ಯವಾಗಿ ವಿದೇಶಗಳಿಂದ ಆಮದು ಮಾಡಿಕೊಳ್ಳಬೇಕಾಗಿದೆ. ಆದರೆ ದೇಶದಲ್ಲಿ ರಸಗೊಬ್ಬರದ ಉತ್ಪಾದನಾ ವೆಚ್ಚದ 4 ಪಟ್ಟು ಹೆಚ್ಚು ಹಣವನ್ನು ಕೊಟ್ಟು ಖರೀದಿ ಮಾಡಬೇಕಾಗಿದೆ. ಉದಾಹರಣೆಗೆ 1 ಕ್ವಿಂಟಾಲ್ ಡಿಎಪಿ 180 ಡಾಲರ್‌ನಿಂದ ಉತ್ಪಾದನೆ ಸಾಧ್ಯ. ಆದರೆ 920 ಡಾಲರ್ ಕೊಟ್ಟು ಖರೀದಿಸಲಾಗುತ್ತಿದೆ. ಅದೇ ರೀತಿ ಎಂಒಪಿ 120 ಡಾಲರ್‌ಗೆ ದೊರೆತರೆ ಅದಕ್ಕೆ 420 ಡಾಲರ್ ಕೊಡಬೇಕಿದೆ.


ರಸಗೊಬ್ಬರ ಉತ್ಪಾದನೆಗೆ ಅಗತ್ಯವಿರುವ ನಾಫ್ತಾ ಬೆಲೆಯೂ ಕೂಡ ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ದಿನೇ ದಿನೇ ಹೆಚ್ಚುತ್ತಿದೆ. ಪರಿಸ್ಥಿತಿ ಹೀಗಿರುವಾಗಲೇ ಕಲ್ಲಿದ್ದಲಿನಿಂದ- ರಸಗೊಬ್ಬರ ಉತ್ಪಾದಿಸುವ ತಂತ್ರಜ್ಞಾನವನ್ನು ಚೀನಾ ತೋರಿಸಿಕೊಟ್ಟಿದ್ದರೂ



ಈ ತಂತ್ರಜ್ಞಾನ ಬಳಸಲು ಮುಂದಾಗುತ್ತಿಲ್ಲ. ಆದರೆ ದೇಶದಲ್ಲಿ ಅಪಾರ ಪ್ರಮಾಣದಲ್ಲಿ ಕಲ್ಲಿದ್ದಲು ಭೂಗರ್ಭದಲ್ಲಿ ಅಡಗಿದೆ. ಚೀನಾದೇಶ ಶೇ.80 ರಷ್ಟು ರಸಗೊಬ್ಬರನ್ನು ಕೇವಲ ಕಲ್ಲಿದ್ದಲು ಮೂಲಕ ಉತ್ಪಾದಿಸುತ್ತಿದೆ. ಜೊತೆಗೆ ಕಲ್ಲಿದ್ದಲಿನ ಮೂಲಕ ಉತ್ಪಾದಿಸಿದರೆ ಉತ್ಪಾದನಾ ವೆಚ್ಚವೂ ಕಡಿಮೆಯಾಗಲಿದೆ. ಉದಾಹರಣೆಗೆ ನಾಫ್ತಾ ಆಮದು ಮಾಡಿಕೊಂಡು ಯೂರಿಯಾ ಉತ್ಪಾದನೆ ಮಾಡಿದರೆ ಕ್ವಿಂಟಾಲ್‌ಗೆ 220 ಡಾಲರ್ ತಗಲುತ್ತದೆ. ಅದೇ ಕಲ್ಲಿದ್ದಲಿನ ಮೂಲಕ ಉತ್ಪಾದಿಸಿದರೆ ಕೇವಲ 110 ರೂ. ತಗಲುತ್ತದೆ. ಅಂದರೆ ಅರ್ಧದಷ್ಟು ಕಡಿಮೆ ಎಂದಾಯಿತು. ಆದರೆ ಅಪಾರ ಪ್ರಮಾಣದ ಕಲ್ಲಿದ್ದಲನ್ನು ವಿದೇಶಕ್ಕೆ ರಫ್ತು ಮಾಡುತ್ತಿರುವುದು ಮೂರ್ಖತನದ ಪರಮಾವಧಿ ಎಂದು ವಿಶ್ಲೇಷಿಸಿದರು.

ವಿಚಾರ ಸಂಕಿರಣದಲ್ಲಿ ಪಾಲ್ಗೊಂಡು ಮಾತನಾಡಿದ ಮಾಜಿ ಶಾಸಕ ಜಿ.ವಿ.ಶ್ರೀರಾಮರೆಡ್ಡಿಯವರು 'ಹಸಿರು ಶಾಲು ಹೊದ್ದು ರೈತರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದ ಯಡಿಯೂರಪ್ಪ ಕೇವಲ 15 ದಿನಗಳಲ್ಲೇ ಗೋಲಿಬಾರ್ ನಡೆಸಿ ರೈತರನ್ನು ಬಲಿತೆಗೆದುಕೊಂಡಿದ್ದು ಭವಿಷ್ಯದ ಅಧಿಕಾರಾವಧಿಯಲ್ಲಿ ನಡೆಸಬಹುದಾದ ದೌರ್ಜನ್ಯವನ್ನು ಸೂಚಿಸುತ್ತದೆ ಎಂದು ಗೋಲಿಬಾರ್

ಪುಟ 11ಕ್ಕೆ



ರಸಗೊಬ್ಬರ ಮತ್ತು ಕೃಷಿ ಬಿಕ್ಕಟ್ಟು



ರಸಗೊಬ್ಬರ ಸಿಗದೆ ಆತ್ಮಹತ್ಯೆಗೆ ಶರಣಾದ ರೈತ

ರಸಗೊಬ್ಬರ ಉತ್ಪಾದನೆಯ ಮೂಲಕ ಧಕ್ಕೆ ಮಾಡುವಂತಹ ನೀತಿಯನ್ನು ರೂಪಿಸಿದ ಕೇಂದ್ರದ ಕಾಂಗ್ರೆಸ್‌ನ ನರಸಿಂಹರಾಯರ ಸರ್ಕಾರ, ಅದೇ ನೀತಿಯನ್ನು ಯಥಾವತ್ ಜಾರಿ ಮಾಡಿದ ವಾಜಪೇಯಿ ನೇತೃತ್ವದ ವಾಜಪೇಯಿ ಸರ್ಕಾರಕ್ಕೆ ಜನತೆ ಕೊಟ್ಟ ಪೆಟ್ಟನ್ನು ನೋಡಿಯೂ ಪಾಠ ಕಲಿಯದೇ ರಸಗೊಬ್ಬರ ಸಬ್ಸಿಡಿ ಕಡಿತ ನೀತಿ ಮುಂದುವರೆಸಿರುವ ಮನ'ಮೋಹನ' ಸಿಂಗ್ ನೇತೃತ್ವದ ಯುಪಿಎ ಸರ್ಕಾರ, ಇರುವ ರಸಗೊಬ್ಬರವನ್ನು ಸರಿಯಾಗಿ ಹಂಚದೆ ಕೈ ಚೆಲ್ಲಿ ಗೊಬ್ಬರದ ಕಾಳಸಂತೆ ಕೋರರ ಜೊತೆಗೆ ಕೂತಿರುವ ಯಡಿಯೂರಪ್ಪನವರ ನೇತೃತ್ವದ 'ರೈತಪರ ಸರ್ಕಾರ' -ಯಾರನ್ನು ದೂರುವುದು.

ಎಲ್ಲರೂ ಅಪರಾಧಿಗಳೇ, ಒಟ್ಟು ಪರಿಣಾಮ ಎಂದರೆ ಮಾರುಕಟ್ಟೆ ಮೌಲ್ಯ ಏನಾದರೂ ಇರಲಿ ವಾಸ್ತವವಾಗಿ ಬೆಲೆ ಕಟ್ಟಲಾದಂತಹ ಮನುಷ್ಯ ಜೀವನಾಧಾರವಾದ ಆಹಾರವನ್ನು ಉತ್ಪಾದಿಸಿಕೊಡುವ ರೈತ ಮಾತ್ರ ಸಾಲು ಸಾಲು ಆತ್ಮಹತ್ಯೆಗೆ ಶರಣಾಗುತ್ತಿದ್ದಾನೆ.

ಒಂದು ಕಡೆ ಸಾಲಬಾಧೆ, ಇದೀಗ ತೀವ್ರಗೊಳ್ಳುತ್ತಿರುವುದು ರಸಗೊಬ್ಬರ ಕೊರತೆಯೆಂಬ ಬಾಧೆ. ಜೂನ್ 20ನೇ ತಾರೀಖು 4 ಜನ ರೈತರು ಆತ್ಮಹತ್ಯೆ ಶರಣಾಗಿದ್ದಾರೆ. ಜೂನ್ 21 ರಂದು ಒಬ್ಬರು ರೈತ ಮಹಿಳೆ ಸೇರಿದಂತೆ ನಾಲ್ಕು ಜನ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಎರಡೇ ದಿನದಲ್ಲಿ 8 ಜನ ರೈತರು ಹೆಣವಾದರು ಎಂದರೆ ಬಿಕ್ಕಟ್ಟು ಪಡೆದುಕೊಳ್ಳುತ್ತಿರುವ ತೀವ್ರತೆ ಏನು ಎಂದು ಅರ್ಥವಾಗುತ್ತದೆ.

ಪಕ್ಕದ ಕೇರಳ ರಾಜ್ಯದಲ್ಲೂ ವಯನಾಡು ಮತ್ತಿತರ ಜಿಲ್ಲೆಗಳಲ್ಲಿಯೂ ಇದೇ ರೀತಿ ಸಾಲು ಸಾಲು ಆತ್ಮಹತ್ಯೆ ಸಂಭವಿಸುತ್ತಿತ್ತು. ಇತ್ತೀಚೆಗೆ ಅಧಿಕಾರಕ್ಕೆ ಬಂದ ಸಿಪಿಐ(ಎಂ) ನೇತೃತ್ವದ ಎಲ್‌ಡಿಎಫ್ ಸರ್ಕಾರ ಸಾಲ ಮನ್ನಾ ಕ್ರಮವನ್ನು ವಿಶೇಷ ಪರಿಹಾರ ಕ್ರಮಗಳನ್ನು ಕೈಗೊಂಡಿದ್ದರಿಂದ ಆತ್ಮಹತ್ಯೆ ತೀವ್ರವಾಗಿ ತಗ್ಗಿದೆ. ಇಲ್ಲಿ ಸಾಲ ಮನ್ನಾ ಮನ್ನಾ ಎಂದರೆ ರಾಷ್ಟ್ರೀಕೃತ ಅಥವಾ ಸಹಕಾರಿ ಬ್ಯಾಂಕಿನ ಸಾಲ ಮನ್ನಾ ಎಂದರ್ಥ. ಆದರೆ ಕೇರಳದಲ್ಲಿ ಸಾಲ ಮನ್ನಾ ಎಂದಾಗ ಸರ್ಕಾರ ರೈತರ ಖಾಸಗಿಯವರಿಂದ ತೆಗೆದುಕೊಂಡ ಸಾಲಕ್ಕು ಅನ್ವಯಿಸಿತು. ಈ ವಿಷಯಕ್ಕಾಗಿ ಪರಿಶೀಲಿಸಿ ಪರಿಹಾರ ನೀಡಲು ಒಂದು ಪ್ರತ್ಯೇಕ ಆಯೋಗವನ್ನೇ ರಾಜ್ಯ ಸರ್ಕಾರ ರಚಿಸಿತು.

ಇಲ್ಲಿ ಸರ್ಕಾರದ ಸಾಲ ಮನ್ನಾ ಅಲ್ಪ ಪ್ರಮಾಣದ್ದು, ಖಾಸಗಿ ಸಾಲಕ್ಕೆ ಇಲ್ಲಿ ಯಾವ ಪರಿಹಾರ ಇಲ್ಲ. ಸರ್ಕಾರದ ಕ್ರಮಗಳು ರೈತರಲ್ಲಿ ಭರವಸೆ ತುಂಬಲಿಲ್ಲ. ಆತ್ಮಹತ್ಯೆಗಳು ನಡದೇ ಇದೆ. ಯಡಿಯೂರಪ್ಪ ಸರ್ಕಾರದ ಕ್ರಮ ರೈತರಲ್ಲಿ ಎಷ್ಟು ಭರವಸೆ ತುಂಬಿದೆ ಎಂಬುದಕ್ಕೆ ಜೂನ್ 20 ತಮ್ಮ ಸ್ವಂತ ಜಿಲ್ಲೆ ಶಿವಮೊಗ್ಗಕ್ಕೆ ಯಡಿಯೂರಪ್ಪ ಭೇಟಿ ಕೊಡುವ ದಿನದಂದೇ, ಮುಖ್ಯಮಂತ್ರಿಗಳ ಸ್ವಂತ ಕ್ಷೇತ್ರ ಶಿಕಾರಿಪುರದಲ್ಲಿ ರೈತ ಆತ್ಮಹತ್ಯೆ ಮಾಡಿಕೊಂಡಿರುವುದೇ ಸಾಕ್ಷಿ. ಯಡಿಯೂರಪ್ಪ ಎಲ್ಲಿದಕ್ಕೂ ಕೇಂದ್ರ ಸರ್ಕಾರದ ಮೇಲೆ ಗೂಬೆ ಕೂರಿಸಿ ಕೈ ತೊಳೆದುಕೊಳ್ಳಲು ಪ್ರಯತ್ನಿಸುತ್ತಾರೆ. ಹೇಗಾದರೆ, ಸಮಸ್ಯೆಗೆ ಪರಿಹಾರವಿದೆಯೇ?

ಉದ್ಯೋಗ ಖಾತ್ರಿಗೊಳಿಸಿದ 'ಜನವಾದಿ'

ನಿರಂತರವಾಗಿ ಭ್ರಷ್ಟಾಚಾರದ ಹಗರಣಗಳಲ್ಲಿ ಸಿಲುಕಿದ್ದ ಹಟ್ಟಿ ಗ್ರಾಮ ಪಂಚಾಯತಿ ಕಳೆದ ಹಲವು ವರ್ಷಗಳಿಂದ ಅಧ್ಯಕ್ಷ ಉಪಾಧ್ಯಕ್ಷರು ಇಬ್ಬರೂ ಚೆಕ್ ಮೇಲೆ ಸಹಿ ಮಾಡುವ ಅಧಿಕಾರ ಕಳೆದುಕೊಂಡಿದ್ದರು. ಇಂತಹ ವಿಶೇಷ ಪರಿಸ್ಥಿತಿಯಲ್ಲಿ ಜನವಾದಿ ಮಹಿಳಾ ಸಂಘ ಮತ್ತು ಕರ್ನಾಟಕ ಪ್ರಾಂತ ರೈತ ಸಂಘ ಜಂಟಿಯಾಗಿ ಗ್ರಾಮ ಪಂಚಾಯತಿ ಮುಂದೆ 5 ದಿನಗಳ ಅಹೋರಾತ್ರಿ ಧರಣಿ ನಡೆಸಿತ್ತು. ಪರಿಣಾಮವಾಗಿ ಪಕ್ಕದ ಗ್ರಾಮಪಂಚಾಯತ್ ರೋಡಲಬಂಡಾ ವ್ಯಾಪ್ತಿಯಲ್ಲಿ ಬರುವ ತವಗ ಗ್ರಾಮದ ಊರಕೆರೆ ಹೂಳೆತ್ತುವ ಕಾಮಗಾರಿ ಪಡೆಯಲಾಗಿತ್ತು. ಆದರೆ ಕೂಲಿ ಹಣ ನೀಡದಿರುವುದರಿಂದ ಅದನ್ನು ಪಡೆಯಲು ಗ್ರಾಮ ಪಂಚಾಯತ ಮುತ್ತಿಗೆ, ರಸ್ತೆ, ತಡೆ, ತಾಲ್ಲೂಕು ಪಂಚಾಯತಿ ಮುತ್ತಿಗೆಯಂತಹ ಧೀರೋದಾತ್ತ ಹೋರಾಟಗಳನ್ನು ಮಾಡಿ ಯಶಸ್ವಿಯಾಗಿತ್ತು.

ಕಳೆದ ವರ್ಷದಲ್ಲಿ ನೂತನ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಆಯ್ಕೆಯಾಗಿ ಕಳೆದುಕೊಂಡ ಅಧಿಕಾರ ಪಂಚಾಯತ ಮರಳಿ ಪಡೆಯಿತು. ತಕ್ಷಣವೇ ಜನವಾದಿ ಮಹಿಳಾ ಸಂಘ ಮತ್ತು ಕರ್ನಾಟಕ ಪ್ರಾಂತ ರೈತ ಸಂಘ ಜಂಟಿ ಸಭೆ ಸೇರಿಸಿ ಉದ್ಯೋಗಕ್ಕಾಗಿ ಅರ್ಜಿ ಹಾಕಿಸಲು ತೀರ್ಮಾನಿಸಿದೆವು. ಪ್ರಥಮ ಹಂತದಲ್ಲಿ 308 ಅರ್ಜಿಗಳನ್ನು ಹಾಕಿಸಲು ಸಾಧ್ಯವಾಯ್ತು. ಕಳೆದ ವರ್ಷ ನಿರಂತರ ಹೋರಾಟಗಳನ್ನು ಕಂಡಿದ್ದ ಪಂಚಾಯತ್ ಕ್ರಿಯಾಯೋಜನೆ ತಯಾರಿಸಿ ಅಂಗೀಕರಿಸಿತು. ಆ ಯೋಜನೆಯಲ್ಲಿ 36 ಕಾಮಗಾರಿಗಳಿದ್ದು 57.55 ಲಕ್ಷ ಮೊತ್ತ ಒಳಗೊಂಡಿತ್ತು. ಬಹುತೇಕ ಕಾಮಗಾರಿಗಳು ಒಳಚರಂಡಿ ನಿರ್ಮಾಣ ಮತ್ತು ರಸ್ತೆ ನಿರ್ಮಾಣಗಳೇ ಆಗಿದ್ದವು. ಹಟ್ಟಿ ಗ್ರಾಮದ್ದೊಂದು ವಿಶೇಷವಿದೆ. ಹಟ್ಟಿ ಬೃಹತ್ ಗ್ರಾಮವಾಗಿದ್ದು ಏಕ ಊರನ್ನೊಳಗೊಂಡು ಗ್ರಾಮಪಂಚಾಯತಿಯಾಗಿದೆ. ಆದರ ಸೀಮಾಂತರವು ಸಹ ಸೀಮಿತವಾಗಿದ್ದು ಶೇ.60ದಷ್ಟು ಭೂಮಿ ಹಟ್ಟಿ ಚಿನ್ನದ ಗಣಿಗೆ ಹೋಗಿದೆ. ಉಳಿದ ಶೇ.40ರಷ್ಟರಲ್ಲಿ ಶೇ.30ರಷ್ಟು ಭೂಮಿಯಲ್ಲಿ ಗ್ರಾಮ ಹರಡಿಕೊಂಡಿದೆ. ಹೀಗಾಗಿ ವ್ಯವಸಾಯ ಆಧಾರಿತವಾದ ಕಾಮಗಾರಿಗಳನ್ನು ಕೈಗೊಳ್ಳಲು ಬರುವಂತಿಲ್ಲ. ಆದ್ದರಿಂದ ಕೇವಲ ಚರಂಡಿ ನಿರ್ಮಾಣ ಮತ್ತು ರಸ್ತೆ ನಿರ್ಮಾಣದ ಅಂಶಗಳೇ ಕ್ರಿಯಾ ಯೋಜನೆಯಲ್ಲಿ ತುಂಬಿವೆ. ಒಟ್ಟಾರೆ ಉದ್ಯೋಗ ಖಾತರಿ ಅಧಿನಿಯಮದಲ್ಲಿ ತೋರಿಸದಿರುವ ಕೆಲಸಗಳನ್ನು ಮಾಡಿಸುವ ಮುಖಾಂತರ ಹಟ್ಟಿ ಗ್ರಾಮ ಪಂಚಾಯತ್ ಒಂದು ವಿಶಿಷ್ಟ ಸಾಧನೆ ಮಾಡಿದೆಯೆನ್ನಬಹುದು.

ಕ್ರಿಯಾ ಯೋಜನೆಯ ಬಗ್ಗೆ ಪಂಚಾಯತಿಯಲ್ಲಿ ಚರ್ಚೆಗೆ ಬಂದಾಗ ಬಹುತೇಕ ಸದಸ್ಯರು ಕೆಲಸಕ್ಕೆ ಅರ್ಜಿ ಹಾಕಿದವರಲ್ಲಿ ಶೇ.90ರಷ್ಟು ಮಹಿಳೆಯರಿದ್ದಾರೆ. ಚರಂಡಿ ತೋಡುವಂತಹ ಮತ್ತು ರಸ್ತೆ ನಿರ್ಮಾಣದಂತಹ ಕಠಿಣ ಕೆಲಸ ಮಹಿಳೆಯರಿಂದ ಅಸಾಧ್ಯ. ಆದ್ದರಿಂದ ಕ್ರಿಯಾ ಯೋಜನೆ ಅಂಗೀಕಾರ ಬೇಡ, ಎಂದೆಲ್ಲಾ ವಾದಿಸಿದರು. ಆದರೆ ಸಿಪಿಎಂ ನಿಂದ ಗ್ರಾಮಪಂಚಾಯತ್ ಸದಸ್ಯರಾಗಿರುವ ಕಾಂ.ಕೆ. ಸರಸ್ವತಿಯವರು ಈ ಹಿಂದೆ ತವಗದಲ್ಲಿ ಇದಕ್ಕಿಂತಲೂ ಕಠಿಣವಾದ ಕೆಲಸ ಮಾಡಿ ತೋರಿಸಿದ್ದಾರೆ. ಆದ್ದರಿಂದ ಯೋಜನೆ ಅಂಗೀಕಾರವಾಗಲೇಬೇಕೆಂದು ಪಟ್ಟುಹಿಡಿದರು. ಅದೇ ರೀತಿ ಕಾರ್ಯದರ್ಶಿ ಸಹ ವಾದಿಸಿದರು. ಅಂಗೀಕಾರದ ಜೊತೆಗೆ ಅವಶ್ಯಕತೆಯ ಬಗ್ಗೆ ಗ್ರಾಮಪಂಚಾಯತ್ ಸದಸ್ಯರಿಗೆ ವಿವರಿಸಿ ಮನ ಒಲಿಸಿದರು. ಹೀಗಾಗಿ ಕ್ರಿಯಾಯೋಜನೆ ಅಂಗೀಕಾರವಾಯ್ತು.

ಆರಂಭದಲ್ಲಿ ಅತ್ಯಂತ ಗಲೀಜಾದ ಪ್ರದೇಶದಲ್ಲೇ ಕೆಲಸ ಆರಂಭಿಸಿತ್ತು. ಆ ಗಲೀಜು ನೋಡಿ ಮಹಿಳೆಯರು ಕೆಲಸ ಮಾಡದೆ ಓಡಿಹೋಗುವವರೆಂದು ಹಲವರು ಬಹಿರಂಗವಾಗಿ ಮಾತನಾಡುತ್ತಿದ್ದರು. ಆದರೆ ಛಲದಿಂದ ಮಹಿಳೆಯರು ಮೂಗಿಗೆ ಬಟ್ಟೆ ಕಟ್ಟಿಕೊಂಡು 3 ದಿನ ಆ ಗಲೀಜಿನಲ್ಲಿ ಕೆಲಸ ಮಾಡಿದರು. ಕೆಲಸ ನೋಡಲು ಬಂದ ಗ್ರಾಮ ಪಂಚಾಯತ್ ಸದಸ್ಯರು ಆಶ್ಚರ್ಯಪಟ್ಟರು. ಇನ್ನು ಏನು ಮಾಡಿದರೂ ಕೆಲಸ



ನಿಲ್ಲುತ್ತಿಲ್ಲ ಎಂದು ಭಾವಿಸಿದ, ಸಂಘದ ಏಳಿಗೆ ಸಹಿಸದ ಪಂಚಾಯತ್ ಸದಸ್ಯರು ಸ್ಥಳಕ್ಕೆ ಬರುವುದು, ಮಹಿಳೆಯರನ್ನು ಟೀಕಿಸುವುದು, ನಿಮ್ಮ ಕೆಲಸ ಬಂದ್ ಮಾಡಿಸುತ್ತೇವೆಂದು ಅಂಜಿಸುವುದು, ನಿಮ್ಮ ಕೆಲಸ ಇಂದಿಗೆ ಮುಗಿತು. ನಾಳೆಯಿಂದ ನನ್ನ ಏರಿಯಾದ ಜನ ಕೆಲಸಕ್ಕೆ ಬರುತ್ತಾರೆ. ನಾಳೆಯಿಂದ ನೀವು ಬರಬೇಡಿ ಎಂದು ಹೆದರಿಸುವುದು. ಅವರ ಮಾತು ಮೀರಿ ಕೆಲಸಕ್ಕೆ ಬಂದಾಗ ಮೇಸನರನ್ನು ಅಂಜಿಸಿ ಕೆಲಸ ನಿಲ್ಲಿಸುವುದು ಮತ್ತು ಕಾರ್ಯದರ್ಶಿಗೆ ಕೆಲಸ ನಿಲ್ಲಿಸಬೇಕೆಂದು ಮತ್ತು ಗುತ್ತಿಗೆ ಆಧಾರದಲ್ಲಿ ಪಂಚಾಯತ್ ಸದಸ್ಯರಿಗೆ ಮತ್ತು ಗ್ರಾಮದ ಮುಖಂಡರಿಗೆ ಕೆಲಸ ಕೊಡಬೇಕೆಂದು ವಾದಿಸಿದರು. ಆದರೆ ಕಾರ್ಯದರ್ಶಿ ತಾನು ನಿಯಮ ಮೀರಿ ಕೆಲಸ ಕೊಡುವುದಿಲ್ಲವೆಂದು, ಗುತ್ತಿಗೆ ಆಧಾರದಲ್ಲಿ ಕೆಲಸಕ್ಕೆ ಅವಕಾಶವಿಲ್ಲವೆಂದು ಸ್ಪಷ್ಟವಾಗಿ ನಿರಾಕರಿಸಿದರು.

ಈ ಬಗ್ಗೆ ಪರಾಮರ್ಶಿಸಿದ ಉಭಯಸಂಘಗಳು ಕೆಲಸಗಾರರ ಸರ್ವ ಸದಸ್ಯರ ಸಭೆ ಕರೆದರು. ಈ ಸಭೆಯ ಅಧ್ಯಕ್ಷತೆಯನ್ನು ಕಾಂ.ಕೆ. ಸರಸ್ವತಿ ವಹಿಸಿದ್ದರು. ಈ ಸಭೆಗೆ ಆಗಮಿಸಿದ್ದ ಕಾಂ.ಮಲ್ಲಯ್ಯ ಜಾಲಹಳ್ಳಿಯವರು ಕೆಲಸಗಾರರಿಗಿರುವ ಹಕ್ಕುಗಳ ಬಗ್ಗೆ ತಿಳಿಸಿದರು ಮತ್ತು ಕೆಲಸದ ಸ್ಥಳಕ್ಕೆ ಆಗಮಿಸಿ ಕಿರುಕುಳ ಕೊಡುವ ಪಂಚಾಯತ್ ಸದಸ್ಯರ ಮತ್ತು ಗ್ರಾಮದ ಕೆಲ ಮುಖಂಡರ ಮೇಲೆ ಕೇಸು ಹಾಕುವಂತೆ ಕರೆಕೊಟ್ಟರು. ಕಾಂ.ಕೆ.ಸರಸ್ವತಿಯವರು ಕೆಲಸಕ್ಕೆ ತೊಂದರೆ ಕೊಡಲು ಬರುವವರ ವಿರುದ್ಧ ಎಲ್ಲರೂ ಒಕ್ಕಟ್ಟಿನಿಂದ ಎದುರಿಸಬೇಕೆಂದು ತಿಳಿಸಿದರು. ನಂತರ ಇದೇ ವಿಷಯದ ಬಗ್ಗೆ ಉಭಯ ನಾಯಕರು ಪತ್ರಿಕಾಗೋಷ್ಠಿ ನಡೆಸಿ ಪಂಚಾಯತ್‌ನ ನಿಷ್ಕ್ರಿಯತೆಯನ್ನು ಮುಖಂಡರ ದೌರ್ಜನ್ಯವನ್ನು ಬಯಲಿಗೆಳೆದರು. ಮರುದಿನ ಪತ್ರಿಕೆಯಲ್ಲಿ ಈ ವಿಷಯ ತುಂಬಾ ಪ್ರಚಾರ ಪಡೆಯಿತು. ಹೀಗಾಗಿ ಈ ಯೋಜನೆ ಜಾರಿಗೊಳಿಸಬಾರದೆಂದು ಪಣ ತೊಟ್ಟ ಗೂಂಡಾ ಮುಖಂಡರು ಹೆದರಿ ಹಿಮ್ಮೆಟ್ಟುವಂತಾಯಿತು. ಕೊನೆಯಲ್ಲಿ 9 ದಿನದಲ್ಲಿ 82,000/ ಸಾವಿರ ರೂಪಾಯಿಗಳನ್ನು ಕೂಲಿಕಾರರಿಗೆ ದಿನಕ್ಕೆ 74 ರೂ.ಯಂತೆ ಕೂಲಿ ಕೊಡಿಸಲಾಯಿತು.

ಸಿಐಟಿಯು ಮುಖಂಡ ಕಾಂ.ಶಿವಾನಂದರವರು ಮಹಿಳೆಯರು ಧೈರ್ಯದಿಂದ ಕೆಲಸ ಮಾಡಲಿ, ನಿಮ್ಮ ಜತೆ ನಾವು ಕಾರ್ಮಿಕ ವರ್ಗದವರಿದ್ದೇವೆ ಎಂದು ಧೈರ್ಯ ತುಂಬಿದರು. ಕೆಪಿಆರ್‌ಎಸ್ ಮುಖಂಡ ಕಾಂ.ಅಮಿನುದ್ದೀನ್, ಕಾಂ.ಬಸಮ್ಮ ಅವರೂ ಬೆಂಬಲ ನೀಡಿದರು.

– ರಂಗನಾಥ ಹಟ್ಟಿ

ಅಲ್ಟ್ರಾಟೆಕ್ ಕಾಂಕ್ರೀಟ್ ಕಾರ್ಮಿಕರ ಮೇಲೆ ಗೂಂಡಾಗಳ ಧಾಳಿ, ಹಲ್ಲೆ

ಐಟಿ ಸಿಟಿ, ಸಿಲಿಕಾನ್ ಸಿಟಿ ಎಂದು ದೇಶದಲ್ಲಿಯೇ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ನಗರ ಬೆಂಗಳೂರು ಇಲ್ಲಿ ತಿಂಗಳೊಂದಕ್ಕೆ ಹತ್ತಾರು ಲಕ್ಷ ಬಾಡಿಗೆ ತೆತ್ತು ಐಷಾರಾಮಿ ಜೀವನ ನಡೆಸುವ ಶ್ರೀಮಂತರು ಈ ಜನರ ತೆವಲುಗಳ ಪೂರೈಕೆಗಾಗಿ ನಾಯಿ ಕೊಡೆಗಳಂತೆ ಉದ್ಭವವಾಗುತ್ತಿರುವ ವಿಲಾಸಿ ಗಗನಚುಂಬಿ ಕಟ್ಟಡಗಳು ಇವುಗಳಿಂದ ತಮ್ಮ ಬಂಡವಾಳ ದ್ವಿಗುಣಗೊಳಿಸಿಕೊಳ್ಳುತ್ತಾ ಸಾಗುತ್ತಿರುವ ಕೋಟ್ಯಾಧಿಪತಿಗಳ ಸಮೂಹಗಳೇ ಸಾಕಷ್ಟು ತುಂಬಿವೆ.

ಹಾಗೆಯೇ ಬೆಳಿಗ್ಗೆ ಕೆಲಸಕ್ಕೆ ಹಾಜರಾಗಿ 8 ಗಂಟೆ, 12 ಗಂಟೆ, 24 ಗಂಟೆ ಒಮ್ಮೊಮ್ಮೆ 36 ಗಂಟೆಗಳಾದರೂ ಮೇಲಾಧಿಕಾರಿಯ ಅನುಮತಿ ಯಿಲ್ಲದೆ ಬರಲಾರದ ಕುಟುಂಬದ ನೆನಪು, ಊಟ, ನಿದ್ರಾ ಸಮಯಗಳಿಲ್ಲದೆ, ಉದ್ಯೋಗ ಭದ್ರತೆ, ಕನಿಷ್ಟ ವೇತನಗಳಿಲ್ಲದೆ ಜೀವನದ ಹೊಟ್ಟೆಪಾಡಿಗಾಗಿ ಕೆಲಸ ಮಾಡಿ ಬರುವ ಲಕ್ಷ, ಲಕ್ಷ ಅಸಂಘಟಿತ ವಲಯದ ಕಾರ್ಮಿಕರಿದ್ದಾರೆ.

ಎಲ್ಲಾ ಕಾರ್ಮಿಕ ಕಾನೂನುಗಳನ್ನು ಗಾಳಿಗೆ ತೂರಿ ಮೂರು ವರ್ಷಗಳಿಂದ ಯಾರಿಗೂ ಉದ್ಯೋಗ ಖಾಯಂ ಮಾಡದೆ ಶೋಷಿಸುತ್ತಾ ಬರುತ್ತಿದ್ದ ಯಲಹಂಕ-ದೇವನಹಳ್ಳಿ ರಸ್ತೆ, ಬೆಟ್ಟ ಹಲಸೂರು ಪ್ರದೇಶದ ಬಿರ್ಲಾ ಮಾಲೀಕನಿಗೆ ಸೇರಿದ ಅಲ್ಟ್ರಾಟೆಕ್ ಕಾಂಕ್ರೀಟ್ ಕಾರ್ಖಾನೆ ಕಾರ್ಮಿಕರು ಸಿಐಟಿಯುನ ಕರ್ನಾಟಕ ರೆಡಿಮಿಕ್ಸ್ ಕಾಂಕ್ರಿಟ್ ಕಾರ್ಮಿಕರ ಸಂಘದಲ್ಲಿ ನೊಂದಾಯಿತರಾಗಿ ದಿನಾಂಕ 14.6.08 ರಂದು ಧ್ವಜಾರೋಹಣ ಮಾಡುವಾಗ ಕಾರ್ಖಾನೆ ಆಡಳಿತ ವರ್ಗ ಸ್ಥಳೀಯ ಗೂಂಡಾಗಳನ್ನು ಕರೆಸಿ ನೆರೆದಿದ್ದ ಜಿಲ್ಲಾ ಸಿಐಟಿಯು ಮುಖಂಡರನ್ನೊಳಗೊಂಡಂತೆ ಎಲ್ಲರನ್ನು ಚೆನ್ನಾಗಿ ಥಳಿಸಿ ಕಳುಹಿಸಿದೆ.



ಈ ಕುರಿತು ಚಿಕ್ಕ ಜಾಲ ಪೊಲೀಸ್ ಠಾಣೆಯಲ್ಲಿ ದೂರು ನೀಡಿ ದುಷ್ಕರ್ಮಿಗಳ ಬಂಧಿಸಲು ಸಂಘಟಕರು ಕೋರಿದಾಗ, ಪೊಲೀಸರು ನೆಪಕ್ಕೆ ದೂರು ದಾಖಲಿಸಿಕೊಂಡು ಯಾವುದೇ ಕ್ರಮ ಜರುಗಿಸದೆ ಇದ್ದುದನ್ನು ಪ್ರತಿಭಟಿಸಿ ಸಿಐಟಿಯು ನೊಂದಾಯಿತ ಬೆಂಗಳೂರಿನ ಎಲ್ಲಾ ರೆಡಿಮಿಕ್ಸ್ ಕಾರ್ಖಾನೆಗಳ ಸಾವಿರಾರು ಕಾರ್ಮಿಕರು, ಇತರ ಅನೇಕ ಕಾರ್ಖಾನೆಗಳ ಮುಖಂಡರು ಹಾಗೂ ಸಾವಿರಾರು ಜನ ಕಾರ್ಮಿಕರು ಹಾಗೂ ಮುಖಂಡರು 17.6.2008ರಂದು ನಗರದ ಟೌನ್‌ಹಾಲ್‌ನಿಂದ (ಬೆಳಿಗ್ಗೆ 11.00 ರಿಂದ) ಮೆರವಣಿಗೆ ಬಂದು ಬನ್ನಪ್ಪ ಪಾರ್ಕ್ ಸಮೀಪದಲ್ಲಿ ಸಭೆ ನಡೆಸಿ, ನಗರ ಪೊಲೀಸ್ ಆಯುಕ್ತರಿಗೆ ಈ ಕೂಡಲೇ ಕಾರ್ಖಾನೆಯವರನ್ನು ಕರೆಸಿ ಧಾಳಿ ಮಾಡಿದ ಸ್ಥಳೀಯ ಗೂಂಡಾಗಳನ್ನು ಬಂಧಿಸಿ ಕಾರ್ಮಿಕರು ಭಯ ಮುಕ್ತರಾಗಿ ಕೆಲಸ ನಿರ್ವಹಿಸಿಕೊಂಡು ಹೋಗಲು ಅನುವು ಮಾಡಿಕೊಡಬೇಕೆಂದು ಕೋರಿದರು.

ಈ ಸಭೆಯು ಸಿಐಟಿಯು ಜಿಲ್ಲಾ ಮುಖಂಡರಾದ ಕಾಂ.ಹೆಚ್.ಎನ್. ಗೋಪಾಲಗೌಡರ ನೇತೃತ್ವದಲ್ಲಿ ನಡೆದು ಕಾಂ.ಇ.ಕೆ.ಎನ್. ರಾಜನ್, ಕಾಂ.ಮೀನಾಕ್ಷಿ ಸುಂದರಂ, ಕಾಂ.ಕೆ.ಎನ್. ಉಮೇಶ್, ಕಾಂ.ನಂಜುಂಡಪ್ಪ, ಕಾಂ.ಪಿ.ಮುನಿರಾಜು, ಕಾಂ.ಕಾಮರಾಜ್ ಹಾಗೂ ಇತರೆ ಮುಖಂಡರು ಭಾಗವಹಿಸಿ ತಮ್ಮ ಬೆಂಬಲ ವ್ಯಕ್ತಪಡಿಸಿದರು. ಬೆಂಗಳೂರು ಸುತ್ತಮುತ್ತಲಿನ ಕಾರ್ಖಾನೆಗಳ ಅಸಂಘಟಿತ ಕಾರ್ಮಿಕರ ಬವಣೆಗಳನ್ನು ಸಭೆಗೆ ತಿಳಿಸಿದರು.

○ನರಸಿಂಹಮೂರ್ತಿ

ಇದು ನಿಮಗೆ ಗೊತ್ತೇ? ನಮಗೆ ಬೇಕಾಗುವ ಕಚ್ಚಾತೈಲದಲ್ಲಿ ಕನಿಷ್ಟ 25ಶೇ. ದೇಶದಲ್ಲೇ ಸಿಗುತ್ತಿದೆ. ನಮ್ಮ ತೈಲ ಶುದ್ಧಿಕರಣ ಸಾಮರ್ಥ್ಯ 150 ಮಿಲಿಯ ಮೆಟ್ರಿಕ್ ಟನ್ನುಗಳು. ಆಂತರಿಕ ಬೇಡಿಕೆಗಿಂತ ಹೆಚ್ಚು ಪೂರೈಕೆ ಇದೆ. ಆದ್ದರಿಂದ ಅಂತರ್ರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಬ್ಯಾರಲ್ಲಿಗೆ 130 ಡಾಲರಾದರೂ ಒಂದು ಲೀಟರ್ ಪೆಟ್ರೋಲಿನ ಉತ್ಪಾದನಾ ಖರ್ಚು ಹೆಚ್ಚೆಂದರೆ 30ರೂ. ಆದರೂ ತೈಲ ಮಾರಾಟ ಕಂಪನಿಗಳು ದಿವಾಳಿಯ ಅಂಚಿನಲ್ಲಿವೆ ಎಂದಳುವುದು ಏಕೆ? ಇದು ಮೊಸಳೆ ಕಣ್ಣೀರು, ಅಷ್ಟೇ ಅಲ್ಲ, ದರ ಏರಿಕೆಯ ಬಗ್ಗೆ ಬಿಜೆಪಿಯದ್ದೂ ಮೊಸಳೆ ಕಣ್ಣೀರು!

ಖಾಸಗೀ ಕಂಪನಿಗಳ ಲಾಭಕ್ಕಾಗಿ ಪೆಟ್ರೋಲ್ ಬೆಲೆಗಳ ಏರಿಕೆ

ಹಣದುಬ್ಬರದ ದರ 11ಶೇ. ದಾಟಿದೆ. ಯುಪಿಎ ಸರಕಾರಕ್ಕೆ ಇದರಿಂದ ಬಹಳ ಕಳವಳವಾಗುತ್ತಿದೆಯಂತೆ. ಇದು ಇತ್ತೀಚೆಗೆ ಆಗಿರುವ ಪೆಟ್ರೋಲಿಯಂ ದರಗಳ ಏರಿಕೆಯ ಪರಿಣಾಮ ಎಂಬುದು ಸ್ಪಷ್ಟ. ಹೀಗಾಗಬಹುದೆಂದೇ ಎಡಪಕ್ಷಗಳು ದರಗಳ ಏರಿಕೆ ಮಾಡದಂತೆ ಮತ್ತೆ-ಮತ್ತೆ ಕೇಳಿಕೊಂಡವು, ಒತ್ತಾಯಿಸಿದವು. ಪ್ರಧಾನ ಮಂತ್ರಿಗಳಿಗೂ, ಹಣಕಾಸು ಮಂತ್ರಿಗಳಿಗೂ ಇದು ತಿಳಿಯದ ಸಂಗತಿಯೇನಲ್ಲ. ಆದರೂ ಏಕೆ ಪೆಟ್ರೋಲಿಯಂ ಉತ್ಪನ್ನಗಳ ದರಗಳನ್ನು ಹೆಚ್ಚಿಸಲಾಯಿತು?

ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಬ್ಯಾರಲ್ಲಿಗೆ 130 ಡಾಲರ್ ಆಗಿರುವುದರಿಂದ ಸಾರ್ವಜನಿಕ ವಲಯದ ತೈಲ ಮಾರಾಟ ಕಂಪನಿಗಳಿಗೆ 2,45,000 ಕೋಟಿ ರೂಪಾಯಿಗಳ ನಷ್ಟವಾಗುತ್ತಿದೆ, ಅದನ್ನು ಭರಿಸಬೇಕಾದರೆ ಪೆಟ್ರೋಲ್ ದರವನ್ನು ಲೀಟರಿಗೆ ನಿಜವಾಗಿ 71ರೂ.ಗೆ ಏರಿಸಬೇಕಾಗುತ್ತದೆ ಎಂದೂ ಲೆಕ್ಕಾಚಾರ ನೀಡಲಾಯಿತು. ಇಲ್ಲದಿದ್ದರೆ ಈ ಕಂಪನಿಗಳು ದಿವಾಳಿಯೇಳಲಿವೆ ಎಂದೂ ಹೇಳಲಾಯಿತು.

ಕೆಲವೇ ದಿನಗಳ ಹಿಂದೆ ಆಹಾರಧಾನ್ಯಗಳ ಬೆಲೆಗಳ ತೀವ್ರ ಏರಿಕೆಯನ್ನು 'ರಾಜಕೀಯ'ಗೊಳಿಸಿ ಸುಮ್ಮನೇ ಭಯದ ವಾತಾವರಣ ಸೃಷ್ಟಿಸಬೇಡಿ ಎಂದ ಪ್ರಧಾನ ಮಂತ್ರಿಗಳೇ ದರ ಏರಿಕೆಗಳನ್ನು ಸಮರ್ಥಿಸಿಕೊಳ್ಳಲು ಈ ದೊಡ್ಡ ಮೊತ್ತವನ್ನು ಪ್ರಸ್ತಾಪಿಸಿ ಭಯದ ವಾತಾವರಣ ಸೃಷ್ಟಿಸಲು ಪ್ರಯತ್ನಿಸಿದರೇ? ಕೆಲವು ಪರಿಣತರು ಕೊಡುವ ಲೆಕ್ಕಾಚಾರಗಳನ್ನು ನೋಡಿದರೆ ಹಾಗನ್ನಿಸದಿರದು. ರಾಷ್ಟ್ರವನ್ನುದ್ದೇಶಿಸಿ ಮಾತನಾಡಿದ ನಂತರ ಪ್ರಧಾನ ಮಂತ್ರಿಗಳು ತೈಲ ಮಾರಾಟ ಕಂಪನಿಗಳ ಆರ್ಥಿಕ ಸ್ಥಿತಿಯನ್ನು ಪರೀಕ್ಷಿಸಲು ಒಂದು ಉನ್ನತ ಮಟ್ಟದ ಸಮಿತಿಯನ್ನು ರಚಿಸಿದರು. ಆದರೆ ಅದರ ಮೊದಲೇ ಈ 2,45.000 ಕೋಟಿ ಎಂಬ ಸಂಖ್ಯೆ ಎಲ್ಲಿಂದ ಬಂತು? (ನಿಜ, ಈಗ ಇದನ್ನು 'ನಷ್ಟ' ಎನ್ನುತ್ತಿಲ್ಲ, 'ಅಂಡರ್ ರಿಕವರಿ' ಅಂದರೆ 'ಕಡಿಮೆ ವಸೂಲಾತಿ' ಎನ್ನಲಾಗುತ್ತಿದೆ.)

ಈ ಲೆಕ್ಕಾಚಾರ ನೋಡಿ:

ಮೊದಲಿಗೆ, ಭಾರತ ಕಚ್ಚಾತೈಲವನ್ನು ದೊಡ್ಡ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳಬೇಕಾದರೂ, ಎಲ್ಲವನ್ನೂ ಆಮದು ಮಾಡಿಕೊಳ್ಳುವುದಿಲ್ಲ ಎಂಬುದನ್ನು ಗಮನಿಸಬೇಕು. ಸುಮಾರು 25 ರಿಂದ 30 ಶೇ. ಕಚ್ಚಾ ತೈಲ ದೇಶದ ಒಳಗಿನ ಮೂಲಗಳಿಂದ ಬರುತ್ತದೆ. ಆದ್ದರಿಂದ ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ 130 ಡಾಲರು ಆದರೂ ನಮ್ಮ ಕಚ್ಚಾತೈಲ ಖರ್ಚು 130 ಡಾಲರು ಆಗುವುದಿಲ್ಲ. ಏಕೆಂದರೆ ಸಾರ್ವಜನಿಕ ವಲಯದ ಕಚ್ಚಾತೈಲ ಕಂಪನಿ ಒ.ಎನ್.ಜಿ.ಸಿ.(ತೈಲ ಮತ್ತು ನೈಸರ್ಗಿಕ ಅನಿಲ ನಿಗಮ) 55 ಡಾಲರುಗಳಲ್ಲಿ ಪೂರೈಸುತ್ತಿದೆ. ಅಂದರೆ ಭಾರತದಲ್ಲಿ ಕಚ್ಚಾತೈಲದ ಸರಾಸರಿ ಖರ್ಚು ಬ್ಯಾರಲ್ಲಿಗೆ 111.25 ಡಾಲರ್ ಆಗುತ್ತದೆ. ಒಂದು ಬ್ಯಾರಲ್ ಅಂದರೆ 158.987 ಲೀಟರ್ ಆಗುತ್ತದೆ. ಅಂದರೆ ಒಂದು ಲೀಟರ್ ಕಚ್ಚಾತೈಲದ ಬೆಲೆ 69ಸೆಂಟ್ಸ್ ಆಗುತ್ತದೆ. ಒಂದು ಡಾಲರಿಗೆ ಈಗ 42ರೂ. ಎಂದಿಟ್ಟುಕೊಂಡರೆ ಒಂದು ಲೀಟರ್ ಕಚ್ಚಾತೈಲದ ಬೆಲೆ ರೂ.29.39 ಆಗುತ್ತದೆ. ಇದನ್ನು ಪೆಟ್ರೋಲ್, ಡೀಸೆಲ್ ಅಥವಾ ಅಡುಗೆ ಅನಿಲವಾಗಿ ಶುದ್ಧಿಕರಿಸಲು ತಗಲುವ ಖರ್ಚೆಷ್ಟು? ಸಂಸತ್ತಿನ ಪೆಟ್ರೋಲಿಯಂ ಮತ್ತು ಅನಿಲ ಸ್ಥಾಯೀ ಸಮಿತಿಯ ಸಿಪಿಐ(ಎಂ) ಸದಸ್ಯರಾದ ತಪನ್ ಸೆನ್ ಪ್ರಕಾರ ಪೆಟ್ರೋಲಿಯಂ ಉತ್ಪನ್ನಗಳ ಖರ್ಚಿನಲ್ಲಿ ಕಚ್ಚಾತೈಲದ ಭಾಗ ಸುಮಾರು 93-94ಶೇ. ಅಂದರೆ ಒಂದು ಲೀಟರ್ ಪೆಟ್ರೋಲಿನ ಖರ್ಚು ಲೀಟರಿಗೆ ರೂ.30.39ಕ್ಕಿಂತ ಹೆಚ್ಚಾಗಲು ಸಾಧ್ಯವಿಲ್ಲ ಎನ್ನುತ್ತಾರೆ ವಿ.ಶ್ರೀಧರ್('ದಿ ಹಿಂದೂ' ದೈನಿಕ, ಜೂನ್ 20). ಹಾಗಿದ್ದರೆ ಪೆಟ್ರೋಲಿಯಂ ಮಂತ್ರಾಲಯ ಹೇಳಿರುವಂತೆ ಪೆಟ್ರೋಲಿನ ಬೆಲೆ ರೂ.71 ಆಗುವುದಾದರೆ ಮಾರಾಟದ ಖರ್ಚುಗಳು ಮತ್ತು ಲಾಭಾಂಶ ಸುಮಾರು 40ರೂ.ಗಳಷ್ಟು ಆಗುತ್ತದೆಯೇ? ಖಂಡಿತಇಲ್ಲ ಎಂಬುದು ಸ್ಪಷ್ಟ. ಕಚ್ಚಾತೈಲದ ಬೆಲೆ ಬ್ಯಾರಲ್ಲಿಗೆ 256 ಡಾಲರ್ ಆದಾಗ ಮಾತ್ರವೇ ಪೆಟ್ರೋಲಿನ ಬೆಲೆ 71ರೂ .ಆಗಲು ಸಾಧ್ಯ ಎಂದು ತಪನ್ ಸೆನ್ ಪ್ರಧಾನ ಮಂತ್ರಿಗಳಿಗೆ ಬರೆದ ಪತ್ರದಲ್ಲಿ ಹೇಳಿದ್ದಾರೆ.


ಹಾಗಿದ್ದರೆ 245000 ಕೋಟಿ, 71ರೂ. ಇತ್ಯಾದಿಗಳು ಎಲ್ಲಿಂದ ಬಂದವು? ಸಾರ್ವಜನಿಕ ವಲಯದ ತೈಲ ಮಾರಾಟ ಕಂಪನಿಗಳ ಬಗ್ಗೆ ಸರಕಾರ , ಬಂಡವಾಳಶಾಹಿ ಹತೋಟಿಯ ಮಾಧ್ಯಮಗಳು ಮೊಸಳೆ ಕಣ್ಣೀರು ಸುರಿಸುತ್ತಿವೆಯೇ? ಹೌದು, ಇದು ಮೊಸಳೆ ಕಣ್ಣೀರು. ವಾಸ್ತವವಾಗಿ ಇದರ ಹಿಂದೆ ಇರುವುದು ಸಾಮ್ರಾಜ್ಯಶಾಹೀ ಜಾಗತೀಕರಣದ ಕೈವಾಡ ಎನ್ನುತ್ತಾರೆ ಇನ್ನೊಬ್ಬ ತಜ್ಞ ದೀಪಂಕರ್ ಮುಖರ್ಜಿ.

'ಎಪಿಎಂ' ಮತ್ತು 'ಆಮದು ಅನುರೂಪತೆ'

ಇದನ್ನು ಅರಿಯಲು ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳನ್ನು ಹೇಗೆ ನಿರ್ಧರಿಸಲಾಗುತ್ತಿದೆ ಎಂಬುದನ್ನು ತಿಳಿದುಕೊಳ್ಳೋಣ. 2002ರ ವರೆಗೆ ಇದನ್ನು ಎಪಿಎಂ ಅಂದರೆ 'ಆಡಳಿತಾತ್ಮಕ ಬೆಲೆನಿಗದಿ ವ್ಯವಸ್ಥೆ'ಯ ಮೂಲಕ ಮಾಡಲಾಗುತ್ತಿತ್ತು. ಇದು ಆರ್ಥಿಕದಲ್ಲಿ ಹಣದುಬ್ಬರವಾಗದಂತೆ, ಸಾಕಷ್ಟು ಪ್ರಮಾಣದ ಲಾಭಾಂಶವೂ ಇರುವಂತೆ ಬೆಲೆ ನಿಗದಿ ಮಾಡುವ ಪಾರದರ್ಶಕ ವ್ಯವಸ್ಥೆ.

2002ರಲ್ಲಿ ಎನ್‌ಡಿಎ ಸರಕಾರ ಈ ವ್ಯವಸ್ಥೆಯನ್ನು ಕಳಚಿ ಹಾಕಿತು. ಆದರೂ ಆವಶ್ಯಕ ಪೆಟ್ರೋಲಿಯಂ ಉತ್ಪನ್ನಗಳಾದ ಸೀಮೆ ಎಣ್ಣೆ, ಪೆಟ್ರೋಲ್, ಡೀಸೆಲ್ ಮತ್ತು ಅಡುಗೆ ಅನಿಲ ಸರಕಾರದ ಬೆಲೆನಿಗದಿ ವ್ಯವಸ್ಥೆಯಲ್ಲಿಯೇ ಮುಂದುವರೆಯಿತು. ಜತೆಗೆ ಇದನ್ನು ಸಂಪೂರ್ಣವಾಗಿ ತೆಗೆದು ಹಾಕಲು ಸರಕಾರದ ಒಳಗಿದ್ದ ಮತ್ತು ಹೊರಗಿದ್ದ ಮುಕ್ತ ಮಾರುಕಟ್ಟೆವಾಲಾಗಳಿಂದ ಒತ್ತಡಗಳೂ ಮುಂದುವರೆದವು.

ಇವರೆಲ್ಲ ಈ ಪೆಟ್ರೋಲಿಯಂ ಉತ್ಪನ್ನಗಳನ್ನು 'ಇಂಪೋರ್ಟ್ ಪಾರಿಟಿ' ಅಂದರೆ 'ಆಮದು ಅನುರೂಪತೆ'ಗೆ ಒಳಪಡಿಸಬೇಕು ಎಂದು ಬಯಸುವವವರು. ಇದರ ಅರ್ಥ ನಮ್ಮ ಎಲ್ಲಾ ಕಚ್ಚಾ ತೈಲ ಆವಶ್ಯಕತೆಗಳನ್ನು ಆಮದು ಮಾಡುತ್ತಿದ್ದೇವೆ ಎಂದು ಊಹಿಸಿಕೊಂಡರೆ ಅದರ ಅಂತರ್ರಾಷ್ಟ್ರೀಯ ಮಾರುಕಟ್ಟೆ ಬೆಲೆ, ಸಾಗಾಣಿಕೆ, ಸೀಮಾಸುಂಕ, ಇಂಶೂರೆನ್ಸ್ ಇತ್ಯಾದಿಗಳೆಲ್ಲಾ ಸೇರಿ ಎಷ್ಟು ಖರ್ಚಾಗುತ್ತಿತ್ತೋ ಅದನ್ನು ಪರಿಗಣನೆಗೆ ತಗೊಂಡು ಬರುವ ಮೊತ್ತಕ್ಕೂ ತೈಲ ಮಾರಾಟ ಕಂಪನಿಗಳು ದೇಶದೊಳಗೆ ಪಡೆಯುವ ಮೊತ್ತಕ್ಕೂ ಇರುವ ಅಂತರವೇ 'ಅಂಡರ್ ರಿಕವರಿ' ಅಥವ 'ಕಡಿಮೆ ವಸೂಲಾತಿ'. ಅಂದರೆ ಈ 2,45,000ಕೋಟಿ ರೂ., 71ರೂ. ಎಲ್ಲಾ ನಿಜವಾದ ಅಂಕಿ-ಅಂಶಗಳಲ್ಲ, ಕಲ್ಪಿತ ಅಂಕಿ-ಅಂಶಗಳು ಎಂಬುದು ಸ್ಪಷ್ಟವಾಗುತ್ತದೆ.



ಈ ಕಲ್ಪಿತ ಅಂಕಿ-ಅಂಶಗಳೇಕೆ ಎಂಬ ಪ್ರಶ್ನೆ ಸಹಜವಾಗಿಯೆ ಏಳುತ್ತದೆ. ಇಲ್ಲಿಯೇ ಉದಾರೀಕರಣ-ಜಾಗತೀಕರಣದ ದುಷ್ಫಲ ನಮಗೆ ಕಾಣುವುದು. ಈ ಆಮದು ಅನುರೂಪತೆಯ ವ್ಯವಸ್ಥೆ ಬಂದರೆ ರಿಲಯೆನ್ಸ್, ಎಸ್ಸಾರ್ ಮುಂತಾದ ಖಾಸಗಿ ಕಚ್ಚಾತೈಲ ಕಂಪನಿಗಳು ದೇಶೀ ಉತ್ಪಾದನಾ ವೆಚ್ಚ ಕಡಿಮೆಯಿದ್ದರೂ ಅಂತರ್ರಾಷ್ಟ್ರೀಯ ಬೆಲೆಗಳಲ್ಲಿ ತಮ್ಮ ಉತ್ಪಾದನೆಗಳನ್ನು ಮಾರಿ ಅಪಾರ ಲಾಭ ಗಿಟ್ಟಿಸಬಹುದು ಎಂಬ ಹುನ್ನಾರ ಇದರ ಹಿಂದಿದೆ. ಈಗ ಇದಕ್ಕೆ ಅಡ್ಡಿಯಾಗಿರುವುದು ಸಾರ್ವಜನಿಕ ವಲಯದ ತೈಲ ಮಾರಾಟ ಕಂಪನಿಗಳು ಎಪಿಎಂ ವ್ಯವಸ್ಥೆಯಡಿಯಲ್ಲಿಯೆ ಈ ಪೆಟ್ರೋಲ್ ಉತ್ಪನ್ನಗಳನ್ನು ಪೂರೈಸುತ್ತಿರುವುದು.

ವಾಜಪೇಯಿ ಸರಕಾರದ ಬಳುವಳಿ

ವಾಸ್ತವವಾಗಿ ಎನ್‌ಡಿಎ ಸರಕಾರ ಈ 'ಅಡ್ಡಿ'ಯನ್ನು ನಿವಾರಿಸುವತ್ತ ಮೊದಲ ಹೆಜ್ಜೆಯಿಡಲು ನಿರ್ಧರಿಸಿತ್ತು. ಸಾರ್ವಜನಿಕ ವಲಯದ ತೈಲ ಮಾರಾಟ ಕಂಪನಿಗಳಾದ ಹೆಚ್‌ಪಿಸಿಎಲ್ ಮತ್ತು ಬಿಪಿಸಿಎಲ್ ಕಂಪನಿಗಳನ್ನು ಖಾಸಗೀಕರಿಸಲು ಮುಂದಾಗಿತ್ತು. ಆದರೆ ಕಾರ್ಮಿಕ ಸಂಘಗಳ ಮತ್ತು ಎಡಪಕ್ಷಗಳ ಪ್ರತಿಭಟನೆಗಳಿಂದಾಗಿ ಅದು ಸಾಧ್ಯವಾಗಲಿಲ್ಲ. ಅಲ್ಲದೆ ಈ ಕಂಪನಿಗಳನ್ನು ಸಂಸತ್ತಿನ ಒಂದು ಶಾಸನದ ಮೂಲಕ ರಾಷ್ಟ್ರೀಕರಿಸಿದ್ದರಿಂದ ಅದನ್ನು ಸಂಸತ್ತಿನ ಅನುಮೋದನೆಯಿಲ್ಲದೆ ಖಾಸಗೀಕರಿಸಲು ಸಾಧ್ಯವಿಲ್ಲ ಎಂದು ಸುಪ್ರಿಂ ಕೋರ್ಟ್ ಮಧ್ಯಪ್ರವೇಶಿಸಿತು. ನಂತರ ಬಂದ ಯುಪಿಎ ಸರಕಾರ ಎಡ ಪಕ್ಷಗಳ ಬೆಂಬಲವನ್ನು ಅವಲಂಬಿಸಿದ್ದರಿಂದ ಈ ಕಂಪನಿಗಳನ್ನು ಖಾಸಗೀಕರಿಸುವ ಉದಾರೀಕರಣವಾಲಾಗಳ ಆಶಯ ಈಡೇರಲಿಲ್ಲ. ಅದನ್ನು ಈಗ ಈ 'ಅಂಡರ್ ರಿಕವರಿ' (ಕಡಿಮೆ ವಸೂಲಾತಿ) ಎಂಬ ಹೊಸ ಪದವನ್ನು ಸೃಷ್ಟಿಸಿ ಈಡೇರಿಸಿಕೊಳ್ಳುವ ಪ್ರಯತ್ನವೇ ಈ ಅಂಕಿ-ಅಂಶಗಳು.

ಇವು ಸಾರ್ವಜನಿಕ ವಲಯದ ತೈಲ ಮಾರಾಟ ಕಂಪನಿಗಳ ಕಲ್ಯಾಣಕ್ಕಾಗಿ ಕಲ್ಪಿಸಿದವುಗಳಲ್ಲ ಎಂಬುದೀಗ ಸ್ಪಷ್ಟ. ಸಾರ್ವಜನಿಕ ವಲಯದ ಒ.ಎನ್.ಜಿ.ಸಿ. ಗಿಂತ ದ್ವಿಗುಣ ಬೆಲೆಗಳಲ್ಲಿ ಅನಿಲವನ್ನು ಮಾರುತ್ತಿರುವ ರಿಲಯನ್ಸ್ ಕಂಪನಿಗೆ ಅದನ್ನು ಮತ್ತಷ್ಟು ಹೆಚ್ಚಿಸಲು ಅವಕಾಶ ನೀಡುವ ಬಗ್ಗೆ ಸರಕಾರ ಯೋಚಿಸುತ್ತಿದೆ ಎಂಬ ಸುದ್ದಿ ಬಂದಿದೆ. ಎರಡು ತಿಂಗಳ ಹಿಂದೆ ರಿಲಯನ್ಸ್ ಮತ್ತು ಎಸ್ಸಾರ್ ಕಂಪನಿಗಳು ಸಾರ್ವಜನಿಕ ವಲಯದ ಕಂಪನಿಗಳು 'ಕಡಿಮೆ' ಬೆಲೆಗಳಲ್ಲಿ ಮಾರುತ್ತಿರುವುದರಿಂದ ತಮಗೆ ನಷ್ಟವಾಗುತ್ತಿದೆಯೆಂದು ತಮ್ಮ ಪೆಟ್ರೋಲ್ ಬಂಕ್‌ಗಳನ್ನು ಮುಚ್ಚಿದವು. ಇದೊಂದು ಒತ್ತಡ ತಂತ್ರವಾಗಿತ್ತು. ಈಗ ಅದು ಫಲಿಸಿದೆ. ಕೇಂದ್ರ-ರಾಜ್ಯ ಸರಕಾರಗಳಿಂದ ತೆರಿಗೆ ಕಡಿತಗಳನ್ನು ಗಿಟ್ಟಿಸಿ ಮತ್ತೆ ಅವುಗಳನ್ನು ತೆರೆದರೆ ಆಶ್ಚರ್ಯವಿಲ್ಲ ಎಂದು ದೀಪಂಕರ್ ಮುಖರ್ಜಿ ಹೇಳುತ್ತಾರೆ.

ಆದ್ದರಿಂದ ಇಲ್ಲಿರುವ ಪ್ರಶ್ನೆ- 25ರಿಂದ 30 ಶೇಕಡಾ ಕಚ್ಚಾತೈಲ ದೇಶದ ಒಳಗೇ ಸಿಗುತ್ತಿರುವಾಗ, ದೇಶದೊಳಗೇ ನಮ್ಮ ಆವಶ್ಯಕತೆಗಳಿಗಿಂತ ಹೆಚ್ಚು ತೈಲ ಶುದ್ಧೀಕರಣ ಸಾಮರ್ಥ್ಯ ಹೊಂದಿರುವಾಗ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯನ್ನು ನಾವು ಆಂತರಿಕವಾಗಿ ನಿರ್ಧರಿಸುವ ಸಾರ್ವಭೌಮ ಅಧಿಕಾರ ಹೊಂದಿರಬೇಕೇ ಅಥವಾ ಅಂತರ್ರಾಷ್ಟ್ರೀಯ ಮತ್ತು ದೇಶೀ ಗುತ್ತೇದಾರಿ ಕಂಪನಿಗಳಿಗೆ ಅದನ್ನು ಬಿಟ್ಟು ಕೊಡಬೇಕೆ, ಆ ಮೂಲಕ ಹಣದುಬ್ಬರಕ್ಕೆ ತುಪ್ಪ ಸುರಿಯಬೇಕೇ ಎಂಬುದು. ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಇದಕ್ಕೆ ಉತ್ತರ ನೀಡಲಿ ಎನ್ನುತ್ತಾರೆ ದೀಪಂಕರ್ ಮುಖರ್ಜಿ. ○



ಪತ್ನಿ ಮಕ್ಕಳೊಂದಿಗೆ ರಘುಪತಿ ಭಟ್

ಪದ್ಮಪ್ರಿಯ ಸಾವಿನ ಪ್ರಕರಣದಲ್ಲಿ ಹಲವು ಅನುಮಾನಗಳೆದ್ದಿವೆ. ಪತಿ ರಘುಪತಿ ಭಟ್‌ರಿಂದ ಹಿಡಿದು, ಗೃಹಮಂತ್ರಿಗಳವರೆಗೆ ಅವರ ಮಾತು, ನಡವಳಿಕೆಗಳ ಬಗೆಗೆ ಪ್ರಬಲ ಸಂಶಯ ಹುಟ್ಟಿಕೊಂಡಿದೆ. ಇದು ಆತ್ಮಹತ್ಯೆಯೋ? ಕೊಲೆಯೋ? ಇದೆಲ್ಲಾ ನಡೆದದ್ದು ಯಾಕೆ?

ಬಿಜೆಪಿ ಶಾಸಕರ ಪತ್ನಿ ಪದ್ಮಪ್ರಿಯ ನಿಗೂಢ ಸಾವು ಕೊಲೆಯೋ? ಆತ್ಮಹತ್ಯೆಯೋ?

ಸಂಶಯಕಾರಿ ಗೊಂದಲ !



ಸಾವು ಕಂಡ ಪದ್ಮಪ್ರಿಯ

ಉಡುಪಿ ವಿಧಾನಸಬಾ ಕ್ಷೇತ್ರದ ಶಾಸಕರಾಗಿ ಎರಡನೇ ಬಾರಿಗೆ ಆಯ್ಕೆಗೊಂಡಿರುವ ಬಿ.ಜೆ.ಪಿ.ಯ ಕರಂಬಳ್ಳಿ ರಘುಪತಿಭಟ್ಟರ ಹೆಂಡತಿ ಶ್ರೀಮತಿ ಪದ್ಮಪ್ರಿಯಾ ಅವರು ತಾ:11.06.2008 ರಂದು ನಿಗೂಢ ರೀತಿಯಲ್ಲಿ ಕಣ್ಮರೆಯಾಗಿ ತಾ:15.06.2008ರಂದು ನವದೆಹಲಿಯ ದ್ವಾರಕಾ ನಗರದ 'ಕಮಾ' ಅಪಾರ್ಟ್‌ಮೆಂಟ್‌ನ ಫ್ಲಾಟ್ ನಂ.20 ರಲ್ಲಿ ಕೊರಳಿಗೆ ನೇಣು ಬಿಗಿದ ಸ್ಥಿತಿಯಲ್ಲಿ ಶವವಾಗಿ ಕಂಡು ಬಂದಿರುವುದು ಅನೇಕಾನೇಕ ಸಂಶಯಗಳಿಗೆ ಕಾರಣವಾಗಿವೆ.

ಪದ್ಮಪ್ರಿಯಾ ಅವರು ತಾ:11.06.08ರಂದು ಅಥವಾ 10.06.08 ರಂದು (ಈ ಕುರಿತು ಯಾರೂ ನಿಜ ಸಂಗತಿ ಹೇಳುತ್ತಿಲ್ಲ) ತನ್ನ ಗಂಡನ ಕಾರನ್ನು ತಾನೇ ಚಲಾಯಿಸಿಕೊಂಡು ಉಡುಪಿಯಿಂದ 30 ಕಿ.ಮೀ.ದೂರದಲ್ಲಿರುವ ಮುಲ್ಕಿಯ ಬಳಿಯ ಕಾರ್ನಾಡಿನ ತನ್ನ ತವರು ಮನೆಗೆ ಹೊರಟಿದ್ದರು. ದಾರಿಯಲ್ಲಿ ರಾಷ್ಟ್ರೀಯ ಹೆದ್ದಾರಿಯಿಂದ 3 ಕಿ.ಮೀ. ಪೂರ್ವಕ್ಕೆ, ಉಡುಪಿಯಿಂದ ಸುಮಾರು 12 ಕಿ.ಮೀ. ದೂರವಿರುವ ಕುಂಜಾರು ಗಿರಿಯ ದುರ್ಗಾ ದೇವಸ್ಥಾನಕ್ಕೂ ಹೋಗಿ ಬರುವೆನೆಂದು ತಿಳಿಸಿದ್ದರಂತೆ. ಹೀಗೆ ಹೊರಟ ಪದ್ಮಪ್ರಿಯಾ ತವರು ಮನೆಗೂ ಹೋಗಲಿಲ್ಲ; ಗಂಡನ ಮನೆಗೂ ವಾಪಸು ಬರಲಿಲ್ಲ.



ಅತುಲ್ ರಾವ್

ತಾ:13.06.08ರಂದು ಅವರು ಚಲಾಯಿಸುತ್ತಿದ್ದ ಕಾರು ಕುಂಜಾರು ಗಿರಿಯ ಸಮೀಪ ಪತ್ತೆಯಾಗಿ ಅದರಲ್ಲಿ ಒಡೆದ ಗಾಜಿನ ಬಳೆ, ಕೆಲವು ಮಾತ್ರೆಗಳು ಅಲ್ಪಸ್ವಲ್ಪ ನಗದು ಹಣ, ಸಿಮ್ ತೆಗೆಯಲಾಗಿದ್ದ ಮೊಬೈಲ್‌ಫೋನ್ ಮುಂತಾದವು ಪೋಲಿಸರ ಕಣ್ಣಿಗೆ ಬಿದ್ದವು. ಪೋಲೀಸರು ಪದ್ಮಪ್ರಿಯಾ ಕೊಲೆಯಾಗಿರಬಹುದೆಂದು ಶಂಕಿಸಿ ಅಕ್ಕಪಕ್ಕದ ಕಾಡು, ಮೇಡು ಕೆರೆಗಳನ್ನೆಲ್ಲ ಜಾಲಾಡಿಸಿದರು.. ಆ ಸಮಯದಲ್ಲಿ ಬೆಂಗಳೂರಿನಲ್ಲಿ ಇದ್ದರೆನ್ನಲಾದ ರಘುಪತಿ ಭಟ್ಟರಾಗಲಿ, ಅವರ ಮನೆಯವರಾಗಲೀ ಅಥವಾ ಪದ್ಮಪ್ರಿಯಾ ಅವರ ತವರು ಮನೆಯವರಾಗಲೀ ಪದ್ಮಪ್ರಿಯಾ ಕಾಣೆಯಾದ ಬಗ್ಗೆ ಅಲ್ಲಿಯವರೆಗೂ ಪೋಲೀಸರಿಗೆ ದೂರು ನೀಡಿರಲಿಲ್ಲ.!!

ವಿಚಿತ್ರವೆಂದರೆ ಎರಡೂ ಮನೆಗಳ ಟೆಲಿಫೋನ್ ಕೆಟ್ಟು ಹೋಗಿತ್ತಂತೆ! ಉಡುಪಿ ನಗರಕ್ಕೆ ಇಷ್ಟು ಸಮೀಪ ಇಂತಹದೊಂದು ಘಟನೆ ನಡೆದಿರುವುದು ಜನ ಸಾಮಾನ್ಯರನ್ನು ತಲ್ಲಣಗೊಳಿಸಿತು. ಜನ ಪ್ರಾಮಾಣಿಕವಾಗಿ ರಘುಪತಿಭಟ್ಟರ ಬಗ್ಗೆ ಅನುಕಂಪ ವ್ಯಕ್ತಪಡಿಸಿದರು.

ಸಾವಿನ ಹಿಂದೆ ಆಸ್ತಿ-ಪಾಸ್ತಿ ಪ್ರಶ್ನೆಗಳಿದ್ದವೇ? ರಘುಪತಿ ಭಟ್‌ರ ಮನೆ, ಪದ್ಮಪ್ರಿಯರ ತವರು ಮನೆ



ಆದರೆ ಆ ಬಳಿಕ ನಡೆದದ್ದೇ ಬೇರೆ. ಪೋಲೀಸರು ಸಂದೇಹದ ಮೇಲೆ ರಘುಪತಿ ಭಟ್ಟರ ಆಪ್ತ ಸಹಾಯಕ ಮತ್ತು ಬಾಲ್ಯ ಸ್ನೇಹಿತನೂ ಆಗಿರುವ ಅತುಲ್‌ರಾವ್ ಎಂಬುವನನ್ನು ವಶಕ್ಕೆ ತೆಗೆದುಕೊಂಡರು. ಈತ ಉಡುಪಿ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗದ ನೌಕರನಾಗಿದ್ದು ಕಟ್ಟಡಗಳ ನಿರ್ಮಾಣ ಕಂಟ್ರಾಕ್ಟರೂ ಆಗಿದ್ದಾನೆ. ರಘುಪತಿ ಭಟ್ಟರ ಭವ್ಯವಾದ ಮನೆಯನ್ನು ಕಟ್ಟಿಸಿದವನೂ ಇವನೇ. ಈ ಅತುಲ್‌ರಾವ್ ನೀಡಿದ ಸುಳಿವಿನ ಮೇಲೆ ಪೋಲೀಸರು ಕೋಲಾರಕ್ಕೆ ತೆರಳಿದರಂತೆ. ಆ ಬಳಿಕ ಪದ್ಮಪ್ರಿಯಾ ಮಾಲೂರಿನ ಜೈನ್ ರೆಸಾರ್ಟ್‌ನಲ್ಲಿ ಪತ್ತೆಯಾಗಿದ್ದಾರೆಂದೂ, ತಮಿಳುನಾಡಿನ ಧರ್ಮಪುರಿಯಲ್ಲಿದ್ದಾರೆಂದೂ, ರಾಜ್ಯದ ಹೊರಗಡೆ ಸಿಕ್ಕಿದ್ದಾರೆಂದೂ ತರಹೇವಾರಿ ಹೇಳಿಕೆಗಳನ್ನು ನೀಡಲಾಯಿತು. ರಾಜ್ಯ ಗೃಹ ಸಚಿವ ಡಾ: ವಿ.ಎಸ್.ಆಚಾರ್ಯರು ತಾ:14ರಂದು ಹೇಳಿಕೆ ನೀಡಿ ತಾನು ಮರುದಿನ ಸಂಜೆಯೊಳಗಾಗಿ ಸಿಹಿಸುದ್ದಿ ತಿಳಿಸುವೆನೆಂದೂ ಹೇಳಿದರು. ಮುಖ್ಯಮಂತ್ರಿ ಯಡ್ಯೂರಪ್ಪನವರಂತೂ ಇನ್ನಷ್ಟು ಮುಂದೆ ಹೋಗಿ ಪದ್ಮಪ್ರಿಯಾ ಪ್ರಕರಣವನ್ನು ಸುಖಾಂತ್ಯಗೊಳಿಸಿದುದಕ್ಕಾಗಿ ರಾಜ್ಯದ ಪೋಲೀಸ್ ಅಧಿಕಾರಿಗಳನ್ನು ಅಭಿನಂದಿಸಿದರು. ಅದೂ ದೃಶ್ಯಮಾಧ್ಯಮಗಳ ಸಮ್ಮುಖದಲ್ಲೇ! ಟಿ.ವಿ.9 ಚಾನೆಲ್ ಈ ದೃಶ್ಯವನ್ನು ಹಲವು ಬಾರಿ ಬಿತ್ತರಿಸಿದೆ.



'ಸಿಹಿ' ಸುದ್ದಿ ಏನು?

ಇಷ್ಟೆಲ್ಲಾ ಆದ ಮೇಲೆ ತಾ:15.06.08ರಂದು ಗೃಹ ಸಚಿವರು ಕೊಟ್ಟ 'ಸಿಹಿ' ಸುದ್ದಿಯಾದರೂ ಏನು? ಮಾಲೂರಿನಲ್ಲೇ ಧರ್ಮಪುರಿಯಲ್ಲೋ ಪತ್ತೆಯಾಗಿದ್ದಳೆಂದು ಹೇಳಲಾಗಿದ್ದ ಪದ್ಮಪ್ರಿಯಾ ದೆಹಲಿಯ ದ್ವಾರಕಾ ನಗರದ 'ಶಮಾ' ಅಪಾರ್ಟ್‌ಮೆಂಟ್‌ನಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ! ಈ ಅನಾಹುತದ 'ವಿಲನ್' ಅತುಲ್‌ರಾವ್ ಎಂದೂ ಬಿಂಬಿಸಲಾಯಿತು!

ಪದ್ಮಪ್ರಿಯಾ ಸಾವಿನ ಹಿಂದೆ ಕಾಣದ ಕೈಗಳ ಪಾತ್ರವಿದೆ ಎಂಬುದನ್ನು ಸರಿಯಾಗಿಯೇ ಊಹಿಸಿದ ಸಮೂಹ ಮಾಧ್ಯಮಗಳು ಈ ಪ್ರಕರಣದಲ್ಲಿ ಅತುಲ್‌ನನ್ನು ಫಿಕ್ಸ್ ಮಾಡಿ ಮುಗಿಸಿ ಬಿಡಲಾಗುವುದು ಎಂದು ಗಲಾಟೆಯೆಬ್ಬಿಸಿದವು. ಅತುಲ್‌ನ ಪತ್ನಿ ಮೀರಾರಾವ್ ಅವರು ತನ್ನ ಗಂಡನನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸುವಂತೆ ಹೈಕೋರ್ಟ್‌ನಲ್ಲಿ ಹೇಬಿಯಸ್ ಕಾರ್ಪಸ್ ಅರ್ಜಿ ಸಲ್ಲಿಸಿದರು. ಇವುಗಳೆಲ್ಲದರ ಪರಿಣಾಮವಾಗಿ ಅತುಲ್‌ರಾವ್ ಈವರೆಗೂ ಜೀವಂತ

ಇರುವಂತಾಗಿದೆ. ಇದೀಗ ಪೋಲಿಸರು ಅವನನ್ನು ವಿಚಾರಣೆ ನಡೆಸಿ ಪ್ರಕರಣದ ಪ್ರಮುಖ ಸಾಕ್ಷಿ ಎಂಬುದು ಪರಿಗಣಿಸಿ ಬಿಡುಗಡೆ ಮಾಡಿದ್ದಾರೆ. ತಾ:13.06.08 ರಿಂದ 15.06.08ರವರೆಗೂ ಅಂದರೆ ಪದ್ಮಪ್ರಿಯಾ ಸಾವಿನ ದಿನದವರೆಗೂ ಆತ ಪೋಲೀಸರ ವಶದಲ್ಲೇ ಇದ್ದುದರಿಂದ ಪೋಲೀಸರು ಆತನನ್ನು ಕೊಲೆ ಆರೋಪಿಯೆಂದು ಪರಿಗಣಿಸಿಲ್ಲ.

ಗೊಂದಲಕಾರಿ ಹೇಳಿಕೆಗಳು

ಪದ್ಮಪ್ರಿಯಾ ಕೊಲೆಯಾದರೇ ಅಥವಾ ಆತ್ಮಹತ್ಯೆ ಮಡಿಕೊಂಡರೆ ಎಂಬುದು




ಮಾಲೂರಿನಲ್ಲಿ ಎಂಜಿನಿಯರ್ ಸೇರಿ ಇಬ್ಬರು ಪೊಲೀಸರ ವಶಕ್ಕೆ

ಉಡುಪಿ ಶಾಸಕರ ಪತ್ನಿ ಪತ್ತೆ

ಕಗ್ಗಂಟಾಗಯೇ ಉಳಿದಿದೆ. ಈ ಪ್ರಕರಣಕ್ಕೆ ಸಂಬಂಧಿಸಿ ರಾಜ್ಯದ ಗೃಹ ಸಚಿವರೂ ಸೇರಿದಂತೆ ಎಲ್ಲರೂ ನೀಡುತ್ತಿರುವ ಪರಸ್ಪರ ವಿರುದ್ಧವಾದ ಹೇಳಿಕೆಗಳು ಈ ಪ್ರಶ್ನೆಯನ್ನು ಇನ್ನಷ್ಟು ಜಟಿಲಗೊಳಿಸಿವೆ. ಪದ್ಮಪ್ರಿಯಾ ಆತ್ಮಹತ್ಯೆ ಮಾಡಿಕೊಳ್ಳುವಷ್ಟು ಪುಕ್ಕಲು ಹೆಂಗಸು ಅಲ್ಲವೆಂದು ಅವರ ತಮ್ಮಂದಿರು ಹೇಳುತ್ತಾರೆ. ಪದ್ಮಾ ಅವರದ್ದು ಗೌರವಸ್ಥ ಮನೆತನ. ಅವರ ಅಜ್ಜ ಸುಬ್ಬರಾವ್ ಸ್ವಾತಂತ್ರ್ಯ ಹೋರಾಟಗಾರ ಕಾರ್ನಾಡು ಸದಾಶಿವರಾಯರ ಸಹವರ್ತಿಯಾಗಿದ್ದರು. ಕೆಲವೇ ವರ್ಷಗಳ ಹಿಂದೆ ಮಾಮೂಲಿ ಗ್ಯಾರೇಜ್‌ವೊಂದನ್ನು ಹೊಂದಿದ್ದ ರಘುಪತಿಭಟ್ಟರು ಸುಪ್ರಿಂ ಫೈನಾನ್ಸ್ ಎಂಬ ಹಣಕಾಸು ಸಂಸ್ಥೆಯಲ್ಲಿ ನೌಕರರಾಗಿದ್ದು ಆ ಬಳಿಕ ಹಿರಣ್ಯ ಫೈನಾನ್ಸ್ ಎಂಬ ಸಂಸ್ಥೆಯನ್ನು ಸ್ಥಾಪಿಸಿದರು. ಬಡ್ಡಿ ವ್ಯವಹಾರದಲ್ಲಿ ಹೇರಳ ಧನ ಸಂಪಾದಿಸಿದರು. ಈ ಫೈನಾನ್ಸ್ ಕಂಪನಿಯ ವ್ಯವಹಾರಗಳನ್ನು ಪದ್ಮಪ್ರಿಯ ನೋಡಿಕೊಳ್ಳುತ್ತಿದ್ದರು. ಅವರಿಗೆ ಇಬ್ಬರು ಗಂಡು ಮಕ್ಕಳಿದ್ದಾರೆ. ಮೊನ್ನೆ ವಿಧಾನಸಭಾ ಚುನಾವಣೆಯಲ್ಲಿ ಆಕೆ ಗಂಡನ ಪರವಾಗಿ ಪ್ರಚಾರವೂ ಮಾಡಿದ್ದಾರೆ. ಊರಿನ ಜನಗಳ ಅಂಬೋಣದಂತೆ ಭಟ್ಟರ ಅಪಾರ ಆಸ್ತಿಯಲ್ಲಿ ಗಣನೀಯ ಭಾಗ ಅವರ ಹೆಂಡತಿಯ ಹೆಸರಲ್ಲೇ ಇದೆ. ರಘುಪತಿ ಭಟ್ಟರ ಕೆಲವು ಚಾಳಿಗಳಿಂದಾಗಿ ಪತಿ ಪತ್ನಿಯ ನಡುವೆ ಕೆಲಕಾಲದಿಂದ ವಿರಸ ಏರ್ಪಟ್ಟು ಅದು ವಿಚ್ಛೇದನದ ಹಂತದವರೆಗೂ ಹೋಗಿತ್ತಂತೆ. ಅಷ್ಟರಲ್ಲೇ ಚುನಾವಣೆ ಬಂದುದರಿಂದ ಉಡುಪಿಯ ಬಿ.ಜೆ.ಪಿ.ಯ ಘಟಾನುಘಟಿ ಮುಂದಾಳುಗಳು ಮಧ್ಯಸ್ಥಿಕೆ ವಹಿಸಿ ಚುನಾವಣೆ ಮುಗಿಯುವವರೆಗೆ ವಿಚ್ಛೇದನ ಬೇಡವೆಂದು ಹೇಳಿದ್ದರಂತೆ. ಇದೀಗ ಚುನಾವಣೆ ಮುಗಿದ ಮೇಲೂ ಪರಿಸ್ಥಿತಿ ಬದಲಾಗದ ಕಾರಣ ಪದ್ಮಪ್ರಿಯ ಗಂಡನನ್ನು ತೊರೆದು ಹೋಗಲು ನಿರ್ಧರಿಸಿ ಮನೆ ಬಿಟ್ಟಿದ್ದರಂತೆ. ಪದ್ಮಪ್ರಿಯಾ ಗಂಡನನ್ನು ತೊರೆದು ಹೋಗಿದ್ದಲ್ಲಿ ಅವರ ಹೆಸರಿನಲ್ಲಿರುವ ಅಪಾರ ಮೊತ್ತದ ಆಸ್ತಿ ರಘುಪತಿ ಭಟ್ಟರ ಕೈತಪ್ಪಿ ಹೋಗುತ್ತಿತ್ತು. ಇದು ಪದ್ಮಪ್ರಿಯ ನಿಗೂಢ ಸಾವಿಗೆ ಮೂಲ ಕಾರಣವೆಂದೂ ಜನ ಆಡಿಕೊಳ್ಳುತ್ತಿದ್ದಾರೆ.

ಪದ್ಮಪ್ರಿಯಾ ಸಾವನ್ನಪ್ಪಿದ ದೆಹಲಿಯ ಶಮಾ ಅಪಾರ್ಟ್‌ಮೆಂಟಿನ 20ನೇ ನಂಬ್ರದ ಫ್ಲಾಟಿನ ಬಾಗಿಲನ್ನು ಒಡೆದು ಪೋಲೀಸರು ಪ್ರವೇಶಿಸಿದಾಗ ಫ್ಯಾನಿನ ಕೊಕ್ಕೆಗೆ ನೇಣು ಹಾಕಿಕೊಂಡಿದ್ದ ಪದ್ಮಪ್ರಿಯ ಶವದ ಮೊಣಕಾಲುಗಳು ನೆಲಕ್ಕೆ ತಾಗಿಕೊಂಡಿದ್ದವು ಎಂದೂ ಪತ್ರಿಕೆಗಳು ವರದಿ ಮಾಡಿವೆ. ಆಕೆಯ ಕಾಲ ಬಳಿ ಸ್ಟೂಲ್ ಅಥವಾ ಕುರ್ಚಿ ಇರಲಿಲ್ಲ. ಬೇರೊಂದು ಕೊಠಡಿಯಲ್ಲಿದ್ದ ಕುರ್ಚಿ ಮೇಜುಗಳಲ್ಲಿ ಧೂಳು ತುಂಬಿತ್ತು. ಇಡೀ ಮನೆಯಲ್ಲಿ ಧೂಳು, ಕಸ ಹರಡಿತ್ತು; ಜನ ವಾಸ್ತವ್ಯದ ಕುರುಹೇ ಇರಲಿಲ್ಲವೆಂದೂ ಮಾಧ್ಯಮಗಳು ಹೇಳಿವೆ. ಜೂನ್ 15 ರಂದು ದೆಹಲಿಗೆ ತೆರಳಿದ್ದ ಉಳ್ಳಾಲದ ಪೋಲೀಸ್ ನಿರೀಕ್ಷಕ ಜಯಂತ್ ವಿ.ಶೆಟ್ಟಿ ಅವರು ತಮ್ಮ ತಂಡ ಬಾಗಿಲು ಒಡೆದು ಒಳಗೆ ಹೋದಾಗ ಪದ್ಮಪ್ರಿಯಾ ಶವ ಸಂದೇಹ ಬಾರದ ರೀತಿಯಲ್ಲಿ



ಪದ್ಮಾ ಕೊಲೆ ಮುಚ್ಚಿ ಹಾಕಲು ಯತ್ನ

ಪದ್ಮಪ್ರಿಯಾ ಸಾವಿನ ಸುತ್ತ ಅನುಮಾನಗಳ ಹುತ್ತ..

ಜೋತಾಡುತ್ತಿತ್ತೆಂದೂ ಹೇಳಿದ್ದಾರೆ. ಇವೆರಡರಲ್ಲಿ ಯಾವುದು ಸತ್ಯ? ಜಯಂತ್ ವಿ.ಶೆಟ್ಟಿ ಅವರ ತಂಡ ಫ್ಲಾಟಿನ ಬಾಗಿಲು ಒಡೆದು ಹೋಗುವುದಕ್ಕೆ ಮೊದಲೇ ರಘುಪತಿಭಟ್, ಕಾರ್ಕಳದ ಮಾಜಿ ಶಾಸಕ ಸುನಿಲ್ ಕುಮಾರ್ ಸೇರಿದಂತೆ ಭಟ್ಟರ ಅಣ್ಣ ಅತ್ತಿಗೆ ಮುಂತಾದವರನ್ನೊಳಗೊಂಡ ತಂಡವು ಈ ಫ್ಲಾಟಿಗೆ ಭೇಟಿ ನೀಡಿತ್ತು ಎಂಬುದು ಕಾವಲುಗಾರನಿಂದ ತಿಳಿದುಬಂದಿತು ಎಂದಿದ್ದಾರೆ ಜಯಂತ್‌ಶೆಟ್ಟಿ.

'ಬಾಯಿ ಮಾತ್ರ ಇಲ್ಲ'

ಸಾಕಷ್ಟು ಗೊಂದಲಮಯವಾಗಿರುವ ಈ ಪ್ರಕರಣಕ್ಕೆ ಉಡುಪಿಯ ಡಿವೈಎಸ್‌ಪಿ ಇನ್ನೊಂದು ಬಾಂಬ್ ಸಿಡಿಸಿ ಅದನ್ನು ಇನ್ನಷ್ಟು ಒಗಟಾಗಿ ಪರಿವರ್ತಿಸಿದ್ದಾರೆ. ಅವರ ಪ್ರಕಾರ ತಾ:14.06.08ರಂದು ಡಿವೈಎಸ್‌ಪಿ ನಾಗರಾಜ್ ನೇತೃತ್ವದ ತಂಡವು ಮುರ್ಡೇಶ್ವರದಲ್ಲಿ ಪದ್ಮಪ್ರಿಯಾ ಅವರನ್ನು ಅವರ ಸೋದರ ಸಂಬಂಧಿ ಶ್ರೀನಿವಾಸ ಆಚಾರ್ಯ ಎಂಬುವರ ಮನೆಯಲ್ಲಿ ಜೀವಂತ ಕಂಡಿದ್ದಾರೆ. 'ಪದ್ಮಪ್ರಿಯಾಳನ್ನು ಬಿಟ್ಟು ಬಿಡಿ, ಅವಳನ್ನು ನಾವು ನೋಡಿಕೊಳ್ಳುತ್ತೇವೆ' ಎಂದು ಶ್ರೀನಿವಾಸ ಆಚಾರ್ಯ ಹೇಳಿದ ಕಾರಣ ಬಿಟ್ಟು ಬಂದಿರುತ್ತೇವೆ. ಅಲ್ಲಿಂದ ಪದ್ಮಪ್ರಿಯಾ ಅಲ್ಲಿ ತಲುಪಿದ್ದು ಹೇಗೆ ಎಂಬ ಮಾಹಿತಿ ನನಗಿಲ್ಲ' ಎಂದಿದ್ದಾರೆ. ಡಿವೈಎಸ್‌ಪಿ ನಾಗರಾಜ್, ಈ ವಿಚಾರವನ್ನು ಪಶ್ಚಿಮ ವಲಯದ ಐಜಿಪಿ ಎ.ಎಂ.ಪ್ರಸಾದ್‌ಗೂ ತಿಳಿಸಿದ್ದೇನೆ ಎನ್ನುವ ಶ್ರೀ ನಾಗರಾಜ್ "ಎಲ್ಲವೂ ಗೃಹ ಸಚಿವ ಡಾ:ವಿ.ಎಸ್.ಆಚಾರ್ಯರ ಮತ್ತು ಮೇಲಿನ ಅಧಿಕಾರಗಳ ಆಜ್ಞೆಯಂತೆಯೇ ನಡೆದಿದೆ. ನಾವು ಮಾತ್ರ ಈ ಪ್ರಕರಣದಲ್ಲಿ ಸುಮ್ಮನೇ ಬಲಿಪಶುಗಳಾಗಿದ್ದೇವೆ" ಎಂದು ನೊಂದು ನುಡಿದಿದ್ದಾರೆ. ವಿಶೇಷ ತನಿಖಾದಳದ ಮುಖ್ಯಸ್ಥ ಶ್ರೀ ಶಂಕರ ಬಿದರಿಯವರು "ನಮಗೆ, ಕಣ್ಣು ಇದೆ, ಕಿವಿ ಇದೆ, ಬಾಯಿ ಮಾತ್ರ ಇಲ್ಲ ಎಂದಿರುವುದು ಅರ್ಥಪೂರ್ಣವಾಗಿದೆ.



ಡಿವೈಎಸ್‌ಪಿ ನಾಗರಾಜ್, ಈ ವಿಚಾರವನ್ನು ಪಶ್ಚಿಮ ವಲಯದ ಐಜಿಪಿ ಎ.ಎಂ.ಪ್ರಸಾದ್‌ಗೂ ತಿಳಿಸಿದ್ದೇನೆ ಎನ್ನುವ ಶ್ರೀ ನಾಗರಾಜ್ "ಎಲ್ಲವೂ ಗೃಹ ಸಚಿವ ಡಾ:ವಿ.ಎಸ್.ಆಚಾರ್ಯರ ಮತ್ತು ಮೇಲಿನ ಅಧಿಕಾರಗಳ ಆಜ್ಞೆಯಂತೆಯೇ ನಡೆದಿದೆ. ನಾವು ಮಾತ್ರ ಈ ಪ್ರಕರಣದಲ್ಲಿ ಸುಮ್ಮನೇ ಬಲಿಪಶುಗಳಾಗಿದ್ದೇವೆ" ಎಂದು ನೊಂದು ನುಡಿದಿದ್ದಾರೆ. ವಿಶೇಷ ತನಿಖಾದಳದ ಮುಖ್ಯಸ್ಥ ಶ್ರೀ ಶಂಕರ ಬಿದರಿಯವರು "ನಮಗೆ, ಕಣ್ಣು ಇದೆ, ಕಿವಿ ಇದೆ, ಬಾಯಿ ಮಾತ್ರ ಇಲ್ಲ ಎಂದಿರುವುದು ಅರ್ಥಪೂರ್ಣವಾಗಿದೆ.

ಒಟ್ಟಿನಲ್ಲಿ ಇಡೀ ಪ್ರಕರಣವನ್ನು ಗೊಂದಲದಲ್ಲಿ ಕೆಡವಿ ಪದ್ಮಪ್ರಿಯಾ ಸಾವಿಗೆ ಪರೋಕ್ಷ ಕಾರಣವಾದ ರಾಜ್ಯ ಸರ್ಕಾರ ಮತ್ತು ರಘುಪತಿಭಟ್ಟರ ಗಾಡ್‌ಫಾದರ್ ಗೃಹ ಸಚಿವರು ಉದ್ದೇಶಪೂರ್ವಕವಾಗಿ ತನಿಖೆಯನ್ನು ದಾರಿ ತಪ್ಪಿಸುತ್ತಿದ್ದಾರೆ ಎಂದೆನಿಸುತ್ತದೆ. ಈ ಹಿನ್ನೆಲೆಯಲ್ಲಿ ಇಡೀ ಪ್ರಕರಣವನ್ನು ಸಿ.ಬಿ.ಐ. ತನಿಖೆಗೆ ಒಪ್ಪಿಸಬೇಕೆಂದು ರಾಜ್ಯದ ಜನತೆ ಒಕ್ಕೊರಲಿನಿಂದ ಒತ್ತಾಯಿಸುತ್ತಿದ್ದರೂ ಗೃಹ ಸಚಿವರು 'ನನಗೆ ರಾಜ್ಯದ ಪೋಲೀಸರಲ್ಲಿ ವಿಶ್ವಾಸವಿದೆ;' ಸಿ.ಬಿ.ಐ.ಗೆ ಒಪ್ಪಿಸುವ ಪ್ರಶ್ನೆಯೇ ಇಲ್ಲ'ವೆಂದು ಬುಸುಗುಟ್ಟಿದ್ದಾರೆ. ಪೋಲಿಸರಲ್ಲಿ ಎಲ್ಲರಿಗೂ ವಿಶ್ವಾಸ ಇರಬಹುದು. ಈಗ ರಾಜ್ಯದ ಜನತೆಗೆ ಗೃಹಸಚಿವರಲ್ಲೇ ವಿಶ್ವಾಸವಿಲ್ಲವೆನ್ನುವ ಪರಿಸ್ಥಿತಿಯನ್ನು ಅವರೇ ನಿರ್ಮಿಸಿಕೊಂಡಿದ್ದಾರೆ. ರಾಜ್ಯ ಸರ್ಕಾರದ ಮೇಲೆ ಜನತೆ ಅಳಿದುಳಿದ ವಿಶ್ವಾಸವಾದರೂ ಉಳಿಯಬೇಕಿದ್ದರೆ ಸರ್ಕಾರವು ಪದ್ಮಪ್ರಿಯಾ ಸಾವಿನ ಪ್ರಕರಣವನ್ನು ಈ ಕೂಡಲೇ ಸಿ.ಬಿ.ಐ.ಗೆ ಒಪ್ಪಿಸಿ ತನ್ನ ವಿಶ್ವಾಸಾರ್ಹತೆಯನ್ನು ಮರಳಿ ಗಳಿಸಲಿ.

■ ಎ.ಎಸ್.ಆಚಾರ್ಯ,
ಉಡುಪಿ



ಗೃಹ ಸಚಿವರ ರಾಜಿನಾಮೆ, ಸಿಬಿಐ ತನಿಖೆಗಾಗಿ ಒತ್ತಾಯಿಸಿ ಜನವಾದಿ ಮಹಿಳಾ ಸಂಘಟನೆಯ ಪ್ರತಿಭಟನೆ-ಬೆಂಗಳೂರಿನಲ್ಲಿ

ರಘುಪತಿ ರಾಘವ

ಆತನಿಗೆ ಅಲ್ಲಲ್ಲಿ ಇದ್ದರೂ ಬಿಡದಿ
ಮನೆಯಲ್ಲಿ ಹಾಗಲ್ಲ ಒಬ್ಬಳೇ ಮಡದಿ
ಈ ಮಡದಿ ರಘುಪತಿ ರಾಘವನ ಸ್ಮರಣೆ
ಮಾಡುತ್ತಾ ಇರಬೇಕು ಮನ ಒಳಗೆ ಭಜನೆ
\- ವಿಡಂಬಾರಿ

'ಶಾಂತಿ ಕದಡಿದ ಕ್ರಾಂತಿ?!'

ಅದು ಪುಟ್ಟ ಹಳ್ಳಿ ಕೃಷಿಯೇ ಜನರ ನಿತ್ಯದ ಬದುಕು. ಪರಸ್ಪರ ಸಹಕಾರ, ಸಹಬಾಳ್ವೆ ಅದರ ಜೀವಾಳ. ಸುಗ್ಗಿಯ ಸೊಗಸಾದ ಬೆಳೆಯ ಹರ್ಷ ಊರೆಲ್ಲಾ ತುಂಬಿತ್ತು. ಮಗಳ ಮದುವೆ, ಶುಭ ಕಾರ್ಯಗಳು ಎಲ್ಲರ ಕಣ್ಣನಲ್ಲಿ ಮಿಂಚುತ್ತಿದ್ದವು. ಹೊಸ ಚೈತನ್ಯವ ಕಾಣದ ಕೈಗಳ ಕಾಣದ ಕೃತ್ಯಗಳು ಈ ಹಳ್ಳಿಯ ಬದುಕನ್ನು ಸ್ಮಶಾನ ಮೌನ ತರುತ್ತದೆ ಎಂದು ಯಾರೂ ಬಯಸಿರಲಿಲ್ಲ. ಆ ದಿನ ಬಂದೆ ಬಿಟ್ಟಿತು.

ಬಡ ರೈತನಾದ ಹುಸೇನಪ್ಪ ತನ್ನ ಬೆಳೆಗೆ ಬಳಸಿದ ರಸಗೊಬ್ಬರದಿಂದ ಫಸಲು ಪೂರ್ಣವಾಗಿ ನಾಶವಾಗುತ್ತದೆ. ರೈತನ ಮನವಿಯಂತೆ ಇಲಾಖೆ ಕೃಷಿ ಭೂಮಿಯ ತಪಾಸಣೆ ನಡೆಸುವಾಗ ಭೂಮಿಯಲ್ಲಿ 'ಚಿನ್ನ'ದ ನಿಕ್ಷೇಪವಿರುವ ಅಂಶ ಬಯಲಾದಾಗ ಬಹುರಾಷ್ಟ್ರೀಯ ಕಂಪನಿಗಳು ಸರ್ಕಾರದ ಮೂಲಕ ಭೂಮಿಯನ್ನು ವಶಪಡಿಸಿಕೊಳ್ಳಲು, ಭ್ರಷ್ಟ ರಾಜಕೀಯ ನಾಯಕರ ಸಹಕಾರದಿಂದ ಭೂಮಿಯನ್ನು ಕಿತ್ತುಕೊಳ್ಳಲು ಹವಣಿಸುತ್ತಾರೆ. ಬಡ ಮುಸ್ಲಿಂ ರೈತ ಹುಸೇನನ್ನು ಕೊಲೆ ಮಾಡುವಲ್ಲಿ ಯಶಸ್ವಿಯಾದ ರಾಜಕೀಯ ಶಕ್ತಿಗಳು ಈ ಕೊಲೆ ಆಪಾದನೆಯನ್ನು ಹಳ್ಳಿಯ ರೈತರ ಹಾಕುತ್ತಾರೆ.


ಬಡಕಲು ಮೈಯ ಹರುಕಲು ಬಟ್ಟೆಯ ರೈತರು ಪೋಲಿಸರ ದಬ್ಬಾಳಿಕೆಗೆ ಪ್ರತಿಕ್ರಿಯೆಯಾಗಿ ಕಾಡಿನಲ್ಲಿ ಮರೆಯಾಗುತ್ತಾರೆ. ಪೋಲೀಸರ ದೌರ್ಜನ್ಯಕ್ಕೆ ಹಳ್ಳಿ ನಡುಗಿ ಹೋಗುತ್ತದೆ. ಅಮಾಯಕ ಮುಗ್ಧ ಮಹಿಳೆಯರೂ, ಯುವತಿಯರು, ಮಕ್ಕಳ ಬಲಿಯಾಗುತ್ತದೆ. ಗ್ರಾಮ ತೊರದ ರೈತರನ್ನು ನಕ್ಸಲ್ ಎಂದು ಪತ್ರಿಕೆಯಲ್ಲಿ ಪ್ರಕಟಿಸಿ ಸಿಕ್ಕ ಸಿಕ್ಕ ರೈತರನ್ನು ಭೇಟೆಯಾಡುವ ಪೋಲೀಸ್ ಬಂದೂಕು ಅರ್ಭಟಿಸುತ್ತದೆ.

ಕಾಡಲ್ಲಿ ದಿನ ಸ್ಥಳ ಬದಲಾಯಿಸುತ್ತಾ ಅಲೆಯಬೇಕಾದ ಪರಿಸ್ಥಿತಿ, ಹಳ್ಳಿಯ ಸ್ಮಶಾನ ಸದೃಶ್ಯ ಸ್ಥಿತಿ ಕುಟುಂಬದ ಸೆಳೆತ ಒಂದು ಕಡೆ, ಭೂಮಿಯನ್ನು ನಂಬಿ ಬದುಕಿದ ರೈತರು ಭೂಮಿಯನ್ನು ಬಿಟ್ಟುಕೊಡಬೇಕಾದ ಪ್ರಶ್ನೆಗಳ ಮಧ್ಯೆ ರೈತರು ತಮ್ಮ ಭೂಮಿ ಉಳಿವಿಗೆ 'ಕ್ರಾಂತಿಕಾರಕ' ಮಾರ್ಗವನ್ನು ಹಿಡಿಯುತ್ತಾರೆ. ಬೇರೆ ಬೇರೆ ಹಳ್ಳಿಗಳಿಂದ ನೆರವಿನ ಪತ್ರಗಳು ಬರುವಾಗಲೇ ಪೋಲಿಸರ ಬಂದೂಕು ಇವರ ನೆಲೆಯನ್ನು ಗುರುತಿಸಿ ಸಾಮೂಹಿಕವಾಗಿ ಬಂದೂಕಿನ ಗುಂಡು ರೈತ ದೇಹ ಸೇರುತ್ತದೆ. ಹಳ್ಳಿಯಲ್ಲಿ ಪುಟ್ಟ ಪುಟ್ಟ ಮಕ್ಕಳನ್ನು ಸಹ ಬಂದೂಕು ಬದುಕಲು ಬಿಡುವುದಿಲ್ಲ. ಇದು ಶಾಂತಿ ಕದಡಿದ ಕ್ರಾಂತಿ ನಾಟಕದ ಕಥಾವಸ್ತು.

ಜಾಗತೀಕರಣದ ಕ್ರಿಯೆಯಲ್ಲಿ ರೈತರ ಬದುಕು ಹೆಚ್ಚು ಹೆಚ್ಚು ಅವಘಡಕ್ಕೆ ಸಿಲುಕುತ್ತಿದೆ. ಆಹಾರಧಾನ್ಯ ಉತ್ಪಾದಕ ರೈತರ ಭೂಮಿಯು ಈಗ ಗಣಿ, ರಿಯಲ್ ಎಸ್ಟೇಟ್‌ಗಳ ಹೆಸರಿನಲ್ಲಿ ಖಾಸಗಿ ಕಂಪನಿ/ವ್ಯಕ್ತಿಗಳ ಪಾಲಾಗುತ್ತಿದೆ. ಅವರ ಅನುಕೂಲಕ್ಕೆ ತಕ್ಕಂತೆ ಸರ್ಕಾರದ ಕಾನೂನುಗಳು ಬದಲಾಗುತ್ತಾ ಮಣ್ಣಿನ ಮಕ್ಕಳ ಬದುಕನ್ನು ಮಣ್ಣಾಗಿಸುವ ಕ್ರಮಗಳು ಒಂದರ ಹಿಂದೆ ಬಂದು ಸಾಲುಗಟ್ಟಿ ಬರುತ್ತಿವೆ. ಇಂತಹ ದಿನದಲ್ಲಿ ಈ ರೀತಿಯ ಪ್ರಸ್ತುತವಾದ ಕಥೆಯನ್ನು ರಂಗಭೂಮಿಯ ಮೂಲಕ ತರುವಲ್ಲಿ ಲೋಕೇಶ್ ಜಿ. ಭೈರಪ್ಪನಪಾಳ್ಯರವರು ಯಶಸ್ವಿಯಾದರೂ ಸಹ ನಾಟಕದ ಸಂದೇಶವನ್ನು ಅತ್ಯಂತ ವಿರೋಧಭಾಸವಾಗಿ ನೀಡಿರುವುದು ಕಂಡು ಬರುತ್ತದೆ.

ಒಟ್ಟಾರೆ ನಾಟಕದ ಸಂದೇಶ ವೈರುಧ್ಯತೆಯಿಂದ ಕೂಡಿದೆ. ಒಂದು ಕಡೆ ರೈತರ ಮೇಲೆ ಸರ್ಕಾರದ ದಮನಕಾರಿ ನೀತಿಯನ್ನು ತೋರಿಸುತ್ತಲೇ ಈ ನಾಟಕ ಹೇಳುವುದೇನು?

ಪ್ರತಿಭಟನೆ ಯಶಸ್ವಿಯಾಗುವುದಿಲ್ಲವೆಂದೇ? ಮಾಡಬೇಡಿ ಎಂದೇ? ದುಸ್ಸಾಹಸವಾದಿ ದಾರಿಯ ಹೋರಾಟ ಮಾಡಬೇಡಿ ಎಂದು ಬೇಕಾದರೆ ಹೇಳಬಹುದು. ಆದರೆ ಇಲ್ಲಿ ಹೋರಾಟವನ್ನು ಸರ್ಕಾರ ಸದೆಬಡಿಯುತ್ತದೆ. 'ಎಲ್ಲಾ ನಿರ್ನಾಮವಾಗುತ್ತದೆ' ಅದೇ ಕೊನೆಯೇ? ಇದು ಕೊನೆಗೂ ಪ್ರಶ್ನೆಯಾಗಿಯೇ ಉಳಿಯುತ್ತದೆ.



ಶಾಂತಿ ಕದಡಿದ ಕ್ರಾಂತಿ ಎಂಬ ನಾಟಕದ ಹೆಸರು ಕೇಳಿದರೆ ನಾಟಕಕಾರ ಹೋರಾಟ ಮಾಡಬೇಡಿ ಎಂದಂತೆ ಭಾಸವಾಗುತ್ತದೆ.

ನಾಟಕದ ಮಧ್ಯೆ ಮಧ್ಯೆ ಬರುವ ಜಂಗಮ (ಕಾಲ ಜ್ಞಾನಿ)ನ ಮೂಲಕ ಮುಂದೆ ನಡೆಯುವುದರ ಬಗ್ಗೆ ಭವಿಷ್ಯ ಹೇಳಿಸುವ ಸವಕಲು ತಂತ್ರ ಇಂತಹ ನಾಟಕಕ್ಕೆ ಸೂಕ್ತವಲ್ಲ. ಆದರಲ್ಲಿ ಕ್ರಾಂತಿಕಾರಿ ಚಳುವಳಿಗಾರರಿಗೆ ಭವಿಷ್ಯನುಡಿಯುವ ತಂತ್ರ ಅತ್ಯಂತ ವಿರೋಧಾಭ್ಯಾಸವಾದದ್ದು.

ಒಂದು ರಂಗ ಚಟುವಟಿಕೆಗೆ ರಂಗದ ಹಿಂದೆ ನಡೆಯುವ ವಿವಿಧ ಹಂತಗಳು ತುಂಬ ಮುಖ್ಯವಾದವುಗಳು. ಹಿನ್ನೆಲೆ ಸಂಗೀತ ಸಂಯೋಜನೆಯಲ್ಲಿ ಬಳಸಿದ 'ಸೋರುತಿಹುದು ಮನೆಯ ಮಾಳಿಗೆ' ಗೀತೆ ಪರಿಣಾಮಕಾರಿಯಾಗಿತ್ತು. ಬೆಳಕು ತುಂಬ ಕಡೆ ತಡವಾಗಿ ಗೋಚರಿಸಿದ್ದು, ಸಾಕಷ್ಟು ರಸಭಾಸವಾಗಲು ಕಾರಣವಾಯಿತು. ಪ್ರಸಾದನ ಎದ್ದು ಕಾಣುವಂತಿತ್ತು. ಬಿಗಿಯಾದ ನಿರ್ದೇಶನ ಮತ್ತು ಜಂಗಮನ ಪಾತ್ರ ಮಾಡಿದ ಹರೀಶ್.ಕೆ.ಎಸ್. ಅಭಿನಯ ನೆನಪಿನಲ್ಲಿ ಹುಳಿಯುವಂತದು. ವಯಸ್ಕನಾದ ಗೋಚಯ್ಯನ ಪಾತ್ರದಲ್ಲಿ ಲೋಕೇಶ್ ಬಿ.ಜಿ. ಹಾಗೂ ವಯಸ್ಕಯಾದ ಹನುಮಯ್ಯನ ಪಾತ್ರದಲ್ಲಿ ಹನುಮಕ್ಕನವರ ಅಭಿನಯ ಗ್ರಾಮೀಣ ನಡೆನುಡಿಯ ನೆನಪು ತರಿಸುವಂತದ್ದು, ಅಂಚಿನಪ್ಪ, ಹುಸೇನ್ ಪಾತ್ರದಲ್ಲಿ ಶಶಿಧರ್ ಎಸ್.ಕುಂದಾಪುರ ರವರ ಸಹಜ ಅಭಿನಯ, ಪೋಲೀಸ್ ಇನ್ಸ್‌ಪೆಕ್ಟರ್ ಪಾತ್ರದಲ್ಲಿ ಲಕ್ಷ್ಮೀನಾರಾಯಣರವರ ನಟನೆ, ರಾಜಕಾರಣಿ ದೇವಪ್ಪನಾಗಿ ಗೋಪಿ ಕೃಷ್ಣ ಎನ್, ಚೇಲನಾಗಿ ಗೋಕುಲ್ ಆರ್‌ರ ಕುತಂತ್ರ, ಸಾಕವ್ವನಾಗಿ ಬೃಂದಾ ಎಸ್‌ರ ಅಭಿನಯ ನೆನಪುಳಿಯುವಂತಹದು.

ಕನ್ನಡ ಸಂಸ್ಕೃತಿ ಇಲಾಖೆಯು ಪ್ರತಿ ಬುಧವಾರ ನಡೆಯುವ 'ಯುವ ಸೌರಭ' ಕಾರ್ಯಕ್ರಮವು 18.06.08ರ ಸಂಜೆ ನಯನ ರಂಗಮಂದಿರದಲ್ಲಿ ನಮ್ಮ ನಾಡು ಯುವಕರ ವಿವಿದೋದ್ದೇಶ ಸಂಘ ಈ ಪ್ರಯೋಗವನ್ನು ಅರ್ಪಿಸಿತ್ತು.

○ ವೀರಣ್ಣ ಕಲ್ಮನಿ,
ಬಾಚಿಗೊಂಡನಹಳ್ಳಿ

ವಿನಿವಿಂಕ್ ಶಾಸ್ತ್ರಿಯೂ, ಲಾಲೂ ಪ್ರಸಾದನೂ....

ಪುಟ 4 ರಿಂದ

ನಿರ್ಣಯಗಳನ್ನು ಕೈಗೊಂಡಿದೆ. ದೇಶಾದ್ಯಂತ ಇಂತಹ ಸಮಾವೇಶ, ರ್‍ಯಾಲಿ ನಡೆಸಲು ಯೋಜಿಸಲಾಗಿದೆ.

ಭಯೋತ್ಪಾದನೆ ಇಸ್ಲಾಂ ತತ್ವಗಳಿಗೆ ವಿರುದ್ಧವಾದದ್ದು. ಜೆಹಾದ್ (ಧರ್ಮಯುದ್ಧ) ಕಲ್ಪನೆಯನ್ನು ಭಯೋತ್ಪಾದಕ ಚಟುವಟಿಕೆ ಯೊಂದಿಗೆ ತುಳುಕು ಹಾಕುವುದು ತಪ್ಪು. ಅಮಾಯಕರನ್ನು ಕೊಲ್ಲುವುದು, ಕೊಲೆ, ಲೂಟಿ, ರಕ್ತಪಾತಗಳು ಭಯೋತ್ಪಾದಕ ಕೃತ್ಯವೇ ಹೊರತು ಜೆಹಾದ್ ಅಲ್ಲ. ಜೆಹಾದ್ ಅಂದರೆ ಶಾಂತಿ ಸ್ಥಾಪನೆಗಾಗಿ ನಡೆಯುವಂತಹದ್ದು. ಅದು ವಿದ್ವಂಸಕ ಕೃತ್ಯ ಅಲ್ಲ. ಭಯೋತ್ಪಾದನೆ ಒಂದು ವಿದ್ವಂಸಕ ಕೃತ್ಯ ಎಂದು ಸಮಾವೇಶದ ನಿರ್ಣಯ ಘೋಷಿಸಿದೆ.

ಮತ್ತೆ ಉತ್ತರ ಪ್ರದೇಶದ ಇಮಾಮರು ಗಳೆಲ್ಲಾ ಸೇರಿ ಪ್ರತಿ ಶುಕ್ರವಾರ ನಮಾಜ್‌ನ ನಂತರ ಯುವಕರಿಗೆ ಭಯೋತ್ಪಾದನೆ ವಿರುದ್ಧ ತಿಳುವಳಿಕೆ ಹೇಳುವ ಕೆಲಸವನ್ನು ಆರಂಭಿಸಿದ್ದಾರೆ.

ಲಾಲೂ ಪ್ರಸಾದ್ ಯಾದವ್‌ರಂತಹ ನಾಯಕರನ್ನು ಭ್ರಷ್ಟತೆಯ ಒಂದು ಸಂಕೇತವೆಂಬಂತೆ ಭಾರತದ ರಾಜಕಾರಣದಲ್ಲಿ ಬಿಂಬಿಸಲಾಗುತ್ತದೆ. ತಮಾಷೆಯ ವಿಷಯ ಎಂದರೆ ಲಾಲೂರವರ ಭ್ರಷ್ಟಾಚಾರದ ಹಲವಾರು ಪಟ್ಟು ದೊಡ್ಡ ಭ್ರಷ್ಟಾಚಾರದ ಹಗರಣಗಳಲ್ಲಿ ಸಿಕ್ಕಿಬಿದ್ದವರು ಭ್ರಷ್ಟತೆಯ ಸಂಕೇತ ಆಗೇ ಇಲ್ಲ.

ಬಿಜೆಪಿಯ ಸಂಸದ, ಮಾಜಿ ಕೇಂದ್ರ ಸಚಿವ ಅನಂತಕುಮಾರ ನಡೆಸಿರುವ ಭ್ರಷ್ಟಾಚಾರಗಳೇನು ಕಡಿಮೆಯವೇ? ಹುಡ್ಕೋ ಹಗರಣ ಎಂಥ ಭೀಕರ ಹಗರಣ. ಆದರೆ ಬ್ರಾಹ್ಮಣ ಅನಂತಕುಮಾರ್ ಭ್ರಷ್ಟ ಅನ್ನಿಸಿಕೊಳ್ಳದೇ ಈಗಲೂ ಮಹಾನ್ ಸಭ್ಯಸ್ಥನಾಗಿ ಮಿರಿ ಮಿರಿ ಮಿಂಚುವುದರ ಹಿಂದಿನ ರಹಸ್ಯವೇನು? ಹಿಂದುಳಿದ ವರ್ಗದ ಲಾಲೂ ಭ್ರಷ್ಟತೆಯ ಸಂಕೇತವೇ ಆಗುವುದರ ಅರ್ಥವೇನು.

ಸಣ್ಣಪುಟ್ಟ ಕಳ್ಳತನಗಳಲ್ಲಿ ಆಕಸ್ಮಾತ್ ಮುಸ್ಲೀಮರ ಹೆಸರುಗಳು ಕಂಡುಬಂದರೆ ಮುಸ್ಲಿಮರೆಲ್ಲಾ ಕಳ್ಳರು, ದರೋಡೆಕೋರರು ಎಂದು ತೀರ್ಪು ಕೊಡುವ ಮಂದಿ ತುಂಬಾ ಜನ ಇದ್ದಾರೆ.

ಕಳ್ಳರ ಹೆಸರಿನ ಪಟ್ಟಿಯಲ್ಲಿ ನಾಗರಾಜ, ವೆಂಕಟೇಶ, ಮುರಳಿ, ಗೋಪಾಲ ಇಂತಹ ಹೆಸರುಗಳು ಕಂಡುಬಂದಾಗ ಜಾಗೃತವಾಗದ ಅವರ 'ಧರ್ಮಪ್ರಜ್ಞೆ' ಈ ಪಟ್ಟಿಯಲ್ಲಿ ಅಹಮದ್, ರಫೀಕ್, ಅಬ್ದುಲ್ಲಾ, ಮುಲ್ಲಾ ಇಂತಹ ಹೆಸರುಗಳು ಕಂಡುಬಂದಾಗ ಕೆರಳಿಬಿಡುತ್ತದೆ. ದೇಶದ ಆರ್ಥಿಕತೆಯನ್ನೇ ಅಲುಗಾಡಿಸಿದಂತಹ ಷೇರು ಹಗರಣದ ಆರೋಪಿ ಹರ್ಷದ್ ಮೆಹತಾ ಎಷ್ಟೋ ಜನರ ಪಾಲಿನ ಹೀರೋ ಆಗಿ ಉಳಿಯುತ್ತಾನೆ.

ಬಡತನ, ನಿರುದ್ಯೋಗ ಮತ್ತು ಈ ವ್ಯವಸ್ಥೆಯಲ್ಲಿ ಅಂತಹ ಸನ್ನಿವೇಶಗಳು ಸೃಷ್ಟಿಸುವ ಒತ್ತಡಗಳಲ್ಲಿ ಸಣ್ಣಪುಟ್ಟ ಕಳ್ಳತನ ನಡೆಸುವ 'ನಾಸಿರ್' ಒಬ್ಬ ಕಳ್ಳ ಮಾತ್ರವಲ್ಲ ದೇಶದ್ರೋಹಿಯಾಗಿ ಕಾಣುವುದರ ಹಿಂದೆ ನಮ್ಮ ದೇಶದ ಸಾಮಾಜಿಕ, ಆರ್ಥಿಕ ಪರಿಸ್ಥಿತಿಗಳಿಗೆ ಸಂಬಂಧಿಸಿದ ಏನೇನೋ ಪೂರ್ವಾಗ್ರಹಗಳಿರುತ್ತವೆ. ಅಲ್ಲವೇ?

ಬಾಲಂಗೋಚಿ

ದೆಹಲಿಯ ಭಯೋತ್ಪಾದನಾ ವಿರೋಧಿ ಸಮಾವೇಶದಲ್ಲಿ ಪಾಲ್ಗೊಂಡ ಸ್ವಾಮಿ ಅಗ್ನಿವೇಶ್ ಒಂದು ಪ್ರಶ್ನೆ ಕೇಳಿದ್ದಾರೆ. ರಾಷ್ಟ್ರಪಿತ ಮಹಾತ್ಮಗಾಂಧಿ, ಇಂದಿರಾಗಾಂಧಿ, ರಾಜೀವ್‌ಗಾಂಧಿ ಇವರೆಲ್ಲಾ ಅಮಾನುಷ ಹತ್ಯೆಗೆ ಗುರಿಯಾದರು. ಇವರನ್ನೆಲ್ಲಾ ಕೊಂದವರು ಯಾರು. ಮುಸ್ಲಿಂ ಭಯೋತ್ಪಾದಕರೇ ಅಂತ ಅವರ ಪ್ರಶ್ನೆ? ಪ್ರವೀಣ್ ತೊಗಾಡಿಯಾ, ಮೋದಿಯಂಥವರು ಯಾರಾದರೂ ಇದಕ್ಕೆ ಉತ್ತರ ಕೊಡುತ್ತಾರೆಯೇ?

ಅಣು ಒಪ್ಪಂದ : ದೇಶವನ್ನು ಅಮೆರಿಕಾದ ದುಷ್ಟ ಹಿಡಿತಕ್ಕೊಪ್ಪಿಸುವ ತಹತಹ


ಭಾರತದ ಸಾರ್ವಭೌಮತೆ, ಜನತೆಯ ಹಿತವನ್ನು ಕಡೆಗಣಿಸಿ ಯುಪಿಎ ಸರ್ಕಾರ ಅಮೆರಿಕಾದೊಂದಿಗೆ ಅಣು ಒಪ್ಪಂದಕ್ಕೆ ಹಾತೊರೆಯುತ್ತಿದೆ. ಇದು ಕೇವಲ ಅಣು ಒಪ್ಪಂದವಲ್ಲ, ಭಾರತದ ವಿದೇಶಾಂಗ ನೀತಿ, ರಕ್ಷಣಾ ವಿಷಯ, ವ್ಯಾಪಾರ ಒಪ್ಪಂದಗಳು ಹೀಗೆ ಇಡೀ ಭಾರತದ ಭವಿಷ್ಯದ ಮೇಲೆ ಅಮೆರಿಕಾದ ದುಷ್ಟ ಮುಷ್ಟಿಯ ಹಿಡಿತ ಬಿಗಿಯಾಗುತ್ತದೆ.

ಇಡೀ ಪ್ರಪಂಚವನ್ನೇ ತನ್ನ ಕಪಿಮುಷ್ಟಿಯಲ್ಲಿ ಇಟ್ಟುಕೊಳ್ಳಲು ಅಮೆರಿಕ ನಿರಂತರವಾಗಿ ಪ್ರಯತ್ನಿಸುತ್ತಿದೆ. ಆ ಕಾರ್ಯತಂತ್ರದ ಒಂದು ಭಾಗವೇ ಭಾರತದೊಂದಿಗಿನ ಅಣು ಒಪ್ಪಂದ. ಏಷ್ಯ ಖಂಡದಲ್ಲಿ ತನ್ನ ಪ್ರಾಬಲ್ಯ ಸ್ಥಾಪಿಸಬೇಕೆಂದು ಅಮೆರಿಕದ ದೀರ್ಘಕಾಲೀನ ಕಾರ್ಯತಂತ್ರವಾಗಿದೆ. ಈ ಅಣುಒಪ್ಪಂದದ ಮೂಲಕ ಅದನ್ನು ಕಾರ್ಯಸಾಧ್ಯ ಮಾಡಿಕೊಳ್ಳಲು ಹೊರಟಿದೆ. ಏಷ್ಯಾ ವಲಯದಲ್ಲಿ ಚೀನಾ ಮತ್ತು ಉತ್ತರ ಕೊರಿಯಾಗಳು ಅಮೆರಿಕಕ್ಕೆ ಸಡ್ಡು ಹೊಡೆಯುತ್ತಿವೆ. ಅವುಗಳ ಬೆನ್ನೆಲುಬನ್ನು ಹೇಗಾದರೂ ಮಾಡಿ ಮುರಿಯಬೇಕೆಂದು ಕಾತರಿಸುತ್ತಿರುವ ಅಮೆರಿಕಕ್ಕೆ ಭಾರತ ಸೂಕ್ತ ಕಾರ್ಯತಂತ್ರದ ಪಾಲುದಾರ ದೇಶವಾಗಬೇಕಿದೆ. ಹಾಗಾಗಿ ಅಣು ಒಪ್ಪಂದದ ಮೂಲಕ ತನ್ನ ತಂತ್ರ ರೂಪಿಸಲು ಹೊರಟಿದೆ. ಇದರ ಹಿಂದೆ ಭಾರತಕ್ಕೆ ಸಹಾಯ ಮಾಡಬೇಕೆಂಬ ಒಂದಂಶವೂ ಅಮೆರಿಕಕ್ಕೆ ಇಲ್ಲ.

ಇಷ್ಟಾದರೂ ಈ ಅಣು ಒಪ್ಪಂದದ ನಂತರ ಭಾರತದಲ್ಲಿ ಉತ್ಪಾದನೆಯಾಗಲಿರುವ ವಿದ್ಯುತ್ ಪ್ರಮಾಣ ದೇಶಕ್ಕೆ ಬೇಕಾಗಿರುವ ಒಟ್ಟು ಪ್ರಮಾಣದಲ್ಲಿ ಶೇಕಡ 7ರಷ್ಟು ಮಾತ್ರ. ಇದಕ್ಕಾಗಿ 2020ರವರೆಗೂ ಕಾಯಬೇಕು. ಇಷ್ಟು ಮಾತ್ರಕ್ಕಾಗಿ ಇಡೀ ದೇಶವನ್ನೇ ಒತ್ತೆ ಇಡಲು ಯುಪಿಎ ಸರ್ಕಾರ ದಾಪುಗಾಲಿಟ್ಟಿದೆ.

ಈ ಒಪ್ಪಂದ ಕೇವಲ ಅಣು ವಿದ್ಯುತ್‌ಗೆ ಸಂಬಂಧಿಸಿದ್ದು ಎಂದು ಯಾರಾದರೂ ಭಾವಿಸಿದರೆ ಅವರಿಗಿಂತಲೂ ಮೂರ್ಖರು ಬೇರೊಬ್ಬರಿರಲಾರರು.

ಒಂದು ವೇಳೆ ಭಾರತಕ್ಕೆ ಸಹಾಯ ಮಾಡಬೇಕೆಂಬ ಆಶಯ ಅಮೆರಿಕಕ್ಕೆ ಇದ್ದಿದ್ದರೆ ಇರಾನ್-ಪಾಕ್-ಭಾರತ ಅನಿಲ ಪೈಪ್‌ಲೇನ್ ಯೋಜನೆಗೆ ವಿರೋಧ ವ್ಯಕ್ತಪಡಿಸುತ್ತಿರಲಿಲ್ಲ. ಹಾಗೆಂದ ಮೇಲೆ ಅಣು ವಿದ್ಯುತ್ ಒಪ್ಪಂದಕ್ಕೆ ಏಕೆ ಹಾತೊರೆಯುತ್ತಿರುವುದು ಏಕೆ ಎಂಬುದರ ಸೂಕ್ಷ್ಮವನ್ನು ಪ್ರತಿಯೊಬ್ಬರೂ ಅರಿಯಬೇಕು.



ಭಾರತ ಸ್ವಾತಂತ್ರ ಗಳಿಸುವ ಮೊದಲೂ, ನಂತರವೂ ಅಮೆರಿಕ ಎಂದೂ ಭಾರತಕ್ಕೆ ನೆರವಾಗಿಲ್ಲ. ರಷ್ಯಾ ಭಾರತಕ್ಕೆ ಕ್ರಯೋಜನಿಕ್ ತಂತ್ರಜ್ಞಾನ ನೀಡಲು ಮುಂದೆ ಬಂದಾಗಲೂ ಅಮೆರಿಕ ಅಡ್ಡಗಾಲು ಹಾಕಿತ್ತು. ಸ್ವಾತಂತ್ರ್ಯದ ನಂತರ ಭಾರತ ಇಷ್ಟೊಂದು ಅಗಾಧವಾಗಿ ಬೆಳೆಯಬೇಕಾದರೆ ಈ ಹಿಂದೆ ಸಮಾಜವಾದಿ ದೇಶಗಳಾಗಿದ್ದ ರಷ್ಯಾ, ಜಕೋಸ್ಲೋವಾಕಿಯಾ, ಯುಗೋಸ್ಲೋವಿಯಾ ಮತ್ತಿತರ ದೇಶಗಳು ಒದಗಿಸಿದ ನೆರವು, ಸಹಾಯ ಕಾರಣವೇ ಹೊರತು ಮತ್ಯಾರೂ ಅಲ್ಲ.

1970ರ ದಶಕದಲ್ಲಿ ಭಾರತ ಭೀಕರ ಬರಗಾಲಕ್ಕೆ ತುತ್ತಾಗಿತ್ತು. ಆಹಾರ ಧಾನ್ಯಗಳ ತೀವ್ರ ಅಭಾವ ಎದುರಿಸುತ್ತಿತ್ತು. ಆಗ ಗೋಧಿ ಒದಗಿಸಲು ಅಮೆರಿಕವನ್ನು ಕೋರಲಾಯಿತು. ಗೋಧಿ ಒದಗಿಸಲು ಸಮ್ಮತಿಸಿದ ಅಮೆರಿಕ ಪ್ರತಿ ಭಾರಿಯೂ ಒಂದಲ್ಲ ಒಂದು ಷರತ್ತನ್ನು ವಿಧಿಸುತ್ತಿತ್ತು. ಹೀಗೆ ಭಾರತವನ್ನು ತುಳಿಯಲು ಅಮೆರಿಕ ನಡೆಸಿರುವ ಪಿತೂರಿಗಳ ಇತಿಹಾಸವೇ ಇದೆ.

ಅಣು ಒಪ್ಪಂದದಿಂದ ಪಡೆಯಬಹುದಾದ ಶೇಕಡ 7ರಷ್ಟು ವಿದ್ಯುತ್ (ಅದೂ 2020ರ ವೇಳೆಗೆ) ಉತ್ಪಾದಿಸಲು ಹತ್ತಾರು ಪರ್ಯಾಯ ಹಾದಿಗಳಿವೆ. ಕೇಂದ್ರ ಸರ್ಕಾರಕ್ಕೆ ಈ ಕುರಿತು ಮನವರಿಕೆ ಮಾಡಿಕೊಡಲಾಗಿದೆ. ಇದ್ಯಾವುದಕ್ಕೂ ಮುಂದಾಗದ ಯುಪಿಎ ಸರ್ಕಾರ ಭಾರತವನ್ನೇ ಒತ್ತೆ ಇಡಲು ಮುಂದಾಗಿದೆ.

ಅಮೆರಿಕ ಚೀನಾದೊಂದಿಗೂ ಅಣು ಒಪ್ಪಂದ ಮಾಡಿಕೊಂಡಿದೆ. ಆದರೆ ಅದರಲ್ಲಿ ಈ 'ಹೈಡ್ ಆಕ್ಟ್' ಆದರೆ ಭಾರತದೊಂದಿಗಿನ ಒಪ್ಪಂದದಲ್ಲಿ ಸೇರಿಸಲಾಗಿದೆ. ಭಾರತದ ವಿದೇಶಾಂಗ ನೀತಿ, ರಕ್ಷಣಾ ನೀತಿ, ಇತರ ದೇಶಗಳೊಂದಿಗಿನ ದ್ವಿಪಕ್ಷೀಯ ವಾಣಿಜ್ಯ ಒಪ್ಪಂದಗಳು ಸೇರಿದಂತೆ ಎಲ್ಲವೂ ಇದರ ವ್ಯಾಪ್ತಿಗೆ ಬರುತ್ತದೆ. ದೊಡ್ಡಣ್ಣನ ಸಮ್ಮತಿ ಇಲ್ಲದೆ ಒಂದೆಜ್ಜೆಯೂ ಮುಂದಿಡುವಂತಿಲ್ಲ.

ಭಾರತ, ಬ್ರೆಜಿಲ್‌ನಂತಹ ಹಲವಾರು ಅಭಿವೃದ್ಧಿಶೀಲ ದೇಶಗಳು ತಮ್ಮ ರೈತರನ್ನು ಸಂರಕ್ಷಿಸಲು ಅಮೆರಿಕದಲ್ಲಿ ನೀಡುತ್ತಿರುವ ಕೃಷಿ ಸಹಾಯಧನವನ್ನುಕಿಂಚಿತ್ತೂ ಕಡಿತಗೊಳಿಸಲು ಒಪ್ಪಿಲ್ಲ. ಹಾಗಾಗಿಯೇ ದೋಹಾ ಸುತ್ತಿನ ಡಬ್ಲ್ಯುಟಿಒ ಮಾತುಕತೆಗಳು ಇನ್ನೂ ಪೂರ್ಣಗೊಂಡಿಲ್ಲ. ಹೀಗಿರುವಾಗ ಭಾರತದ ಅಭಿವೃದ್ಧಿ, ಬೆಳವಣಿಗೆಗೆ ಅಮೆರಿಕ ನೆರವಾಗುತ್ತದೆ ಎಂದು ನಂಬಿದರೆ ಅದಕ್ಕಿಂತಲೂ ವಿಷಾದಕರ ವಿಷಯ ಮತ್ತೊಂದಿಲ್ಲ.

ಅಣು ಒಪ್ಪಂದವನ್ನು ಜಾರಿಗೊಳಿಸುವ ಪೂರ್ವಭಾವಿ ಪ್ರಯತ್ನವಾಗಿ ಕಳೆದ ವರ್ಷ ಜಪಾನ್, ಅಮೆರಿಕ, ಆಸ್ಟ್ರೇಲಿಯಾ ಮತ್ತು ಭಾರತಗಳು ಬಂಗಾಳ ಕೊಲ್ಲಿಯಲ್ಲಿ ಜಂಟಿ ಸಮರಾಭ್ಯಾಸ ನಡೆಸಿದವು. ಎನ್‌ಡಿಎ ಸರ್ಕಾರದ ಅಧಿಕಾರಾವಧಿಯಲ್ಲಿ ಅಂದಿನ ವಿದೇಶಾಂಗ ಸಚಿವ ಜಸ್ವಂತ್ ಸಿಂಗ್ ಹತ್ತಾರು ಬಾರಿ ಅಮೆರಿಕ ಸಚಿವರೊಂದಿಗೆ ಗುಪ್ತ ಮಾತುಕತೆ ನಡೆಸಿದ್ದರು. ಅವರು ನಡೆಸಿರುವ ಮಾತುಕತೆ ಏನೆಂದೂ ದೇಶದ ಜನತೆಗೆ ಒಮ್ಮೆಯೂ ತಿಳಿಸಲಿಲ್ಲ. ಇಡೀ ದೇಶವನ್ನೇ ಕತ್ತಲಲ್ಲಿ ಕೂಡಿಟ್ಟಿದ್ದರು. ಅದೇ ಕಾರ್ಯತಂತ್ರವನ್ನು ಯುಪಿಎ ಸರ್ಕಾರ ಮುಂದುವರೆಸಿದೆ.

ಭಾರತಕ್ಕೆ ಅಗತ್ಯವಿರುವ ಪೆಟ್ರೋಲಿಯಂ ಉತ್ಪನ್ನಗಳಲ್ಲಿ ಶೇಕಡ 30ರಷ್ಟು ಮಾತ್ರ ಇಲ್ಲೇ ಉತ್ಪಾದಿಸಲಾಗುತ್ತಿದೆ. ಉಳಿದ ಶೇಕಡ 70ರಷ್ಟನ್ನು ಆಮದು ಮಾಡಿಕೊಳ್ಳಲಾಗುತ್ತಿದೆ. ಹಾಗಾಗಿ ಇರಾನ್-ಪಾಕ್-ಇಂಡಿಯಾ ಅನಿಲ ಕೊಳವೆ ಯೋಜನೆ ತುಂಬಾ ಮುಖ್ಯ. ಈ ಯೋಜನೆ ಆಗಮಾಡದಂತೆ ತಡೆಯೊಡ್ಡಿದ್ದೆ ಅಮೆರಿಕ. ಇಷ್ಟು ಮಾತ್ರವಲ್ಲದೆ ಅಂತಾರಾಷ್ಟ್ರೀಯ ಅಣು ವಿದ್ಯುತ್ ಸಂಸ್ಥೆ (ಐಎಇಎ) ಸಭೆಯಲ್ಲಿ ಎರಡು ಬಾರಿ ಭಾರತ ಇರಾನ್ ವಿರುದ್ಧ ಮತ ಚಲಾಯಿಸುವಂತಹ ಒತ್ತಡ ಹೇರಿತ್ತು. ಅಂದ ಮೇಲೆ ಅಮೆರಿಕ ನಮ್ಮ ಮಿತ್ರ ಎಂದು ಹೇಳುವುದಕ್ಕಿಂತಲೂ ಬಾಲಿಷತನ ಮತ್ತೊಂದಿಲ್ಲ.


ಮತ್ತೊಂದು ಆಸಕ್ತಿಕರ ವಿಷಯ ಎಂದರೆ ಅಮೆರಿಕದಲ್ಲಿ ಉತ್ಪಾದಿಸುತ್ತಿರುವ ಅಣು ವಿದ್ಯುತ್ ಪ್ರಮಾಣ ಆ ದೇಶದ ಒಟ್ಟು ವಿದ್ಯುತ್ ಅಗತ್ಯತೆಯಲ್ಲಿ ಶೇಕಡ 4ಕ್ಕಿಂತಲೂ ಕಡಿಮೆ. ಅಮೆರಿಕ ತನ್ನ ದೇಶದ ಜನರನ್ನು ರಕ್ಷಿಸಲು ಭಾರತವನ್ನು ಬಲಿಪಶು ಮಾಡುತ್ತಿದೆ.

ರಸಗೊಬ್ಬರ ಅಭಾವ ರೈತರ ಎದೆಗೆ ಗುಂಡು...

ಪುಟ 5 ರಿಂದ

ಘಟನೆಯನ್ನು ತೀವ್ರವಾಗಿ ಖಂಡಿಸಿದರು. ರಸಗೊಬ್ಬರದ ವಿಚಾರದಲ್ಲಿ ಕೃಷಿ ಸಚಿವರು ಹಾಗೂ ಮುಖ್ಯಮಂತ್ರಿ ವ್ಯತಿರಿಕ್ತ ಹೇಳಿಕೆಗಳನ್ನು ಕೊಡುವ ಮೂಲಕ ಕೇಂದ್ರ ಸರ್ಕಾರವನ್ನು ಹೊಣೆ ಮಾಡುತ್ತಿರುವುದು ತನ್ನ ಹೊಣೆಗಾರಿಕೆಯಿಂದ ನುಣುಚಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ ಎಂದು ದೂರಿದರು. ವ್ಯಾಪಾರಸ್ಥರು ಅಕ್ರಮವಾಗಿ ಗೊಬ್ಬರವನ್ನು ಸಂಗ್ರಹಿಸಿರುವುದರಿಂದ ಕೃತಕ ಅಭಾವ ಉಂಟಾಗಿದೆ. ಮುಡಿಯೂರಪ್ಪನವರಿಗೆ ಧೈರ್ಯವಿದ್ದರೆ ಮುಟ್ಟುಗೋಲು ಹಾಕಲು ಮುಂದಾಗಲಿ ಎಂದು ಸವಾಲೆಸೆದರು.

ಕರ್ನಾಟಕ ರಾಜ್ಯ ರೈತ ಸಂಘದ ಮುಖಂಡ ಕೋಡಿಹಳ್ಳಿ ಚಂದ್ರಶೇಖರ್ ಮಾತನಾಡಿ ಹಾವೇರಿ ಗೋಲಿಬಾರ್ ಘಟನೆಯನ್ನು ಎಳೆ ಎಳೆಯಾಗಿ ಬಿಡಿಸಿಟ್ಟ ಅವರು ಘಟನೆಯನ್ನು ತೀವ್ರವಾಗಿ ಖಂಡಿಸಿದರು. ಗೋಲಿಬಾರ್ ಆಜ್ಞೆ ವಿಚಾರದಲ್ಲಿ ಗೃಹ ಸಚಿವರಾದಿಯಾಗಿ ಅಧಿಕಾರಿಗಳೂ ಕೂಡ ನುಣುಚಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ. ಇದು ಅತ್ಯಂತ ನಾಚಿಕೆಗೇಡಿನ ವಿಚಾರ ಎಂದರು.



ಸರ್ಕಾರದ ರಚನೆಗೆ ಮುಂಚಿನಿಂದಲೂ ರಸಗೊಬ್ಬರ ಅಭಾವವಿರುವುದು ಕಂಡು ಬಂದಿತ್ತು. ಪ್ರಮಾಣವಚನದ ಬಳಿಕ ಅಧಿಕಾರಿಗಳ ಸಭೆ ಕರೆದು ಸಮಸ್ಯೆಗಳ ಬಗ್ಗೆ ಚರ್ಚಿಸಿ ಪರಿಹಾರ ಕಂಡುಕೊಳ್ಳಬೇಕಿತ್ತು. ಆದರೆ ಸಮಸ್ಯೆ ಎದುರಾದಾಗ ತಪ್ಪು ನಮ್ಮದಲ್ಲ ಎಂದು ಕೈ ಚೆಲ್ಲಿ ಕುಳಿತಿರುವುದು ಸರಿಯಲ್ಲ. ರೈತರ ಗೋಲಿಬಾರ್‌ಗೆ ಸರ್ಕಾರವೇ ಕಾರಣ ಅದರಲ್ಲೂ ಮುಖ್ಯಮಂತ್ರಿಗಳೇ ಇದಕ್ಕೆ ನೇರ ಹೊಣೆಗಾರರು ಎಂದು ಟೀಕಿಸಿದರು.

ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಅಧ್ಯಕ್ಷರಾದ ಮಾರುತಿ ಮಾನ್ಪಡೆ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಕಾರ್ಯದರ್ಶಿ ಜಿ.ಸಿ.ಬಯ್ಯಾರೆಡ್ಡಿ ಪ್ರಾಸ್ತಾವಿಕ ಮಾತುಗಳನ್ನಾಡಿದರು. ವೇದಿಕೆಯಲ್ಲಿ ಸಂಘದ ಪದಾಧಿಕಾರಿಗಳಾದ ಯು.ಬಸವರಾಜು ಹಾಗೂ ಭೀಮಸಿ ಕಲಾದಗಿ ಅವರು ಉಪಸ್ಥಿತರಿದ್ದರು.

ರಸಗೊಬ್ಬರ ಸಿಗದೆ ಆತ್ಮಹತ್ಯೆ

1. ರಂಗಪ್ಪ (45) - ಪಲವನಹಳ್ಳಿ, ಹೊನ್ನಾಳಿ(ತಾ.) 19.6.2008
2. ವೀರಶೆಟ್ಟಿ ಬಸವಣ್ಣಪ್ಪ ಕನ್ನಾ (46) ಪೊಲಕಪಳ್ಳಿ ಚಿಂಚೋಳಿ (ತಾ)
3. ನಾರಾಯಣಸ್ವಾಮಿ(52) ಅಂಜನಾಪುರ - ಶಿಕಾರಿಪುರ 18.6.2008

ಸಾಲಬಾಧೆ ತಾಳದೆ ಆತ್ಮಹತ್ಯೆ

1. ರಾಜು (31) ಭೀಮಸಮುದ್ರ, ಚಿತ್ರದುರ್ಗ 18.6.2008
2. ಈಶ್ವರಪ್ಪ ಚಿಕ್ಕಡಿ(44) ಯಾದವಾಡ, ಧಾರವಾಡ 18.6.2008
3. ಮುತ್ತಮ್ಮ ಬಸಪ್ಪಗೌಡ (60) ನವೆ, ಆಲೂರು(ತಾ) 20.6.2008
4. ಸಿದ್ದಪ್ಪ ಫಕೀರಪ್ಪ ಪೂಜಾರ(52) ಮುರಟಗೆರೆ, ಹುದುಗೂಡ (ತಾ) 20.6.2008
5. ಬಸವರಾಜ ಯಲ್ಲಪ್ಪ ಇಂಗಳಗಿ(42) ಇಂದೂರ, ಉತ್ತರ ಕನ್ನಡ 20.6.2008
6. ನಿಂಗಪ್ಪ ಹುಡವದ, ಹಾನಳ್ಳಿ, ಕೊಪ್ಪಳ (ತಾ.)

ದೇಶಕ್ಕೆ ಆರೋಗ್ಯವಂತ ಮಕ್ಕಳು ಬೇಡವೇ? -2

ಲಸಿಕಾ ಕ್ಷೇತ್ರದಲ್ಲಿ ನಡುಕ ಹುಟ್ಟಿಸಿದ ಭಾರತದ ಡ್ರಗ್ ಕಂಟ್ರೋಲ್ ಜನರಲ್

ಜನಾರೋಗ್ಯದ ದೃಷ್ಟಿಯಿಂದ ಅಗತ್ಯವೇ ಇಲ್ಲದ ಲಸಿಕೆಗಳು ಮಾರುಕಟ್ಟೆಗೆ ದಾಳಿಯಿಟ್ಟವೆ. ಅಗತ್ಯ ಲಸಿಕಾ ತಯಾರಕ ಕಂಪನಿಯನ್ನು ಸರ್ಕಾರವೇ ಮುಚ್ಚಿ ಹಾಕಿದೆ!!!

ಇತ್ತೀಚೆಗೆ ಕೇಂದ್ರ ಸರ್ಕಾರವು ಭಾರತದ ಮೂರು ಸಾರ್ವಜನಿಕ ಲಸಿಕಾ ತಯಾರಕ ಕಂಪನಿಗಳನ್ನು ಮುಚ್ಚುವ ಆದೇಶ ಹೊರಡಿಸಿದೆ. ಈಕಂಪನಿಗಳ ವಿಶೇಷವೇನು?

ದಶಕಗಳಿಂದ ಔಷಧ ಹಾಗೂ ಸೌಂದರ್ಯ ವರ್ಧಕ ಕಾನೂನ್ನು ಅನುಸರಿಸಿ ಕೊಂಡು ಬರುತ್ತಾ ನಮ್ಮ ರಾಷ್ಟ್ರೀಯ ಕಾರ್ಯಕ್ರಮಕ್ಕೆ ಬೇಕಾಗುವ ಲಸಿಕೆಗಳನ್ನು ತಯಾರಿಸಿ ಅಥವಾ ಹೊರಗಿನಿಂದ ಆಮದು ಮಾಡಿಕೊಡು ಲಸಿಕೆಗಳನ್ನು ಒದಗಿಸುತ್ತಿವೆ. ಹಠಾತ್ತನೆ ಈ ಕಂಪನಿಗಳನ್ನು ಮುಚ್ಚಿದರೆ ರಾಷ್ಟ್ರೀಯ ಲಸಿಕಾ ಕಾರ್ಯಕ್ರಮಕ್ಕೆ ಧಕ್ಕೆಯಾಗುತ್ತದೆ.ಈ ಕಂಪನಿಗಳು ನೂರಾರು ವರ್ಷಗಳಿಂದ ಲಸಿಕೆ ತಯಾರಿಸುತ್ತಿದ್ದು, ತಂತ್ರಜ್ಞಾನದ ಕೊರತೆ ಇದ್ದಲ್ಲಿ ಸರಿಪಡಿಸ ಬಹುದಾಗಿತ್ತು . ವಿಶ್ವ ಆರೋಗ್ಯ ಸಂಸ್ಥೆ ಈ ಕಂಪನಿಗಳ ಲಸಿಕೆಗೆ ಆಕ್ಷೇಪ ಎತ್ತಿದ್ದರೂ, ಆ ಲಸಿಕೆಗಳನ್ನು ಭಾರತದಲ್ಲಿ ಉಪಯೋಗಿಸಲು ಯಾವ ಸಮಸ್ಯೆಯು ಇರಲಿಲ್ಲ. 2004 ರಲ್ಲಿ ಈ ಕಂಪನಿಗಳ ತಪಾಸಣೆ ಮಾಡಿದಾಗ ಅವುಗಳಲ್ಲಿ ಯಾವ ಕೊರತೆಯು ಇರಲಿಲ್ಲ. ಆದರೆ ಅದರ ನಂತರ ವಿಶ್ವ ಆರೋಗ್ಯ ಸಂಸ್ಥೆಯು ಹೆಚ್ಚಿನ ಗುಣ ಮಟ್ಟವನ್ನು ಸಾಧಿಸಲು ಆದೇಶಿಸಲಾಯಿತು. ಅದರ ಅಗತ್ಯತೆ ಇರಬಹುದು. ಆದರೆ ಸರಕಾರ ಅದನ್ನು ಸಾಧಿಸಲು ಸಹಾಯ ಮಾಡಬೇಕಿತ್ತು.2007 ರಲ್ಲಿ ಪುನಃ ಕಂಪನಿಗಳ ಗುಣಮಟ್ಟ ತಪಾಸಣೆ ಮಾಡಿದಾಗ ಅವುಗಳ ಕಾರ್ಯ ವೈಖರಿಯಲ್ಲಿ ಕೆಲವು ಕೊರತೆಗಳು ಕಂಡು ಬಂದರೂ, ಲಸಿಕೆಯ ಗುಣ ಮಟ್ಟದಲ್ಲಿ ಯಾವುದೇ ಕೊರತೆ ಕಂಡು ಬಂದಿರಲ್ಲಿಲ್ಲ. ಕೂಡಲೇ ಈ ಕಂಪನಿಗಳನ್ನು ಮುಚ್ಚಲು ಆದೇಶ ನೀಡಲಾಯಿತು. ಈ ಕ್ರಮ ಕಂಪನಿಗಳನ್ನು ಮುಚ್ಚಿ ಹಾಕುವ ಸಂಚಲ್ಲದೆ ಮತ್ತಿನ್ನೇನು?


ಡಾ. ಪ್ರಕಾಶ್ ಸಿ ರಾವ್
ಅಧ್ಯಕ್ಷರು,
ಜನಾರೋಗ್ಯ ಆಂದೋಲನ

ಈಗ ಸರಕಾರ ಒಂದು ಹೊಸ ಕಂಪನಿಯನ್ನು ಸ್ಥಾಪಿಸಲು ಮುಂದಾಗಿದೆ. ಆ ಕಂಪನಿ ಗುಣ ಮಟ್ಟ ಸಾಧಿಸುತ್ತದೆಂದು ಹೇಗೆ ಹೇಳಬಹುದು? ಕೇಂದ್ರ ಆರೋಗ್ಯ ಮಂತ್ರಿಗಳು ಹೇಳುವುದೇನೆಂದರೆ 'ವಿಶ್ವ ಆರೋಗ್ಯ ಸಂಸ್ಥೆ ಹೆಚ್ಚಿನ ಗುಣಮಟ್ಟ ಅಪೇಕ್ಷಿಸುವುದರಿಂದ ಈ ಕಂಪನಿಗಳನ್ನು ಮುಚ್ಚುವ ಆದೇಶ ನೀಡಲಾಗಿದೆ. ಆದರೆ ಗುಣಮಟ್ಟ ಹೆಚ್ಚಿಸಲು ಸುಮಾರು 30 ಕೋಟಿಗಳಷ್ಟು ಖರ್ಚು ಮಾಡಿದ್ದರೆ, 140 ಕೋಟಿ ಖರ್ಚು ಮಾಡಿ ಹೊಸ ಕಂಪನಿಯನ್ನು ಪ್ರಾರಂಭಿಸುವ ಅವಶ್ಯಕತೆ ಇರಲಿಲ್ಲ! ಕನಿಷ್ಟ ಹೊಸ ವ್ಯಾಕ್ಸೀನ್ ಕಾಂಪ್ಲೆಕ್ಸ್ ಪ್ರಾರಂಭವಾಗುವವರೆಗೆ ಈ ಕಂಪನಿಗಳನ್ನು ಮುಚ್ಚುವ ಅಗತ್ಯತೆ, ಅವಸರ ಇರಲಿಲ್ಲ.

ಖ್ಯಾತ ವೈರಾಲಜಿಸ್ಟ್ ಆದ ಡಾ।। ಟಿ. ಜೇಕಬ್ ಜಾನ್ ಹೇಳುವುದೇನೆಂದರೆ "ನಾವು ಅಂತರಾಷ್ಟ್ರೀಯ ಒತ್ತಡಕ್ಕೆ ಮಣಿದಿದ್ದೇವೆ. ರಾಷ್ಟ್ರೀಯ ಅಗತ್ಯತೆಯನ್ನು ಕಡೆ ಗಣಿಸಿದ್ದೇವೆ. ಮೂರು ಸಾರ್ವಜನಿಕ ಕಂಪನಿಗಳನ್ನು ಬಂದು ಮಾಡಿ 1 ಸಾರ್ವಜನಿಕ ಕಂಪನಿಯನ್ನು ಪ್ರಾರಂಭಿಸುವ ತರ್ಕ ಅರ್ಥಹೀನ".

ಜನಸ್ವಾಸ್ಥ ಅಭಿಯಾನದ ಡಾ।। ಅನಂತ ಫಡಕೆ ಹೇಳುತ್ತಾರೆ "ಈ ರೀತಿ ಸಾರ್ವಜನಿಕ ಆರೋಗ್ಯದ ಕಂಪನಿಗಳನ್ನು ಮುಚ್ಚುವುದು ಹಿಮ್ಮುಖವಾದ ಹೆಜ್ಜೆ".

ಡಾ।। ಜೆಕಬ್ ಪುಲಿಯಿಲ್ ಪ್ರಕಾರ "ನಮ್ಮ ಲಸಿಕೆಯ ಗುಣ ಮಟ್ಟದ್ದಲ್ಲೇನು ಕೊರತೆ ಇರಲಿಲ್ಲ".

2006 ರಲ್ಲಿ ಉತ್ತರ ಪ್ರದೇಶದಲ್ಲಿ ಜಪನೀಸ್ ಎನ್‌ಸೆಫೆಲೈಟಿಸ್ ರೋಗ ಕಂಡು ಬಂದು ಸಾವುಗಳುಂಟಾದಾಗ, ಭಾರತ ಚೀನಾದಿಂದ ಲಸಿಕೆಯನ್ನು ತರಿಸಿಕೊಳ್ಳಲು ತೀರ್ಮಾನಿಸಿತು. ಆ ಲಸಿಕೆ ಆಮದು ಮಾಡಿ ಕೊಳ್ಳಲು ನಮ್ಮ ಸರಕಾರ ನಮ್ಮ ಲಸಿಕಾ ಕಂಪನಿಗಳ ಬದಲು ಹಿಂದುಸ್ಥಾನ ಲೇಟೆಕ್ಸ್ ಲಿಮಿಟೆಡ್ (ಹೆಚ್‌ಎಲ್‌ಎಲ್)ಗೆ ಜವಾಬ್ದಾರಿ ವಹಿಸಿತು. ಈ ಕಂಪನಿ ರಬ್ಬರ್ ಕಾಂಡಮ್‌ಗಳನ್ನು ತಯಾರಿಸುವ ಯಶಸ್ವೀ ಸಾರ್ವಜನಿಕ ಉದ್ಯಮ. ಆದರೆ ಈ ಕಂಪನಿಗೆ ಲಸಿಕೆಯ ವಿಚಾರ ಹೊಸದು. ಈ ಹೊಸ ಕಂಪನಿಗೆ ಲಸಿಕೆಯ ಜವಾಬ್ದಾರಿ ಕೊಡುವುದು ಭಾರತ ಸರಕಾರದ ತರ್ಕ ಹೀನ ಕ್ರಮ. ಭಾರತ ಸರಕಾರ ನಮ್ಮಲ್ಲಿ ತಯಾರಿಸುವ ಲಸಿಕೆಗಳು ವಿಶ್ವ ಆರೋಗ್ಯ ಸಂಸ್ಥೆ ಗುಣ ಮಟ್ಟ ಹೊಂದಿಲ್ಲ ಎಂಬ ಕಾರಣಕ್ಕೆ ಆ ಲಸಿಕಾ ತಯಾರಿಸುವ ಕಂಪನಿಗಳನ್ನೇ ಮುಚ್ಚಿ ಹಾಕಿತ್ತು, ಆದರೆ ಚೀನಾದ ಲಸಿಕೆಯು ವಿಶ್ವ ಆರೋಗ್ಯ ಸಂಸ್ಥೆಯ ಗುಣಮಟ್ಟದ್ದಲ್ಲವಾದರು ಏಕೆ ಆಮದು ಮಾಡಿಕೊಂಡಿತು?

ಕೇಂದ್ರ ಆರೋಗ್ಯ ಮಂತ್ರಿಗಳು ಹೇಳುತ್ತಾರೆ "ನಾವು ಮೂರು ಕಂಪನಿಗಳನ್ನು ಮುಚ್ಚುತ್ತಿಲ್ಲ, ಅದನ್ನು ಬೇರೆ ರೀತಿ ಉಪಯೋಗಿಸುತ್ತೇವೆ ಹಾಗೂ ಆ ಕಂಪನಿಗಳು ಲಸಿಕೆ ತಯಾರಿಕೆಯನ್ನು ನಿಲ್ಲಿಸಿದರು, ನಾವು ಲಸಿಕೆಯು ಕೊರತೆಯಾಗದಂತೆ ನೋಡಿಕೊಳ್ಳುತ್ತೇವೆ".

ಭಾರತದಲ್ಲಿ ಸಾರ್ವಜನಿಕ ಔಷಧಿ ಉದ್ಯಮ ಲಸಿಕೆ ಉತ್ಪಾದನೆಯಲ್ಲಿ ಸಂಪೂರ್ಣ ಸ್ವಾವಲಂಬನೆ ಸಾಧಿಸದೆ ಇದ್ದುದಕ್ಕೆ ಮುಖ್ಯ ಕಾರಣ ಜಾಗತಿಕರಣ ನೀತಿ. ವ್ಯವಸ್ಥಿತವಾಗಿ ನಮ್ಮ ದೇಶದಲ್ಲಿದ್ದ ಲಸಿಕಾ ಉದ್ಯಮಕ್ಕೆ ಅಡಚಣೆ ತಂದು, ಹೊಸ ಉದ್ಯಮವನ್ನು ಸ್ಥಾಪಿಸುವ ಪ್ರಯತ್ನವನ್ನು ಮಾಡಲಾಗಿದೆ. ಈಗ ಭಾರತ ಸರಕಾರ ವ್ಯಾಕ್ಸೀನ್ ಪಾರ್ಕ್ ಸ್ಥಾಪಿಸಲು ಮುಂದಾಗಿದೆ. ಇಲ್ಲಿ ರಾಷ್ಟ್ರೀಯ ಕಾರ್ಯಕ್ರಮಕ್ಕೆ ಬೇಕಾಗುವ ಎಲ್ಲಾ ಲಸಿಕೆಗಳನ್ನಲ್ಲದೆ ಇನ್ನು ಕೆಲವು ಹೊಸ (ಚಿಕನ್ ಪಾಕ್ಸ್ ಇತ್ಯಾದಿ) ಲಸಿಕೆಗಳನ್ನು ತಯಾರಿಸಲು ಪ್ರಯತ್ನಿಸಲಾಗುವುದು. ಈ ಕೇಂದ್ರವನ್ನು ಚನ್ನೈಗೆ ಹತ್ತಿರದ ಚೆಂಗಲ್‌ಪಟ್ಟುವಿನಲ್ಲಿ ಪ್ರಾರಂಭಿಸಲಾಗುವುದು. ಇದರ ಜವಾಬ್ದಾರಿಯನ್ನು ಹಿಂದುಸ್ಥಾನ್ ಲೆಟೆಕ್ಸ್ ಲಿಮಿಟೆಡ್ ವಹಿಸಿಕೊಳ್ಳಲಿದೆ. ಈಗಾಗಲೇ ಈ ಕೇಂದ್ರದ ಕೆಲಸ ಭರದಿಂದ ಸಾಗುತ್ತಿದ್ದು 2011 ಸುಮಾರಿಗೆ ಪೂರ್ಣಗೊಳ್ಳುವ ಸಾಧ್ಯತೆಯಿದೆ. ಇಲ್ಲಿ ಡಿ.ಪಿ.ಟಿ., ಟಿ.ಟಿ., ಡಿ.ಟಿ., ಬಿ.ಸಿಜಿ., ಧಡಾರ, ಹೆಪೆಟೈಟಿಸ್ ಎ. ಬಿ, ಇನ್‌ಫ್ಲುಯಂಜಾ, ಜಾಪನೀಸ್ ಎನ್ಸೆಫೆಲೈಟಿಸ್, ರೇಬಿಸ್ ಮುಂತಾದ ಲಸಿಕೆಗಳು ತಯಾರಾಗಲಿವೆ. ಈ ಕೇಂದ್ರಕ್ಕೆ ಬೇಕಾಗುವ ತಂತ್ರಜ್ಞಾನವನ್ನು ಮೊದಲು ಲಸಿಕೆ ತಯಾರಿಸುತ್ತಿದ್ದ ಕೇಂದ್ರಗಳಿಂದಲೇ ಪಡೆಯಲಾಗುವುದು.

ಹೊಸ ಲಸಿಕೆಗಳು

ಒಂದು ದಶಕದಿಂದೀಚೆಗೆ ವೈದ್ಯರು ಹೊಸ ಲಸಿಕೆ ಹಾಕುವುದಾಗಿ ಆಕರ್ಷಕ ಬಣ್ಣದ ದೀಪದ ಬೋರ್ಡ್‌ಗಳನ್ನು ಹಾಕುತ್ತಿದ್ದಾರೆ. ಆ ಬೋರ್ಡ್‌ಗಳನ್ನು ಔಷಧಿ ಕಂಪನಿಯೇ ಅವರಿಗೆ ಕೊಡುತ್ತದೆ. ಸರಕಾರ ನಿಗದಿ ಪಡಿಸಿದ ಲಸಿಕೆಗಳನ್ನು ಹಾಕಲು ಅಷ್ಟೇನು ಗಮನ ಹರಿಸದೆ ಈ ಹೊಸ ಲಸಿಕೆ ಹಾಕಲು ಏಕೆ ಇಷ್ಟೊಂದು ಕಾಳಜಿ? ಎಂಬುದು ಎಲ್ಲರ ಪ್ರಶ್ನೆಯಾಗಿದೆ.

ಅದು ಕಾಳಜಿ ವಿಷಯವಾಗದೆ ಹೆಚ್ಚು ಆದಾಯ ತರುವ ವಿಷಯವಾದ್ದರಿಂದ, ಈ ಬದಲಾವಣೆ ಕಂಡು ಬಂದಿದೆ.

ಇನ್ನು ಈ ಹೊಸ ಲಸಿಕೆಗಳಾವುವು?

ಹೆಪೆಟೈಟಿಸ್ ಎ,ಬಿ, ಇನ್‌ಫ್ಲುಯಂಜಾ, ಜಾಪನೀಸ್ ಎನ್ಸೆಫೆಲೈಟಿಸ್, ರೇಬಿಸ್, ಮೆನಿಂಜೈಟಿಸ್, ಮೀಸಲ್ಸ್-ಮಂಪ್ಸ - ರೂಬೆಲಾ, ನಿಮೋಕಾಕಲ್ ಮುಂತಾದವುಗಳು. ಈ ಲಸಕೆಗಳು ಭಾರತದ ಸರಕಾರಿ ಲಸಿಕಾ ಪಟ್ಟಿಯಲ್ಲಿ ಇಲ್ಲ.


ಈ ಲಸಿಕೆಗಳು ಬೇಕೇ?

ಲಸಿಕೆ ರೋಗ ತಡೆಗಟ್ಟಬಹುದಾದ ಸಾಧನ. ಆದರೆ ನಮ್ಮ ದೇಶದ ಲಸಿಕಾ ಪಟ್ಟಿಯಲ್ಲಿ ಇರುವ ಲಸಿಕೆಗಳನ್ನು ಹಾಕಿಸುವುದು ಕಡ್ಡಾಯ. ಆದರೆ ಹೊಸಲಸಿಕೆಗಳಲ್ಲ. ಭಾರತದಲ್ಲಿ ಹೊಸಲಸಿಕೆಗಳು ಲಭ್ಯ. ಆದರೆ ಅವು ದುಬಾರಿಯಾಗಿರುವುದರಿಂದ ಹಾಕಿಸಲು ಸಾಧ್ಯ ವಾಗುವುದಿಲ್ಲ, ಅವುಗಳ ಗುಣಮಟ್ಟ ಪ್ರಶ್ನಾರ್ಥಕವಾಗಿದೆ. ಕಾರಣ ಈ ಲಸಿಕೆಗಳನ್ನು ಹೊರದೇಶಗಳಲ್ಲಿ ತಯಾರಿಸಿ ಆಮದು ಮಾಡಿಕೊಳ್ಳಲಾಗುತ್ತಿದೆ. ಈ ಲಸಿಕೆಗಳನ್ನು ಯು.ಐ.ಪಿ. ನಲ್ಲಿಯೂ ಸೇರಿಸಲು ಲಸಿಕಾ ಕಂಪನಿಗಳು ಒತ್ತಾಯ ಮಾಡುತ್ತಿವೆ. ಈ ಹೊಸ ಲಸಿಕೆಯ ಜಾಹಿರಾತುಗಳು ವೈದ್ಯರನ್ನು ಹೆಚ್ಚು ಹೆಚ್ಚು ಉಪಯೋಗಿಸುವಂತೆ ಒತ್ತಾಯ ಮಾಡುತ್ತಿವೆ, ಇದರಿಂದಾಗಿ ಇದೊಂದು ಹೆಚ್ಚು ಮಾರಾಟವಾಗುವ ಗ್ರಾಹಕ ವಸ್ತುವಾಗಿದೆ.

ಭಾರತದಲ್ಲಿ ಲಸಿಕೆಗಳ ಉಪಯೋಗ ಹೆಚ್ಚಿದೆ. ಆದರೆ ಎಷ್ಟು ಪ್ರತಿಬಂಧಕ ಶಕ್ತಿ ಹೆಚ್ಚಿದೆ ಎಂಬುದು ಪ್ರಾಮುಖ್ಯತೆ ಪಡೆದಿಲ್ಲ. ರೋಗ ತಡೆಗಟ್ಟಲು ಲಸಿಕೆ ಒಂದೇ ವಿಧಾನವಲ್ಲದಿದ್ದರೂ, ಇತರೆ ಕ್ರಮಗಳ ಬದಲು ಲಸಿಕೆಗೆ ಪಟ್ಟಣಗಳಲ್ಲಿ ಹೆಚ್ಚು ಗಮನ ಹರಿಸಲಾಗುತ್ತಿದೆ. ಭಾರತದಲ್ಲಿ ಪ್ರತಿ ವರ್ಷ 26 ದಶಲಕ್ಷ ಮಕ್ಕಳು ಹುಟ್ಟುತ್ತವೆ. ಲಸಿಕೆಗಳಿಗೆ ಹೆಚ್ಚಿನ ಬೇಡಿಕೆ ಇದೆ. ಸರಕಾರ ಲಸಿಕೆಗಳನ್ನು ಪೂರೈಸಲಾಗದಿದ್ದರಿಂದ ಖಾಸಗಿ ಸಂಸ್ಥೆಗಳು ಲಸಿಕೆ ತಯಾರಿಸಿ ಅಥವಾ ಆಮದು ಮಾಡಿಕೊಂಡು ಪೂರೈಸುತ್ತಿವೆ. ಭಾರತದಲ್ಲಿ ಒಂದು ಸಾವಿರ ಕೋಟಿ ರೂಪಾಯಿಯಷ್ಟು ಲಸಿಕೆಗಳನ್ನು ಉಪಯೋಗಿಸಲಾಗುತ್ತಿದೆ. ಇದು ಪ್ರತಿ ವರ್ಷ ಶೇಕಡ 25 ರಷ್ಟು ಹೆಚ್ಚಾಗುತ್ತಿದೆ. ಆದ್ದರಿಂದ ಈ ಸನ್ನಿವೇಶದಲ್ಲಿ ಭಾರತದ ಮೂರು ಸಾರ್ವಜನಿಕ ಕ್ಷೇತ್ರದ ಲಸಿಕಾ ಘಟಕಗಳನ್ನು ಮುಚ್ಚುವುದು ಸಾರ್ವಜನಿಕ ಆರೋಗ್ಯಕ್ಕೆ ಪೆಟ್ಟು ಬೀಳತ್ತದೆ.

ಆರೋಗ್ಯ ಕ್ಷೇತ್ರದಲ್ಲಿ ವಿಶ್ವ ಆರೋಗ್ಯ ಸಂಸ್ಥೆಯು ಪಾತ್ರ ಗಣನೀಯವಾದುದು. ಆದರೆ ಈ ದಿನಗಳಲ್ಲಿ ಅದರ ಕಾರ್ಯ ವೈಖರಿ ಇತರೆ ದೇಶಗಳ ಹಸ್ತಕ್ಷೇಪದಿಂದ ಮೊಟಕುಗೊಂಡಿದೆ. ಇದು ಜನಾರೋಗ್ಯಕ್ಕೆ ಆಪತ್ತು ತರುವ ಸಂಕೇತ.

ಕ -ಟಕ ಪ್ರಾಂತ ರೈತ ಸಂಘ ಹಾಗೂ ಭೂಸ್ವಾಧೀನ ವಿರೋಧಿ ರೈತರ ಹೋರಾಟ ಸಮಿತಿ ನೇತೃತ್ವದಲ್ಲಿ ಬೇ ಗಳೂರಿನಲ್ಲಿ ನಡೆದ ಬೃಹತ್ ಪ್ರತಿಭಟನೆಯ ಚಿತ್ರ. ಉದ್ದೇಶಿತ ಕೆಂಪೇಗೌಡ ಬಡಾವಣೆಗಾಗಿ ರೈತರ ಒಪ್ಪಿಗೆ ಇಲ್ಲದೆ ಭೂಮಿ ವಶಪಡಿಸಿಕೊಳ್ಳಬಾರದೆಂದೂ ಹಾಗೂ ಬಡ ರೆವಿನ್ಯೂ ನಿವೇಶನದಾರರ ಹಿತ ಕಾಪಾಡಬೇಕೆಂದು ಒತ್ತಾಯಿಸಲಾಯಿತು.





■ ಜಯ

ಗಾಮಾ ಕಿರಣಗಳನ್ನು ಇಣುಕಿನೋಡಲು 'ಗ್ಲಾಸ್ಟ್' ನ ಅಂತರಿಕ್ಷ ಪಯಣ

ನಮ್ಮ ಬ್ರಹ್ಮಾಂಡ ಅಥವಾ ಇಡೀ ವಿಶ್ವದಲ್ಲಿ ಅಸಂಖ್ಯಾತ ನಕ್ಷತ್ರಗಳು, ಮಂಜಗಳು, ಗೆಲಾಕ್ಸಿಗಳು ಜಗಮಗಿಸುತ್ತಿವೆ. ಅಲ್ಲಿರುವ ಕಪ್ಪುರಂಧ್ರಗಳಿಂದ, ಸೂರ್ಯ ಮತ್ತು ಇತರೆ ನಕ್ಷತ್ರಗಳಿಂದ ಅಗಾಧ ಪ್ರಮಾಣದ ಶಕ್ತಿಯುತ ಕಿರಣಗಳು, ಅವುಗಳ ಸ್ಫೋಟಗಳು ಬಹುತೇಕ ಬೆಳಕಿನ ವೇಗದಲ್ಲಿ ಪ್ರತಿನಿತ್ಯ ಜರುಗುತ್ತವೆ. ಇದರಲ್ಲಿ ಅತ್ಯಂತ ಶಕ್ತಿಯುತ ಕಿರಣಗಳೆಂದರೆ ಗಾಮಾ ಕಿರಣಗಳು. ಗಾಮಾ ಕಿರಣಗಳು ವಿದ್ಯುದಯಸ್ಕಾಂತೀಯ ವಿಕಿರಣಗಳು. ಅವುಗಳನ್ನು ಅಧ್ಯಯನ ಮಾಡಬೇಕಾದಲ್ಲಿ ಅಂತರಿಕ್ಷದ ಸರ್ವೇಕ್ಷಣಾ ಉಪಗ್ರಹಗಳಿಗೇ ಮೊರೆಹೋಗಬೇಕು. ಏಕೆಂದರೆ, ಅಂತಹ ಕಿರಣಗಳು ಭೂಮಿ ತಲುಪುವ ಮೊದಲೇ ಸ್ಫೋಟಗೊಂಡೋ, ಶಕ್ತಿಗುಂದಿಯೋ, ಅಥವಾ ನಮ್ಮ ಭೂಮಿಯ ವಾತಾವರಣವು ಹೀರಿಕೊಂಡೋ ನಮ್ಮ ಶೋಧನೆಯ ತೆಕ್ಕೆಗೆ ನಿಲುಕುವುದಿಲ್ಲ. ಅಂತಹ ಶಕ್ತಿಯುತ ಗಾಮಾ ಕಿರಣಗಳ ಅಧ್ಯಯನದಿಂದ ವಿಶ್ವದ ಉಗಮ, ವಿಕಾಸ ಮತ್ತು ಇತರೆ ಬದಲಾವಣೆಗಳ ಕುರಿತು ಬೆಳಕು ಹರಿಸಲು ವಿಜ್ಞಾನಿಗಳಿಗೆ ಸಾಧ್ಯವಾಗುತ್ತದೆ.

ವಿಶ್ವದ ರಹಸ್ಯವನ್ನು ಭೇಧಿಸುವತ್ತ 'ಗ್ಲಾಸ್ಟ್':

ವಿಶ್ವದ ನಕ್ಷತ್ರಮಂಜಗಳ ನಡುವಿನಿಂದ ಹೊರಹೊಮ್ಮುವ ಶಕ್ತಿಯುತ ಗಾಮಾ ಕಿರಣಗಳನ್ನು ನೋಡಲು ಸಾಧ್ಯಮಾಡಿಕೊಡಬಲ್ಲ 'ಗ್ಲಾಸ್ಟ್' ಎಂಬ ದೂರದರ್ಶಕವನ್ನು ಮೊನ್ನೆ ಅಂತರಿಕ್ಷಕ್ಕೆ ಡೆಲ್ಟಾ-2 ಎಂಬ ರಾಕೆಟ್ ಹೊತ್ತೊಯ್ದಿದೆ. ಈ ಯೋಜನೆಯನ್ನು ಅಮೇರಿಕಾದ ಬಾಹ್ಯಾಕಾಶ ಸಂಸ್ಥೆ 'ನ್ಯಾಸಾ' ಮತ್ತು ಇಟಲಿ, ಫ್ರಾನ್ಸ್, ಜರ್ಮನಿ, ಸ್ವೀಡನ್ ಮತ್ತು ಜಪಾನ್ ರಾಷ್ಟ್ರಗಳು ನಿರ್ವಹಿಸುತ್ತಿವೆ. ಗ್ಲಾಸ್ಟ್ ದೂರದರ್ಶಕವು ಇದುವರೆಗೂ



ಮುಚ್ಚಿದ್ದಂತೆ ಇದ್ದ ಅಂತರಿಕ್ಷದ ಅಂತರಂಗದ ಮೇಲಿನ ಪರದೆಯನ್ನು ಸರಿಸಿ ತೋರಿಸುತ್ತದೆ.

ಭೂಮಿಯಿಂದ ಸುಮಾರು 555 ಕಿ.ಮೀ ದೂರದಲ್ಲಿರುವ ಕಕ್ಷೆಯಿಂದ ಇದು ಅಂತರಿಕ್ಷದಲ್ಲಿ ಚೆಲ್ಲಾಡಿದಂತೆ ನಾನಾ ಮೂಲೆಗಳಿಂದ ಉದ್ಭವಿಸಿ ಬರುವ ಗಾಮಾ ಕಿರಣಗಳನ್ನು ಈ ದೂರದರ್ಶಕ ಸೆರೆಹಿಡಿಯಬಲ್ಲದು.

ದೂರದರ್ಶಕದ ಬಳಕೆಯ ಆಧಾರದ ಮೇಲೆ ಹಲವು ವಿಧದ ದೂರದರ್ಶಕಗಳು ಅಸ್ತಿತ್ವದಲ್ಲಿವೆ. ಉದಾಹರಣೆಗೆ, ಎಕ್ಸ್-ರೇ ದೂರದರ್ಶಕಗಳು, ಗಾಮಾ ಕಿರಣಗಳ ದೂರದರ್ಶಕಗಳು, ಇತ್ಯಾದಿ.

ಗ್ಲಾಸ್ಟ್ ದೂರದರ್ಶಕದಲ್ಲಿ ನಿಖರತೆಯ ಟ್ರ್ಯಾಕರ್, ಗ್ಯಾಮಾ ಕಿರಣಗಳ ಶಕ್ತಿಯನ್ನು ಅಳೆಯುವ ಕ್ಯಾಲರಿ ಮೀಟರ್, ದತ್ತಾಂಶಗಳನ್ನು ಸಂಗ್ರಹಿಸುವ ವ್ಯವಸ್ಥೆ, ಮತ್ತು ಹೊರವಸ್ತುಗಳು ಡಿಕ್ಕಿ ಹೊಡೆಯುವ ಮೊದಲೇ ಮಾಹಿತಿ ನೀಡುವ ಸಂರಕ್ಷಣಾ ಡಿಟೆಕ್ಟರ್‌ಗಳು ಇರುತ್ತವೆ. ಇದು ಈ ಹಿಂದೆ ಕಳುಹಿಸಿದ್ದ ಕಾಂಪ್ಟನ್ ಎಂಬ ದೂರದರ್ಶಕಕ್ಕಿಂತ ಮುಂದುವರೆದ ತಂತ್ರಜ್ಞಾನವನ್ನು ಹೊಂದಿದ್ದು, ಅದು 15 ತಿಂಗಳುಗಳಲ್ಲಿ ಮಾಡುತ್ತಿದ್ದ ಆಕಾಶ ಸರ್ವೇಕ್ಷಣಾ ಕಾರ್ಯವನ್ನು ಕೇವಲ ಮೂರು ಗಂಟೆಗಳಲ್ಲಿ ಮಾಡಿ ಮುಗಿಸಬಲ್ಲುದು. ಇದು ಆಗಸದಲ್ಲಿ ಇನ್ನು 5ರಿಂದ 10 ವರ್ಷಗಳ ಕಾಲ ಕಾರ್ಯನಿರತವಾಗಿರುತ್ತದೆ. ○


ದಕ್ಷಿಣ ಕೊರಿಯಾ ಸರ್ಕಾರದ ರಾಜಿನಾಮೆ

ಅಮೆರಿಕದಿಂದ ಬೀಫ್ (ದನದ ಮಾಂಸ) ಆಮದು ಪುನಃ ಆರಂಭಿಸುವುದನ್ನು ವಿರೋಧಿಸಿ ನಡೆದ ಹಲವು ವಾರಗಳ ಭಾರೀ ಪ್ರತಿಭಟನೆ ದಕ್ಷಿಣ ಕೊರಿಯಾದ ಸರ್ಕಾರ (ಪ್ರಧಾನಿ ಮತ್ತು ಮಂತ್ರಿಮಂಡಲ) ರಾಜೀನಾಮೆ ಕೊಡುವಷ್ಟು ತೀವ್ರವಾಗಿದೆ. ಸಾವಿರಾರು ಜನ ಪ್ರತಿಭಟನಾಕಾರರು ರಾಜಧಾನಿ ಸಿಯೊಲ್ ಬೀದಿಗಳನ್ನು ತುಂಬಿ ಕಳೆದ 20 ವರ್ಷಗಳಲ್ಲೇ ಅತಿ ದೊಡ್ಡ ಪ್ರತಿಭಟನೆ ನಡೆಸಿದರು. ಅಧ್ಯಕ್ಷರನ್ನು ರಕ್ಷಿಸಲು ಅವರ ಭವನಕ್ಕೆ ಹೋಗುವ ದಾರಿಯಲ್ಲಿ ಹಡಗು ಸಾಗಾಣಿಕೆಗೆ ಬಳಸುವ ತೈಲ ತುಂಬಿದ ವ್ಯಾಗನ್ನು ಗಳನ್ನು ಬಳಸಬೇಕಾಯಿತು.

ಜನರನ್ನು ರೊಚ್ಚಿಗೆಬ್ಬಿಸಿದ್ದು ಅಮೆರಿಕನ್ ಬೀಫ್ ಮೇಲೆ ಇದ್ದ ನಿಷೇಧವನ್ನು ತೆಗೆದು ಹಾಕುವ ನಿರ್ಧಾರವನ್ನು ಅಧ್ಯಕ್ಷರು ತಮ್ಮ ಅಮೆರಿಕನ್ ಭೇಟಿ ಸಮಯದಲ್ಲಿ ಪ್ರಕಟಿಸಿದ್ದು. ಅಮೆರಿಕದಲ್ಲಿ ಕಾಣಿಸಿಕೊಂಡ 'ಹುಚ್ಚು ಹಸು' ಕಾಯಿಲೆಯ ಹಿನ್ನೆಲೆಯಲ್ಲಿ ಈ ನಿಷೇಧವನ್ನು ಐದು ವರ್ಷಗಳ ಕಾಲ ಹೇರಲಾಗಿತ್ತು. ಈ ನಿಷೇಧವನ್ನು ಜನತೆಯ ಆರೋಗ್ಯದ ಬಗೆಗಿನ ಯಾವುದೇ ವೈಜ್ಞಾನಿಕ ಅಧ್ಯಯನ ಅಥವಾ ವಿಶ್ಲೇಷಣೆ ಇಲ್ಲದೆ ಏಕಪಕ್ಷೀಯವಾಗಿ ತೆಗೆದು ಹಾಕಿದ್ದು ದಕ್ಷಿಣ ಕೊರಿಯನ್ನರನ್ನು ಇಷ್ಟು ರೊಚ್ಚಿಗೆಬ್ಬಿಸಿದ್ದು ಅಚ್ಚರಿ ತಂದಿದೆ.

ಅಧ್ಯಕ್ಷರು ಅಮೆರಿಕವನ್ನು ಸಂಪ್ರೀತಗೊಳಿಸಲು ಮಧ್ಯ ಕಾಲೀನ ಸಾಮಂತರ ತರಹ ನಡೆದು ಕೊಂಡಿದ್ದಾರೆ. ಅಥವಾ ಅಮೆರಿಕ ಅವರ ಮೇಲೆ ಈ ರೀತಿ ಮಾಡಲು ಒತ್ತಡ ಹಾಕಿದೆ ಎಂಬ ಸಾಮಾನ್ಯ ಅಭಿಪ್ರಾಯ ಮೂಡಿತ್ತು. ಪ್ರತಿಭಟನಾಕಾರರು ಅಧ್ಯಕ್ಷರನ್ನು ಕಳೆದ ಶತಮಾನದಲ್ಲಿ ಜಪಾನೀ ಸಾಮ್ರಾಜ್ಯಶಾಹಿಗೆ ಮಾರಿಕೊಂಡ ಕುಖ್ಯಾತ ದೇಶದ್ರೋಹಿ ಕೊರಿಯನ್ ಮಂತ್ರಿಗೆ ಹೋಲಿಸಿ ಘೋಷಣೆ ಕೂಗುತ್ತಿದ್ದರು. ದಕ್ಷಿಣ ಕೊರಿಯಾವನ್ನು ಅಮೆರಿಕ, ಜಪಾನ್ ತನ್ನ ವಸಾಹತುವಿನಂತೆ ನಡೆಸಿಕೊಳ್ಳುತ್ತಿದೆ ಎಂಬ ಆಕ್ರೋಶ ಈ ಪ್ರತಿಭಟನೆಯಲ್ಲಿ ಸ್ಫೋಟಗೊಂಡಿದೆ. ಕೊರಿಯಾ ತನ್ನ ಸಾರ್ವಭೌಮತ್ವ ಮತ್ತು ಸ್ವತಂತ್ರ ನೀತಿ ಕಾಪಾಡಿಕೊಳ್ಳಬೇಕು ಎಂಬ ಜನರ ಕೆರಳಿದ ರಾಷ್ಟ್ರೀಯ ಸ್ವಾಭಿಮಾನ ಸಹ ಇದರಲ್ಲಿ ಅಡಗಿದೆ ಅಂತ ರಾಜಕೀಯ ವಿಶ್ಲೇಷಕರ ಅಭಿಮತ. ಎಲ್ಲೆಡೆ ಮೂಗು ತೂರಿಸಲು ಪ್ರಯತ್ನಿಸುತ್ತಿರುವ ಅಮೆರಿಕನ್ ಸರ್ಕಾರಕ್ಕೆ ಇದು ಖಂಡಿತ ಒಳ್ಳೇಯ ಸುದ್ದಿ ಅಲ್ಲ.

○ ಶರತ್ ಚಂದ್ರ



ದಕ್ಷಿಣ ಕೊರಿಯಾ ರಾಜಧಾನಿ ಸಿಯೋಲ್‌ನಲ್ಲಿ ಅಮೆರಿಕಾದಿಂದ ದನದ ಮಾಂಸ ಆಮದು ವಿರೋಧಿಸಿ ನಡೆದ ಬೃಹತ್ ಪ್ರತಿಭಟನೆ

ಕವನ ಅಕ್ಷರ ಕಲಿತವಳಲ್ಲ

ಅವಳು
ಅಕ್ಷರ ಕಲಿತವಳಲ್ಲ
ಆದರೂ,
ಓದುತ್ತಾಳೆ
ನನ್ನ ಮನದ ಭಾವನೆಗಳನ್ನು
ಕಣ್ಣ ಭಾಷೆಗಳನ್ನು

ಅವಳು
ಅಕ್ಷರ ಕಲಿತವಳಲ್ಲ
ಆದರೂ,
ಎಣಿಸುತ್ತಾಳೆ
ರಂಗೋಲಿಯ ಚುಕ್ಕಿಗಳನ್ನು
ಮಿನುಗುವ ನಕ್ಷತ್ರಗಳನ್ನು
ಕಣ್ಣೀರ ಹನಿಗಳನ್ನು

ಅವಳು
ಅಕ್ಷರ ಕಲಿತವಳಲ್ಲ
ಆದರೂ,
ಬರೆಯುತ್ತಾಳೆ
ಕಣ್ಣಲ್ಲಿ ನೂರು ಕವಿತೆಗಳನ್ನು
ಬದುಕಿನ
ಮಹಾಕಾವ್ಯಗಳನ್ನು

ಅವಳು
ಅಕ್ಷರ ಕಲಿತವಳಲ್ಲ
ಆದರೂ,
ಹಾಡುತ್ತಾಳೆ
ಎದೆಯ ಹಾಡುಗಳನ್ನು
ಈ ನೆಲದ ಗೀತೆಗಳನ್ನು

– ಹುಲಿಕಟ್ಟಿ ಚನ್ನಬಸಪ್ಪ

ಜಗದಗಲ

ಶರತ್‌ಚಂದ್ರ

ಇರಾನ್ ಮೇಲೆ ದಾಳಿಗೆ ಇಸ್ರೇಲಿ ರಿಹರ್ಸಲ್?

ಇರಾನ್ ಅಣು ಸ್ಥಾವರ ಮತ್ತು ಇತರ ಮಿಲಿಟರಿ ತಾಣಗಳ ಮೇಲೆ ದಾಳಿ ನಡೆಸಲು ಇಸ್ರೇಲಿ ಸೈನ್ಯ ರಿಹರ್ಸಲ್ ನಡೆಸಿದೆ ಎಂದು ಅಮೆರಿಕನ್ ವಕ್ತಾರರು ಹೇಳಿದ್ದಾರೆ. ಇದಕ್ಕಾಗಿ ವಿಶೇಷವಾಗಿ ವಿನ್ಯಾಸ ಮಾಡಿದ ಮಿಲಿಟರಿ ಅಭ್ಯಾಸ ನಡೆಸಿತು. ಇಸ್ರೇಲಿನಷ್ಟೇ ದೂರವಿರುವ ಗ್ರೀಸ್ ಕರಾವಳಿಗೆ ನೂರಕ್ಕೂ ಹೆಚ್ಚು ಈ-16 ಮತ್ತು ಈ-15 ಯುದ್ಧ ವಿಮಾನಗಳು ಗ್ರೀಸ್ ಮೇಲೆ ಪೂರ್ವ ಮೆಡಿಟರೇನಿಯನ್ ಕರಾವಳಿಗೆ ತೆರಳುವ ಮೂಲಕ ದೂರಗಾಮಿ ದಾಳಿಯ ಪ್ರಾಕ್ಟೀಸ್ ಮಾಡಿದವು. ಇಂತಹ ದೂರಗಾಮಿ ದಾಳಿಗೆ ಬೇಕಾದ ಮಧ್ಯ ಆಕಾಶದಲ್ಲಿ ಇಂಧನ ತುಂಬುವುದು ಮುಂತಾದ ಸಂಕೀರ್ಣ ಚಟುವಟಿಕೆಗಳ ಪ್ರಾಕ್ಟೀಸ್ ಮಾಡಿದವು.

ಇರಾನ್ ಮೇಲೆ ದಾಳಿಗೆ ಈ ರಿಹರ್ಸಲ್ ಎಂದು ಇಸ್ರೇಲಿ ಮಿಲಿಟರಿ ವಕ್ತಾರರು ಖಚಿತ ಪಡಿಸಲಿಲ್ಲ. ಆದರೆ ಮಾತುಕತೆಗಳ ಮೂಲಕ ಇರಾನ್ ಅಣು ಕಾರ್ಯಕ್ರಮದ ಬಗ್ಗೆ ವಿವಾದ ಬಗೆಹರಿಸದಿದ್ದರೆ, ತಾನು ಅಣು ಸ್ಥಾವರ ಮತ್ತು ಇತರ ಮಿಲಿಟರಿ ತಾಣಗಳ ಮೇಲೆ ದಾಳಿ ನಡೆಸುವುದಾಗಿ ಹಲವು ಬಾರಿ ಇಸ್ರೇಲಿ ಸರ್ಕಾರ ಎಚ್ಚರಿಸಿದೆ. ಈ ಮಿಲಿಟರಿ ಅಭ್ಯಾಸದ ಬಗ್ಗೆ ಇಸ್ರೇಲ್ ಅಮೆರಿಕಕ್ಕೆ ಮಾಹಿತಿ ನೀಡಿದೆ. ಬುಶ್ ತಮ್ಮ ಯುರೋಪ ಭೇಟಿಯಲ್ಲೂ ಇರಾನ್ ವಿವಾದ ಬಗೆಹರಿಸದಿದ್ದರೆ ತೀವ್ರ ಪರಿಣಾಮ ಎದುರಿಸಬೇಕಾದೀತು ಎಂದು ಎಚ್ಚರಿಸಿದ್ದರು. ಯುರೋಪಿಯನ್ ದೇಶಗಳು ಇರಾನ್ ಮೇಲೆ ಒತ್ತಡ ಹೇರಬೇಕೆಂದು ಒತ್ತಾಯಿಸಿದರು.

ಇಸ್ರೇಲ್ ಸಹ ಈ ರಿಹರ್ಸಲ್ ಮೂಲಕ ಅದನ್ನೇ ಹೇಳುತ್ತಿದೆ. ಯಾವುದೇ ನೆಪದಲ್ಲಿ ಇರಾನ್ ಮೇಲೆ ಯುದ್ಧ ಮಾಡುವ ಬುಶ್ ಹುನ್ನಾರಕ್ಕೆ ಅವರ ದೇಶದೊಳಗೆ ಮತ್ತು ಮಿತ್ರದೇಶಗಳಲ್ಲಿ ತೀವ್ರ ವಿರೋಧ ಇರುವ ಹಿನ್ನೆಲೆಯಲ್ಲಿ, ಮಧ್ಯ ಏಶ್ಯಾದ 'ರೌಡಿ' ಇಸ್ರೇಲ್ ಮೂಲಕ ಅದನ್ನು ಸಾಧಿಸುವ ಪ್ರಯತ್ನದ ಸೂಚನೆ ಇಲ್ಲಿದೆ. ತಮ್ಮ ಅಧ್ಯಕ್ಷಗಿರಿ ಮುಗಿಯುವ ಮೊದಲು ತೈಲ-ಸಮೃದ್ಧ ಮಧ್ಯ ಏಶ್ಯಾದಲ್ಲಿ ಅಮೆರಿಕನ್ ಯಜಮಾನಿಕೆಯನ್ನು ಶಾಶ್ವತವಾಗಿ ಗಟ್ಟಿಗೊಳಿಸುವ ಬಲಪಂಥಿಯ ಪ್ರಾಜೆಕ್ಟ್ ಮುಗಿಸುವ ಬುಶ್ ಹತಾಶ ಪ್ರಯತ್ನ ಇದು. ○

ಕರ್ಝಾಯಿ ಸರ್ಕಾರಕ್ಕೆ ತಾಲಿಬಾನ್‌ನ ತೀವ್ರ ಸವಾಲು

ಸರ್ಕಾರದಿಂದ ಉರುಳಿಸಲ್ಪಟ್ಟು ಏಳು ವರ್ಷಗಳ ನಂತರವೂ ತಾಲಿಬಾನ್ ಅಫ್ಘಾನಿಸ್ತಾನದಲ್ಲಿ ಜೀವಂತವಾಗಿದೆ. ಈಗ ಅದು ಕರ್ಝಾಯಿ ಸರ್ಕಾರಕ್ಕೆ ತೀವ್ರ ಸವಾಲು ಎಸೆದಿದೆ. ಇತ್ತೀಚೆಗೆ ಕಂದಾಹಾರದ ಬಳಿ ಸುಮಾರು 600 ಕ್ಕೂ ಹೆಚ್ಚು ತಾಲಿಬಾನ್ ಗೆರಿಲ್ಲಾಗಳು ಜೈಲಿನ ಮೇಲೆ ದಾಳಿ ಮಾಡಿ ಕೈದಿಗಳನ್ನು ಬಿಡುಗಡೆ ಮಾಡಿದರು. ದಕ್ಷಿಣದಲ್ಲಿ ಪಾಕಿಸ್ತಾನದ ಗಡಿ ಬಳಿ ಇರುವ ಅರ್ಘಂದಾಬಾದ್ ಎಂಬ ಕಂದಾಹಾರದ ಪ್ರದೇಶವನ್ನು ವಶ ಪಡಿಸಿಕೊಂಡಿದೆ. ಅಲ್ಲಿಂದ 20 ಕಿ,ಮೀ. ದೂರವಿರುವ ಕಂದಾಹಾರ್ ಪಟ್ಟಣವನ್ನು ವಶ ಪಡಿಸಿಕೊಳ್ಳಲು ತಾಲಿಬಾನ್ ಪ್ರಯತ್ನಿಸುತ್ತಿದೆ. ನಾಟೋ ಮತ್ತು ಅಫ್ಘಾನಿಸ್ತಾನದ ಸೈನ್ಯ ತಾಲಿಬಾನನ್ನು ಹಿಮ್ಮೆಟ್ಟಿಸಲು ಭಾರೀ ವಿಮಾನ ಮತ್ತು ರಾಕೆಟ್ ದಾಳಿ ನಡೆಸಿದೆ.



ಅರ್ಘಂದಾಬಾದ್ ನಾಗರಿಕರು ನಾಟೋ ಮತ್ತು ತಾಲಿಬಾನ್ ನ ತೀವ್ರ ಸಂಘರ್ಷದ ನಡುವೆ ಸಿಕ್ಕಿ ಬಿದ್ದಿದ್ದಾರೆ. ಸಾವಿರಾರು ಕುಟುಂಬಗಳು ಆ ಪ್ರದೇಶ ಬಿಟ್ಟು ಓಡಿ ಹೋಗಿದ್ದಾರೆ. ಕಂದಹಾರ್ ಪಟ್ಟಣದಲ್ಲಿ ಕರ್ಫ್ಯೂ ವಿಧಿಸಲಾಗಿದೆ.


ಕಂದಾಹಾರ್ ತಾಲಿಬಾನ್ ಜನ್ಮಸ್ಥಾನ ಐ.ಎಸ್.ಐ. ಮತ್ತು ಸಿ.ಐ.ಎ. (ಪಾಕಿಸ್ತಾನ ಮತ್ತು ಅಮೆರಿಕದ ಗೂಢಚಾರ ಸಂಸ್ಥೆಗಳು) ಅದರ ಅಪ್ಪ ಅಮ್ಮ. 1978 ರ 'ಎಪ್ರಿಲ್ ಕ್ರಾಂತಿ' ನಂತರ ಬಂದ ಮತ್ತು ನೆರವಿಗೆ ಬಂದ ಸೋವಿಯೆಟ್ ಸರ್ಕಾರದ ಬೆಂಬಲದ ಪ್ರಗತಿಪರ ಸರ್ಕಾರಗಳನ್ನು ಉರುಳಿಸಲು ಸಿ.ಐ.ಎ. ಹುಟ್ಟು ಹಾಕಿದ ಅಥವಾ ಬೆಂಬಲಿಸಿದ ಮೂಲಭೂತವಾದಿ ಭಯೋತ್ಪಾದಕ ಗುಂಪುಗಳಲ್ಲಿ ಇದು ಒಂದು. ಸೋವಿಯೆಟ್ ಸೈನ್ಯ ಹಿಂತೆಗೆತದ ನಂತರ ಮೂಲಭೂತವಾದಿ ಭಯೋತ್ಪಾದಕ ಗುಂಪುಗಳ ನಡುವೆ ನಡೆದ ಆಂತರಿಕ ತಿಕ್ಕಾಟದಲ್ಲಿ ಗೆದ್ದು ಅಫ್ಘಾನಿಸ್ತಾನದಲ್ಲಿ ಸರ್ಕಾರದ ಚುಕ್ಕಾಣಿ ಹಿಡಿದಿತ್ತು. ಅಮೆರಿಕನ್ ಸರ್ಕಾರ ತಾಲಿಬಾನ್ ಸರ್ಕಾರವನ್ನು ವಿರೋಧಿಸಿರಲಿಲ್ಲ. ಆದರೆ ಸೆಪ್ಟೆಂಬರ್ 2001 ರ ನಂತರ ತಾಲಿಬಾನ್ 'ಮೂಲಭೂತವಾದಿ ಭಯೋತ್ಪಾದಕ ಗುಂಪು' ಎಂದು ಅಮೆರಿಕನ್ ಸರ್ಕಾರಕ್ಕೆ 'ಜ್ಞಾನೋದಯ' ಆಗಿತ್ತು. ಎಂದು ಇಲ್ಲಿ ನೆನಪಿಸಿ ಕೊಳ್ಳಬಹುದು.

60 ಸಾವಿರ ನಾಟೋ ಮತ್ತು ಒಂದು ವರೆ ಲಕ್ಷ ಅಫ್ಘಾನಿ ಸೈನ್ಯದ ಬೆಂಬಲದಲ್ಲಿ ಬದುಕಿರುವ ಕರ್ಝಾಯಿ ಸರ್ಕಾರದ ಸುಳಿವು ಸಹ ಕಾಬೂಲ್ ಆಚೆಗೆ ಇಲ್ಲ, ಯಾವತ್ತೂ ಇರಲಿಲ್ಲ ಎಂಬುದು ಎಲ್ಲರಿಗೂ ಗೊತ್ತಿರುವ ಸಾರ್ವಜನಿಕ ಗುಟ್ಟು. ಕಳೆದ ಏಳು ವರ್ಷಗಳಲ್ಲಿ ಕಾಬೂಲಿನ ಆಚೆಗಿನ ಅಫ್ಘಾನಿಸ್ತಾನ ತಾಲಿಬಾನ್ ಮುಂತಾದ ಮೂಲಭೂತವಾದಿ ಭಯೋತ್ಪಾದಕ ಗುಂಪುಗಳ ರಕ್ತದೋಕುಳಿಯ ಆಟದ ಮೈದಾನವಾಗಿತ್ತು. ಅಫ್ಘಾನಿಸ್ತಾನದ ಜನರ ಜೀವನ ಇನ್ನಷ್ಟು ದುರ್ಭರವಾಗಿದೆ. ಮಹಿಳಾ ಶಿಕ್ಷಣ, ಶಾಂತಿ, ಭದ್ರತೆ ಮುಂತಾದ 1978 ರ 'ಎಪ್ರಿಲ್ ಕ್ರಾಂತಿ'ಯ (ತಾಲಿಬಾನ್ ಆಳ್ವಿಕೆಯ ನಂತರ) ಅಳಿದುಳಿದ ಸಕಾರಾತ್ಮಕ ಅಂಶಗಳನ್ನು ಪೂರ್ಣವಾಗಿ ಮುಗಿಸಿದ್ದಷ್ಟೇ ಕರ್ಝಾಯಿ ಸರ್ಕಾರದ ಸಾಧನೆ.

ನಾಟೋ ಸೈನ್ಯ ಕರ್ಝಾಯಿ ಸರ್ಕಾರದ ಮತ್ತು ಇತರ ಪ್ರತಿಷ್ಠಿತರನ್ನು ಮತ್ತು ತನ್ನನ್ನು ರಕ್ಷಿಸುವುದರಲ್ಲೇ ಸುಸ್ತು ಹೊಡೆದಿತ್ತು. ಜನತೆಗೆ ಕನಿಷ್ಠ ಕಾನೂನು-ವ್ಯವಸ್ಥೆ, ರಕ್ಷಣೆ ಮತ್ತು ಶಾಂತಿ ಒದಗಿಸುವುದರಲ್ಲಿ ವಿಫಲವಾಗಿತ್ತು. ತಾಲಿಬಾನ್ ಮುಂತಾದ ಮೂಲಭೂತವಾದಿ ಭಯೋತ್ಪಾದಕ ಗುಂಪುಗಳನ್ನು ಹತ್ತಿಕ್ಕುವುದರಲ್ಲಿ ಸಹ ಪೂರ್ಣವಾಗಿ ವಿಫಲವಾಗಿತ್ತು. ಕಳೆದ ಎರಡು ವರ್ಷಗಳಲ್ಲಿ ತಾಲಿಬಾನ್ ಪುನಶ್ಚೇತನಗೊಂಡು ಕರ್ಝಾಯಿ ಸರ್ಕಾರಕ್ಕೆ ತೀವ್ರ ಸವಾಲು ಒಡ್ಡಿದೆ. ತೀವ್ರ ಹಿಂಸಾಚಾರದಲ್ಲಿ ತೊಡಗಿದೆ. ಇಂತಹ ನೆಲೆಯಿಲ್ಲದ ಸರ್ಕಾರ ತಾಲಿಬಾನ್ ದಾಳಿ ತಡಕೊಂಡು ಬಾಳೀತೇ? ಕಾದು ನೋಡಬೇಕು. ○

ಬ್ಲಾಗ್ ಲೋಕಕ್ಕೆ ಚೀನಾ ಪ್ರಧಾನಿ ಪ್ರವೇಶ

ಇಂಟರ್‌ನೆಟ್ ಒಂದು ಮಾಧ್ಯಮವಾಗಿ
ಚೀನಾದಲ್ಲಿ ಅತ್ಯಂತ ಜನಪ್ರಿಯವಾಗಿದೆ. 2
ಕೋಟಿ ಬಳಕೆದಾರರನ್ನು ಹೊಂದಿ ಚೀನಾ ಜಗತ್ತಿ
ಅತಿ ದೊಡ್ಡ 'ನೆಟ್ ಬಳಕೆದಾರ' ಸ್ಥಾನವನ್ನು
ಅಮೆರಿಕದಿಂದ ಕಸಿದುಕೊಂಡಿದೆ. ನೆಟ್ ಬಳ
ವೇಗವಾಗಿ ಬೆಳೆಯುತ್ತಿರುವ ಮಾಧ್ಯಮ ಕೂಡಾ
ಯಾವುದೇ ಸಂಪಾದಕೀಯ ನಿಯಂತ್ರಣ ಸೆನ್ಸಾರ
ಶಿಪ್ ಇಲ್ಲದೆ, ಸ್ವಂತ ಅಭಿವ್ಯಕ್ತಿಗೆ ಒತ್ತು ಕೊಡುವ
'ಬ್ಲಾಗ್' ಸಹ ಚೀನಾದಲ್ಲಿ ಜನಪ್ರಿಯವಾಗಿದೆ.
'ಕಿಯಾಂಗುವೋ ಫೋರಂ' ಎಂಬ ಚೀ



ವೆಬ್ ಸೈಟು ಅತ್ಯಂತ ಜನಪ್ರಿಯ. ಇಲ್ಲಿ ದಿನ
23 ಸಾವಿರ ತಮ್ಮ ಅಭಿಪ್ರಾಯ ದಾಖಲಿಸು
ಬರಹ ಇಡುತ್ತಾರೆ. 14 ಲಕ್ಷ ಓದುಗರು ಒಂದ
ಸಮಯದಲ್ಲಿ ಇಲ್ಲಿಗೆ ಭೇಟಿ ನೀಡುತ್ತಾರೆ. ಈ
ಫೋರಂ 1999 ರಲ್ಲಿ ಬೆಲ್‌ಗ್ರೆಡ್ ಚೀನಿ
ರಾಯಭಾರ ಕಚೇರಿ ಮೇಲೆ ನಾಟೋ
ದಾಳಿಯನ್ನು ಪ್ರತಿಭಟಿಸಲು ಆರಂಭವಾಗಿತ್ತು
ಇತ್ತೀಚೆಗೆ ಫ್ರಾನ್ಸ್ ನಲ್ಲಿ ಒಲಿಂಪಿಕ್ಸ್ ಜ್ಯೋ
ಮೇಲೆ ದಾಳಿ ಮತ್ತು ಆ ಬಗ್ಗೆ ಫ್ರೆಂಚ್ ಸರ್ಕಾರ
ಧೋರಣೆಯ ವಿರುದ್ಧ ಫ್ರೆಂಚ್ ಸರಕುಗಳ
ಬಹಿಷ್ಕಾರದ ಸಂದೇಶ ಹರಡಲು ವ್ಯಾಪಕ 'ನೆಟ್
ಬಳಕೆ' ಆಗಿತ್ತು.

ಈಗ ಚೀನಾ ಕಮ್ಯುನಿಸ್ಟ್ ಪಕ್ಷ ಮತ್ತು ಸರ್ಕಾ
ಸಹ ಇಂಟರ್ ನೆಟ್ ಮಾಧ್ಯಮದ ಬಳಕೆ
ಮುಂದಾಗಿದೆ. ಇತ್ತೀಚೆಗೆ ಚೀನಾದ ಪ್ರಧಾ
ತಮ್ಮ ಸ್ವಂತ ಬ್ಲಾಗ್ ಸ್ಥಾಪಿಸಿ ಬ್ಲಾಗ್ ಲೋಕ
ಪ್ರವೇಶ ಮಾಡಿದ್ದಾರೆ. ತಮ್ಮ ಅನ್ನಿಸಿಕೆಗಳ
ನೇರವಾಗಿ ಹಂಚಿಕೊಳ್ಳುವ ಮತ್ತು ನಾಗರಿಕ
ಅನ್ನಿಸಿಕೆಗಳನ್ನು ನೇರವಾಗಿ ಗ್ರಹಿಸುವಲ್ಲಿ ಇದ
ಸಹಕಾರಿಯಾಗಿದೆ ಎಂದಿದ್ದಾರೆ ಅವರು.

ಇತ್ತೀಚೆಗೆ ಅಧ್ಯಕ್ಷ ಹು ನಾಗರಿಕರ ಜತೆ 2
ನಿಮಿಷಗಳ ಕಾಲ 'ವೆಬ್ ಹರಟೆ' ನಡೆಸಿದರು
ಅವರು 300ಕ್ಕೂ ಹೆಚ್ಚು ನಾಗರಿಕರ ಪ್ರಶ್ನೆಗಳಿ
ಉತ್ತರಿಸಿದರು. ಇದು 'ಪೀಪಲ್ಸ್ ಡೈಲಿ'
ವೆಬ್ ಸೈಟಿನ ಮೂಲಕ ನಡೆಯಿತು. ಇತ
ಹಲವು ಪ್ರಮುಖ ಪಕ್ಷ ಮತ್ತು ಸರ್ಕಾರದ ಉನ್ನ
ನಾಯಕರು ನೆಟ್ ಮಾಧ್ಯಮದ ಬಳ
ಆರಂಭಿಸಿದ್ದು ಇದು ವೇಗವಾಗಿ ಹರಡು
ಸೂಚನೆ ಕಂಡಿದೆ.

ನೋಟ



ಎಸ್‌ಇಝಡ್ ಹೆಸರಿನಲ್ಲಿ ಸುಲಿಗೆ - ರಿಯಲ್‌ಎಸ್ಟೇಟ್ ದಂಧೆ

ಉತ್ಪಾದನಾ ಪ್ರಕ್ರಿಯೆಯ ವಿಭಿನ್ನ ಸ್ತರಗಳನ್ನು ...ಭೌಗೋಲಿಕವಾಗಿ ಭಿನ್ನ ಭಿನ್ನ ಸ್ಥಾನಗಳಿಗೆ ...ಮಿತಗೊಳಿಸುವ ಉದ್ದೇಶ, ಕಡಿಮೆ ಬೆಲೆಯ ...ಶ್ರಮದ ಹುಡುಕಾಟ, ಕಡಿಮೆ ಕರ, ಸುಂಕದ ಸೌಲಭ್ಯ, ...ಪರಿಹಾರದ ಸಮಸ್ಯೆಗಳ ಬಗ್ಗೆ ತಲೆಕೆಡಿಸಿಕೊಳ್ಳ...ಬೇಕಾಗಿಲ್ಲದ ಪರಿಸರ - ಇಂತಹ ಸ್ಥಳಗಳಲ್ಲಿ ...ಬಹುರಾಷ್ಟ್ರೀಯ ಕಂಪೆನಿಗಳ ಸೇವಾಕ್ಷೇತ್ರಗಳು ...ಅತ್ಯಂತ ಸಕ್ರಿಯವಾಗಿರುತ್ತದೆ. ವಿಶಾಲ ಬ್ಯಾಂಕಿಂಗ್ ...ವ್ಯವಸ್ಥೆ, ಹೋಟೆಲ್‌ಗಳ ಸರಮಾಲೆ, ಗಾಡಿಗಳು, ...ವಿಮೆ ಮುಂತಾದವುಗಳೊಂದಿಗೆ ಒಂದು ಬಹುದೊಡ್ಡ ...ಜಾಗತಿಕ ನೆಟ್‌ವರ್ಕ್ ಸ್ಥಾಪಿಸಲು ಸಕ್ರಿಯವಾಗುತ್ತದೆ. ...ಉತ್ಪಾದನೆಯೊಂದಿಗೆ ಸಂಬಂಧಿಸಿದ ...ಕಾರ್ಪೋರೇಟ್ ಸಂಸ್ಥೆಗಳಲ್ಲಿ ಭೂಮಂಡಲೀಯ ...ವ್ಯವಸ್ಥೆಯನ್ನು ಕ್ರಮಶಃ ಇಂಟರ್‌ಲಾಕ್ ...ಸಮ್ಮಿಲಿತ'ಗೊಳಿಸಲಾಗಿದೆ. ಇದರೊಂದಿಗೆ ಕಡಿಮೆ ...ಶ್ರಮದಲ್ಲಿ ಹೆಚ್ಚು ಉತ್ಪಾದನೆಯ ಆಧಾರದಲ್ಲಿ ನೇರ ...ಹೂಡಿಕೆಯು 'FDI' ಹರಿದು ಬರುತ್ತದೆ.

ಈ ಜಾಗತಿಕ ಸಂಸ್ಥೆಗಳು ರಾಷ್ಟ್ರೀಯ ಸರಕಾರಗಳ ...ನಿಯಂತ್ರಣದಿಂದ ಹೊರಗಿರುತ್ತವೆ. ...ಸ್ಪರ್ಧಾತ್ಮಕವಾದ ಜಾಗತಿಕ ಮಾರುಕಟ್ಟೆಗೆ ಹೂಡಿಕೆ ...ಮತ್ತು ವ್ಯಾಪಾರದ ಉದಾರೀಕರಣವು ಹೆಚ್ಚು ಹೆಚ್ಚು ...ಸುಲಭವಾಗಬೇಕು. ಇದರಿಂದಾಗಿ ಜಾಗತೀಕರಣವು ...ಆರಂಭವಾದಂದಿನಿಂದ ಸರಿ ಸುಮಾರು ಇಡೀ ...ವಿಶ್ವವೇ ಇದರ ಚಕ್ರವ್ಯೂಹದಲ್ಲಿ ಸಿಲುಕಿಕೊಂಡಿದೆ. ...ಅಧಿಕಾರಶಾಹಿಗಳು ಇದನ್ನು ಸಮರ್ಥಿಸಿದರೆ ...ಜಗತ್ತಿನಾದ್ಯಂತ ಚಿಂತನಶೀಲ ವ್ಯಕ್ತಿಗಳು, ಸಾಮಾಜಿಕ ...ಸಂಸ್ಥೆಗಳು, ಜನಸಾಮಾನ್ಯರು ಇದನ್ನು ...ವಿರೋಧಿಸುತ್ತಿದ್ದಾರೆ. ಹಣ ಮತ್ತು ಅಧಿಕಾರಕ್ಕಾಗಿ ...ಎದುರೆಗೆ ಕಣ್ಣು ಪಟ್ಟಿ ಕಟ್ಟಿದಂತೆ ಓಡುತ್ತಿರುವ ಹಲವು ...ರಾಜಕೀಯ ಪಕ್ಷಗಳು ಇದರ ಪರವಾಗಿ ಸೊಂಟಕಟ್ಟಿ...ನಿಂತಿವೆ.

...ಎಡಪಕ್ಷಗಳು ಸರ್ಕಾರದ ಎಸ್‌ಇಝಡ್ ...ನೀತಿಗೆ ಹಲವು ತಿದ್ದುಪಡಿಗಳನ್ನು ಸೂಚಿಸಿದವು. ...ಸರ್ಕಾರ ಅದನ್ನು ಕೇಳಲು ತಯಾರಿಲ್ಲ. ಕೈಗಾರಿಕೆ ...ಹೆಸರಿನಲ್ಲಿ ರಿಯಲ್ ಎಸ್ಟೇಟ್ ದಂಧೆಗೆ ...ಅವಕಾಶವಿರಬಾರದು. ಶೇ. 25 ಕೈಬಧಲಾಗಿ ಶೇ. ...) ರಷ್ಟು ಭೂಮಿಯು ಕೈಗಾರಿಕಾ ಉದ್ದೇಶಕ್ಕೆ ...ಬಳಸುವಂತೆ, ಉಳಿದದ್ದನ್ನು ಪೂರಕ ಉದ್ದೇಶಕ್ಕೆ ...ಬಳಸುವ ಅವಕಾಶ ಇರುವಂತೆ ಕಾನೂನು ...ತಿದ್ದಬೇಕು. ಕಾರ್ಮಿಕ ವರ್ಗದ ಹಕ್ಕುಗಳನ್ನು ...ರಕ್ಷಿಸಬೇಕು. ವಶಕ್ಕೆ ತೆಗೆದುಕೊಳ್ಳುವ ಭೂಮಿಗೆ ಗರಿಷ್ಟ ...ಮಿತಿ ನಿಗದಿ ಮಾಡಬೇಕು... ಹೀಗೆ ಹಲವು ...ಮಹತ್ವದ ತಿದ್ದುಪಡಿ ಸೂಚಿಸಲಾಯಿತಾದರೂ ...ಸರ್ಕಾರ ಅದನ್ನು ಪರಿಗಣಿಸಲಿಲ್ಲ. ಎಡ ಸರ್ಕಾರ ...ಇರುವ ಕಡೆ ಈ ಬಗ್ಗೆ ಸಾಕಷ್ಟು ಕಾಳಜಿ ...ವಹಿಸಲಾಗಿದೆ.

ಜನವಿರೋಧಿ ನೀತಿಗಳನ್ನು ಸುಂದರ ಸೈದ್ಧಾಂತಿಕ ...ಜಾಲದಲ್ಲಿ ಹಾಗೂ ನೀತಿ ನಿಯಮಾವಳಿಗಳಲ್ಲಿ ...ಮಂಡಿಸುತ್ತಿದ್ದ ಅಧಿಕಾರಶಾಹಿ ಈಗ ನಿರ್ಲಜ್ಜವಾಗಿ ...ಸ್ಪಷ್ಟವಾಗಿದೆ. ಅದು ಜನಕಲ್ಯಾಣಕಾರಿಯಾದ ಎಲ್ಲಾ ...ಕಾರ್ಯಕ್ರಮಗಳನ್ನು ಕೈ ಬಿಟ್ಟಿದೆ. ಈ ಹದಿನೈದು ...ವರ್ಷಗಳಲ್ಲಿ ಖಾಸಗೀಕರಣ ಮತ್ತು ಮಾರುಕಟ್ಟೆ ...ಹೆಸರಿನಲ್ಲಿ ಶಿಕ್ಷಣ, ಆರೋಗ್ಯ ಮತ್ತು ಕೃಷಿ ಕ್ಷೇತ್ರಗಳನ್ನು 'ಅನುತ್ಪಾದಕ' ಖರ್ಚುಗಳ ನೆಲೆಯಲ್ಲಿ ಬೇಕಾಬಿಟ್ಟಿ ಕಡಿತಗಳನ್ನು ಮಾಡಲಾಗಿದೆ.

ಮೊದಲಿಗೆ ಜಾಗತೀಕರಣಕ್ಕೆ ಸುಸಂಬದ್ಧವಾದ ನೀತಿಗತ ಧೋರಣೆಗಳನ್ನು ಎನ್.ಡಿ.ಎ. ಸರಕಾರ 1 ಏಪ್ರಿಲ್ 2000ದಲ್ಲಿ ಜಾರಿಗೊಳಿಸಿತು. ಇದನ್ನೇ ವಿಸ್ತರಿಸಿ ಜೂನ್ 2005ರಲ್ಲಿ ಯು.ಪಿ.ಎ. ಸರಕಾರವು 'ವಿಶೇಷ ಆರ್ಥಿಕವಲಯ'ದ ಕಾನೂನನ್ನು ಸಂಸತ್ತಿನಲ್ಲಿ ಮಂಡಿಸಿತು. ಅದು ಯಾವುದೇ ಚರ್ಚೆಯಿಲ್ಲದೆ ಎಲ್ಲರ ಅನುಮತಿಯ ಮೇರೆಗೆ ಒಪ್ಪಿತವಾಯಿತು.

ಈ 'ವಿಶೇಷ ಆರ್ಥಿಕ ವಲಯ'ದ ವಾಸ್ತವಿಕತೆಯೇನು? ರಫ್ತು ಉತ್ಪಾದನೆಗಳಿಗೆ ಪ್ರೋತ್ಸಾಹ ಕೊಡಲು, ಮುಕ್ತ ವಾತಾವರಣವನ್ನು ನಿರ್ಮಾಣ ಮಾಡಿಕೊಡಲು, ದೇಶಿ ವಿದೇಶೀ ಕೈಗಾರಿಕೋದ್ಯಮಿಗಳಿಗೆ ಅಡೆತಡೆಯಿಲ್ಲದಂತೆ ಲಾಭ ಮಾಡಿಕೊಡಲು ಈ ಕಾನೂನನ್ನು ವ್ಯವಸ್ಥೆಗೊಳಿಸಲಾಗಿದೆ. ಇದರ ಫಲವಾಗಿ ಅತ್ಯಂತ ಕಡಿಮೆ ದರದಲ್ಲಿ ರೈತರ ಜೀವವಾದ ಭೂಮಿಯನ್ನು ಸರಕಾರದ ಕೃಪಾಹಸ್ತದ ಮೂಲಕ ವಶಪಡಿಸಿಕೊಳ್ಳಲು ಈ ಕಾನೂನು ಅಪರಿಮಿತ ಅಧಿಕಾರವನ್ನು ನೀಡುತ್ತದೆ.

ಇದರ ಮೊತ್ತಮೊದಲ ಜ್ವಲಂತ ಉದಾಹರಣೆಯನ್ನು ಮಹಾರಾಷ್ಟ್ರದಲ್ಲಿ ಕಾಣಬಹುದು. ಹೊಸ ಮುಂಬೈಯಿಂದ ಬಂದರಿನ ತನಕದ 35,000 ಎಕ್ರೆಯನ್ನು ರಿಲಯನ್ಸ್ ವಶಪಡಿಸಿಕೊಳ್ಳಲು ಪ್ರಯತ್ನಿಸಿತು. ಮಾರುಕಟ್ಟೆ ದರ 40 ಲಕ್ಷವಿದ್ದರೆ, ರಿಲಯನ್ಸ್ ನೀಡುವ ದರ 3 ರಿಂದ 4 ಲಕ್ಷ. ರೈತರು ನಿರಾಕರಿಸಿ ಹೋರಾಟ ಮಾಡಿದರೂ ಈಗ ಬಹಳಷ್ಟು ಜಮೀನನ್ನು ರಿಲಯನ್ಸ್ ಖರೀದಿಸಿದೆ.

ಈ ವಿಶಿಷ್ಟ ಆರ್ಥಿಕ ವಲಯವೆಂಬ ವಿಶೇಷ ಯೋಜನೆಯ ಅಧಿಕಾರಿ ಮುಖೇಶ್ ಅಂಬಾನಿ! ಮಾರುಕಟ್ಟೆಯ ಶಕ್ತಿಗಳನ್ನು ಉಪಯೋಗಿಸಿ ಕೈವಶ ಮಾಡಿಕೊಳ್ಳಲಾಗದಿದ್ದ ಪರಿಸ್ಥಿತಿಯಲ್ಲಿ ಸರಕಾರದ ಸಹಾಯದಿಂದ ಅವೇ ಜಮೀನನ್ನು ಕವಡೆ ಕಾಸಿನ ದರದಲ್ಲಿ ಪಡೆದುಕೊಳ್ಳಲು ಈ ದೊಡ್ಡ ಕಂಪೆನಿಗಳು ಸಫಲವಾದವು. ಬಂಡವಾಳ ಮತ್ತು ಅಧಿಕಾರ 'ಸರಕಾರ'ದ ಅನೈತಿಕ ಮೈತ್ರಿ ಜಾಗತಿಕ ಬಂಡವಾಳದ ವಿಶಿಷ್ಟ ಲಕ್ಷಣ.

ಕೇವಲ ಜಮೀನನ್ನು ಕೈವಶ ಮಾಡಿಕೊಳ್ಳುವ ತನಕ ಮಾತ್ರ ಸರಕಾರ ಉದ್ಯಮಪತಿಗಳಿಗೆ ಸಹಕಾರ ನೀಡುವುದಿಲ್ಲ. ಅದರ ಜತೆಗೆ ಅತ್ಯಗತ್ಯವಾದ ಮೂಲಭೂತ ಅಧಿರಚನೆ `Infrastr uture'ಯನ್ನು ವ್ಯವಸ್ಥೆಗೊಳಿಸಿ ಕೊಡುವುದು. ಮಾರುಕಟ್ಟೆ ಒದಗಿಸಿಕೊಡುವುದು, ದೀರ್ಘಕಾಲದ ತನಕ ಎಲ್ಲಾ ಬಗೆಯ ತೆರಿಗೆಗಳಿಗೆ ವಿನಾಯತಿ ನೀಡುವುದು ಇತ್ಯಾದಿ ಎಲ್ಲಾ ಬಗೆಯ ಸಹಾಯವನ್ನೂ ನೀಡುತ್ತಾ ಮುಂದಿನ 15 ವರ್ಷಗಳ ತನಕ ಎಲ್ಲಾ ಬಗೆಯ ಕರಗಳಿಂದ ಆ ಉದ್ಯಮಗಳು ಮುಕ್ತವಾಗಿರುತ್ತವೆ. ಅದರಲ್ಲೂ 5 ವರ್ಷಗಳ ತನಕ ಆದಾಯ ತೆರಿಗೆಯನ್ನು ಆ ಕಂಪೆನಿಗಳು ಕಟ್ಟಬೇಕಾಗಿಲ್ಲ. ಇದಲ್ಲದೆ, ಕಾನೂನಿನ ಉಪನಿಯಮದ ಪ್ರಕಾರ ಸಂಪತ್ತನ್ನು ಖರೀದಿಸುವಾಗ ಮತ್ತು ಮಾರುವಾಗ ಸ್ಟಾಂಪ್ ಡ್ಯೂಟಿಯನ್ನು ಕೂಡಾ ಕೊಡಬೇಕಾಗಿಲ್ಲ. ಅದನ್ನು ಮನ್ನಾ ಮಾಡಲಾಗಿದೆ. ಕಾನೂನಿನ 5ನೆಯ ಅನುಚ್ಛೇದದ ಪ್ರಕಾರ ವಿದ್ಯುತ್ತಿನ ವಿತರಣೆ, ಉತ್ಪಾದನೆ, ಸಂಚಲನೆ ಅಥವಾ ಉಪಯೋಗದಲ್ಲೂ ಯಾವುದೇ ಬಗೆಯ ಕರವನ್ನು ಹೊರಿಸಲಾಗುವುದಿಲ್ಲ. 12ನೆಯ ನಿಯಮದ ಪ್ರಕಾರ ವಸ್ತುವಿನ ಆಮದಿನ ಮೇಲೆ ಸಂಪೂರ್ಣ ತೆರಿಗೆ ವಿನಾಯತಿಯಿದೆ. ಈ ವಲಯದಲ್ಲಿ ಯಾವುದೇ ಬಗೆಯ ಸೇವಾಕರಗಳೂ ಇರುವುದಿಲ್ಲ. ಎಲ್ಲಕ್ಕಿಂತ ಭಯಾನಕವಾದ ಅಂಶವೆಂದರೆ ವರ್ಷಗಟ್ಟಲೆ ಕಾರ್ಮಿಕರು ಹೋರಾಡಿ ಪಡೆದ ಹಕ್ಕುಗಳನ್ನು ತೀವ್ರವಾಗಿ ಮೊಟಕುಗೊಳಿಸಲಾಗಿದೆ.

ಆದರೆ ಯೋಜನೆ ಜಾರಿಯಾಗುತ್ತಲೆ ಅದರ ಸುನಾಮಿಗೆ ಇಡೀ ದೇಶವೇ ತತ್ತರ ನಡುಗುವಂತಾಗಿದೆ. ಮಹಾರಾಷ್ಟ್ರ, ಹರ್ಯಾಣ, ಉತ್ತರಪ್ರದೇಶ, ಕರ್ನಾಟಕ, ಒರಿಸ್ಸಾ ಇತ್ಯಾದಿ ದೇಶದ ಎಲ್ಲಾ ಕಡೆಗಳಲ್ಲಿಯೂ 'ವಿಶೇಷ ಆರ್ಥಿಕ ವಲಯ'ಕ್ಕಾಗಿ ರೈತರ ಜಮೀನನ್ನು ಒತ್ತುವರಿ ಮಾಡಿಕೊಳ್ಳುವ ಯೋಜನೆ ಜಾರಿಯಾಗಿದೆ. ದೇಶದೆಲ್ಲಡೆ ರೈತರಿಂದ, ಬುದ್ಧಿಜೀವಿಗಳಿಂದ, ಎಡಪಕ್ಷದ ಚಿಂತನಶೀಲ ವ್ಯಕ್ತಿಗಳಿಂದ ವಿರೋಧವು ಪ್ರಕಟವಾಗತೊಡಗಿದೆ. 2006 ನವಂಬರ ತನಕ ಸರ್ಕಾರ ದೇಶದಾದ್ಯಂತ 212 ವಿಶೇಷ ಆರ್ಥಿಕ ಕ್ಷೇತ್ರಗಳ ನಿರ್ಮಾಣಕ್ಕೆ ಅನುಮತಿ ನೀಡಿತ್ತು. ಈ ಅನುಮತಿ ನೀಡಲಾದ ವಲಯಗಳ ಸಂಖ್ಯೆ 450ಕ್ಕೂ ಮೀರಿದೆ. 2000 ನವಂಬರ ತನಕ ನೀಡಲಾದ ಅನುಮತಿಗೆ ಬೇಕಾಗುವ ಜಮೀನಿನ ವಿಸ್ತೀರ್ಣದಲ್ಲಿ ಸುಮಾರು 40,000 ಹೆಕ್ಟೇರುಗಳಷ್ಟು. ಅವುಗಳಲ್ಲಿ ಬಹುಭಾಗ ಫಲವತ್ತಾದ ಕೃಷಿ ಭೂಮಿ. ಈಗಾಗಲೇ ನೀಡಲಾದ ಹರ್ಯಾಣದ ಹರಸಾರುವಿನಿಂದ ತನಕದ ಭೂಮಿ ಎರಡು ಬೆಳೆ ಬರುವ ಭೂಮಿ. ಅದನ್ನು ಆಶ್ರಯಿಸಿ ಜೀವನ ಸಾಗಿಸುತ್ತಿರುವ ಜನರ ಸಂಖ್ಯೆ 2.4 ಲಕ್ಷ. ಒರಿಸ್ಸಾದ ಜಗತ್‌ಸಿಂಹಪುರ ಜಿಲ್ಲೆಯ ಸಮೀಪದ ಸ್ಟೀಲ್ ಪ್ಲಾಂಟ್‌ಗೆ ನೀಡಲಾದ ಜಮೀನು 1000 ಹೆಕ್ಟೇರ್. ಕಾನೂನಿನ ಬೆಂಬಲ ಪಡೆದ ಸರಕಾರಗಳು ಜಮೀನು ವಶಪಡಿಸಿಕೊಳ್ಳಲು ಪೋಲಿಸ್ ಬಲವನ್ನು ಉದ್ಯಮಪತಿಗಳಿಗೆ ನೀಡುತ್ತದೆ. ಇದಲ್ಲದೆ, ಉದ್ಯಮಪತಿಗಳ ಖಾಸಗಿ ಗೂಂಡಾ ಪಡೆಯೂ ಈ ಕಾರ್ಯಕ್ಕೆ ನಿಯುಕ್ತವಾಗಿರುತ್ತದೆ. ಆದರೆ ಪರಿಹಾರ ಪುನರ್ವಸದ ಪ್ರಶ್ನೆಗಳೆಲ್ಲಾ ಕೇವಲ ಭರವಸೆಗಳಾಗಿ ಮಾತ್ರ ಉಳಿದುಹೋಗಿರುವುದು ನಿಜವಾದ ವಾಸ್ತವ. ಮಂತ್ರಿ ಮಹೋದಯರೊಬ್ಬರ ನಿರ್ಲಜ್ಜ ಮಾತುಗಳು ಹೀಗಿರುತ್ತವೆ:

'ಈಗೀಗ ರೈತಾಪಿ ಜನರಿಗೆ ಭೂಮಿಯ ಮೇಲೆ ಆಸಕ್ತಿ ಕಡಿಮೆಯಾಗಿದೆ. ಅವರಿಗೆ ಒಳ್ಳೆಯ ಬೆಲೆ ಮತ್ತು ಪರಿಹಾರದ ಭರವಸೆ ನೀಡಿದರೆ ಅವರು ಭೂಮಿ ನೀಡಲು ಯಾವುದೇ ಅಡ್ಡಿಯನ್ನು ಮಾಡುವುದಿಲ್ಲ.' ಭೂಮಿಗಾಗಿ ಪ್ರಾಣಕೊಡುವ ರೈತನಿಗೆ ಭೂಮಿಯ ಆಕರ್ಷಣೆ ಹೇಗೆ ಕಡಿಮೆಯಾಗುತ್ತದೆ? ಇವರ ಉದ್ದುದ್ದ ಅಸಂಬದ್ಧ ಎಂಜಲು ಮಾತುಗಳನ್ನು ಬಿತ್ತರಿಸಲು ಇವರ ಕೈಕಂರ್ಯಕ್ಕೆ ಸದಾ ಸಿದ್ಧವಾಗಿರುವ ಮಾಧ್ಯಮಗಳಿವೆ. ಬಂಡವಾಳಪತಿಗಳ ಚಾಕರಿಯಲ್ಲೇ ತಮ್ಮ ಸ್ವರ್ಗ ಸುಖವನ್ನು ಸಂಪಾದಿಸಿಕೊಳ್ಳುವ ರಾಜಕಾರಣಿಗಳಿಂದ ಇದಕ್ಕಿಂತ ಹೆಚ್ಚಿಗೆ ಏನನ್ನು ತಾನೇ ನಿರೀಕ್ಷಿಸಬಹುದು?

ಈಗ್ಗೆ ಎರಡು ತಿಂಗಳ ಹಿಂದಿನ ವಿಚಾರ. 'ವಾರ್ತಾಭಾರತಿ' ಕನ್ನಡ ದೈನಿಕದಲ್ಲಿ ಬೆಂಗಳೂರು ಹೊರವಲಯದ 14 ಗ್ರಾಮಗಳನ್ನು ರಾತ್ರೋರಾತ್ರಿ ಪೋಲಿಸು ಮತ್ತು ಖಾಸಗಿ ಗೂಂಡಾ ಪಡೆಗಳಿಂದ ದಿಲ್ಲಿಯ ಖಾಸಗಿ ಟೆಲಿಕಾಂ ಕಂಪೆನಿಯೊಂದು ಬುಲ್‌ಡೋಜರ್ ಹೊಡೆಸಿ ನೆಲಸಮಗೊಳಿಸಿತು. 8 ಗ್ರಾಮಗಳಿಗೆ ಹೋಗುವ ಮಾರ್ಗಗಳನ್ನು ಮುಚ್ಚಿಬಿಟ್ಟಿತು. ದೂರು ನೀಡಲು ಹೋದ ರೈತರನ್ನು ಪೋಲಿಸರು ಠಾಣೆಯಲ್ಲಿ ಕೂಡಿ ಹಾಕಿ ಅವರ ಮೇಲೆ ಕೇಸು ಜಡಿದರು. ಇವೆಲ್ಲಾ ವಿಚಾರ ವಾರ್ತಾಭಾರತಿಯ ಮುಖಪುಟದಲ್ಲಿ ಚಿತ್ರ ಸಮೇತ ಪ್ರಕಟವಾಗಿತ್ತು. ಅದೇ ಪತ್ರಿಕೆಯ ಕೊನೆಯ ಪುಟದಲ್ಲಿ ಮುಖ್ಯಮಂತ್ರಿ ಕುಮಾರ ಸ್ವಾಮಿಯವರು ಸಾರ್ವಜನಿಕ ಸಭೆಯಲ್ಲಿ ಹೀಗೆ ಭಾಷಣ ಮಾಡುತ್ತಿದ್ದ ವರದಿಯೂ ಪ್ರಕಟವಾಗಿತ್ತು: 'ನಾವು ರೈತರ ಇಚ್ಛೆಗೆ ವಿರುದ್ಧವಾಗಿ ಅವರ ಒಂದಿಂಚೂ ಭೂಮಿಯನ್ನು ವಶಪಡಿಸಿಕೊಳ್ಳುವುದಿಲ್ಲ. ಈ ಬಗ್ಗೆ ರೈತರು ಅನಗತ್ಯ ಭಯಪಡುವ ಕಾರಣವಿಲ್ಲ! ಇದು ಇಂದು ನಡೆಯುತ್ತಿರುವ ಸರ್ಕಾರಿ ದೊಂಬರಾಟ.

'ವಿಶೇಷ ಆರ್ಥಿಕ ವಲಯ'ದ ಅಭಿಯಾನಕ್ಕೆ ಕೋಟಿಗಟ್ಟಲೆ ರೈತರು ಮನೆಮಾರು ಕಳೆದುಕೊಂಡು ಬೀದಿಪಾಲಾಗುತ್ತಿದ್ದಾರೆ. ಭಾರತದ ಅಭಿವೃದ್ಧಿ ಪಥದ ರಥಚಕ್ರಕ್ಕೆ ಇನ್ನೆಷ್ಟು ಬಲಿ ಬೇಕಾಗಿದೆಯೋ? ಯಾರು ಬಲ್ಲರು?

ಪೆಟ್ರೋಲ್-ಡೀಸೆಲ್ ಬೆಲೆ ಇಳಿಕೆ ಸಾಲದು- ಸಿಪಿಐ(ಎಂ)

ಪುಟ 2 ರಿಂದ

ಇತರ ನಾಯಕರು ಹಾಗೂ ಅರೆಸ್ಸೆಸ್ ಪರಿವಾರ ತೀವ್ರ ಪ್ರಯತ್ನ ನಡೆಸಿದ್ದಾರೆಂದೂ ವರದಿಯಾಗಿದೆ. ಸ್ವತಃ ಗೃಹ ಸಚಿವರೇ ಮುಖ್ಯ ಪಾತ್ರ ವಹಿಸಿರುವ ವಿಷಯದಲ್ಲಿ ನಿಷ್ಪಕ್ಷಪಾತವಾದ ತನಿಖೆ ನಡೆಯಬಹುದೆಂದು ನಿರೀಕ್ಷಿಸಲು ಹೇಗೆ ಸಾಧ್ಯ ? ಆದ್ದರಿಂದ ತಕ್ಷಣವೇ ಪದ್ಮಪ್ರಿಯ ಅಪಹರಣ, ಸಾವುಗಳ ಪ್ರಕರಣಗಳನ್ನು ಸಿಬಿಐ ತನಿಖೆಗೆ ಒಳಪಡಿಸಬೇಕು. ಇವುಗಳ ಜೊತೆಗೆ ರಘುಪತಿಭಟ್, ಪದ್ಮಪ್ರಿಯ ಹಾಗೂ ಅತುಲ್‌ರವರ ಆರ್ಥಿಕ ಮತ್ತು ಆಸ್ತಿ ವ್ಯವಹಾರಗಳ ಬಗ್ಗೆಯೂ ಸಂಶಯಗಳು ಎದ್ದಿವೆ. ಆದ್ದರಿಂದ ಈ ಮೂವರ ಆಸ್ತಿಗಳು, ಹಣ ವ್ಯವಹಾರಗಳ ಬಗ್ಗೆಯೂ ತೀವ್ರವಾದ ತನಿಖೆ ನಡೆಸಬೇಕಾಗಿದೆ. ಅಲ್ಲಿಯವರೆಗೆ ಪದ್ಮಪ್ರಿಯ ಹೆಸರಿನಲ್ಲಿರುವ ಆಸ್ತಿಯನ್ನು ಸಿಬಿಐ ನಿಯಂತ್ರಣಕ್ಕೊಳಪಡಿಸಬೇಕೆಂದು ಸಿಪಿಐ(ಎಂ) ಒತ್ತಾಯಿಸುತ್ತದೆ.

ರೈತರ ಆತ್ಮಹತ್ಯೆ : ಬೀಜ ಗೊಬ್ಬರಗಳ ಕೊರತೆ, ಅದರ ವಿರುದ್ಧ ಪ್ರತಿಭಟನೆ ಇವುಗಳ ಪರಿಣಾಮವಾಗಿ ಆತ್ಮಹತ್ಯೆಗಳ ಪ್ರಕರಣಗಳೂ ಜರುಗುತ್ತಿವೆ. ಕೃಷಿ ಬಿಕ್ಕಟ್ಟು ತೀವ್ರವಾಗಿ ರಾಜ್ಯದ ವಿವಿಧ ಭಾಗಗಳಲ್ಲಿ ರೈತರ ಆತ್ಮಹತ್ಯೆಯ ಹೆಚ್ಚೆ ಹೆಚ್ಚು ಪ್ರಕರಣಗಳು ವರದಿಯಾಗುತ್ತಿವೆ. ಆದ್ದರಿಂದ ಕೃಷಿ ಬಿಕ್ಕಟ್ಟನ್ನು ಪರಿಹರಿಸಲು ರೈತ ಸಂಘಗಳೊಳಡನೆ ಸಮಾಲೋಚನೆ ನಡೆಸಿ ಸಮಗ್ರ ಹಾಗೂ ಜನಪರ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಸಿಪಿಐ(ಎಂ) ಒತ್ತಯಿಸುತ್ತದೆ.

JANASHAKTHI KANNADA VARA PATRIKE JUNE 29, 2008 Price : Rs. 5/- No. KARKAN /2006/17926 Postal Reg. No. RNP/KA/BGS/2078/2007-09



ಕಮರ್ಷಿಯಲ್ ಚೌಕಟ್ಟಿನೊಳಗೇ ಜನಪರ ಕಾಳಜಿಯ 'ದಶಾವತಾರಂ'

ನಕುಲ

ಕಮಲ್ ಹಾಸನ್‌ರ ಹತ್ತು ಅವತಾರಗಳ ಬಹು ನಿರೀಕ್ಷೆಯ ಚಿತ್ರ 'ದಶಾವತಾರಂ'. ಭಾರತದ ಚಿತ್ರರಂಗದ ಇತಿಹಾಸದಲ್ಲೇ ಅತಿ ಹೆಚ್ಚಿನ ಬಜೆಟ್ - ಸುಮಾರು 140 ಕೋಟಿ ರೂಪಾಯಿ ವೆಚ್ಚದಲ್ಲಿ ಈ ಚಿತ್ರ ನಿರ್ಮಾಣವಾಗಿದೆ. ಈ ಚಿತ್ರಕ್ಕೆ ಕಮಲ್‌ಹಾಸನ್‌ರದ್ದೇ ಕಥೆ-ಚಿತ್ರಕಥೆ. ಸೂಕ್ಷ್ಮವಾದ ವಿಚಾರವನ್ನು ಕೈಗೆತ್ತಿಕೊಂಡಿರುವ ಅವರು ಅದನ್ನು ಪರಿಣಾಮಕಾರಿಯಾಗಿ ಪ್ರೇಕ್ಷಕರಿಗೆ ಮುಟ್ಟಿಸುವಲ್ಲಿ ಸ್ವಲ್ಪ ಎಡವಿದ್ದಾರೆ. ಅತ್ಯಾಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡ, ಹಾಲಿವುಡ್ ಮಾದರಿಯ ಕೇವಲ ಮನರಂಜನೆಯ ಚಿತ್ರವಾಗಿಯೇ ಉಳಿದುಬಿಡುತ್ತದೆ 'ದಶಾವತಾರಂ'.


12ನೇ ಶತಮಾನದ ವೈಷ್ಣವ-ಶೈವರ ನಡುವಿನ ಸಂಘರ್ಷದ ಪರಿಣಾಮಕಾರಿ ಚಿತ್ರಣದೊಂದಿಗೆ ಆರಂಭವಾಗುತ್ತದೆ ಚಿತ್ರ. ಚೋಳರ ಆಳ್ವಿಕೆಯಡಿಯಲ್ಲಿ ವೈಷ್ಣವ ಪಂಥದ ಪುರೋಹಿತನಾದ ರಂಗರಾಜ ನಂಬಿ (ಕಮಲ್) ಎಂಬ ಮಹಾನ್ ವಿಷ್ಣುಭಕ್ತನಿರುತ್ತಾನೆ. ಆದರೆ ಶೈವ ಪಂಥದ ರಾಜ ಕುಲೋತುಂಗಚೋಳ(ನೆಪೋಲಿಯನ್) ವಿಷ್ಣುವಿನ ವಿಗ್ರಹವನ್ನು ಹಾಳುಗೆಡವಲು ಯತ್ನಿಸಿದಾಗ ನಂಬಿ ಅದನ್ನು ಪ್ರತಿರೋಧಿಸುತ್ತಾನೆ. ಆಗ ಆತನನ್ನು ಬಂಧಿಸಿ ಹಿಂಸಿಸಲಾಗುತ್ತದೆ ಮತ್ತು ಶೈವ ಪಂಥ ಒಪ್ಪಿಕೊಳ್ಳಲು, 'ಓಂ ನಮಃ ಶಿವಾಯ' ಎಂದು ಹೇಳಲು ಒತ್ತಾಯಿಸಲಾಗುತ್ತದೆ.

ಆದರೆ ನಂಬಿ ತಾನು ಸಾಯುವುದಾಗಿ ಗೊತ್ತಿದ್ದೂ, ತನ್ನ ಹೆಂಡತಿ ಮಕ್ಕಳು ಅನಾಥರಾಗುವರೆಂದು ತಿಳಿದಿದ್ದರೂ ವೈಷ್ಣವ ಪಂಥಕ್ಕೆ ನಿಷ್ಠನಾಗಿರಲು ನಿಶ್ಚಯಿಸಿ 'ಓಂ ನಮಃ ನಾರಾಯಣ' ಎಂದು ಉಚ್ಚರಿಸುತ್ತಾನೆ. ಕೋಪಗೊಂಡ ರಾಜ ಆತನ್ನು ವಿಷ್ಣುವಿನ ವಿಗ್ರಹಕ್ಕೆ ಕಟ್ಟಿ ಸಮುದ್ರಕ್ಕೆಸೆಯಲು ಆದೇಶಿಸುತ್ತಾನೆ. ಇದೇ ಸಂದರ್ಭದಲ್ಲಿ ಮಹಾಭಕ್ತನಾಗಿ ಹೊರಹೊಮ್ಮುವ ನಂಬಿ ಇತರ ವೈಷ್ಣವ ಅನುಯಾಯಿಗಳಿಗೆ ದೈವಸ್ವರೂಪನಾಗಿ ಗೋಚರಿಸಿ, ಅವನ ಕಾಲಿಗೆರಗಿ, ಅವನ್ನು ದೈವತ್ವಕ್ಕೇರಿಸುವ ವಿಪರ್ಯಾಸವೂ ನಡೆಯುತ್ತದೆ. ಅಂತಿಮವಾಗಿ ಆತನನ್ನು ಸಮುದ್ರಕ್ಕೆಸೆಯುವುದರೊಂದಿಗೆ ಚಿತ್ರದ ಒಂದು ಹಂತ ಮುಗಿಯುತ್ತದೆ.



ಎಲ್ಲಾ ಕಾಲದಲ್ಲಿಯೂ ಬಲಿಷ್ಟರು ತಮ್ಮ ಯಜಮಾನಿಕೆಯನ್ನು ಇತರರ ಮೇಲೆ ಹೇರುತ್ತಿದ್ದದ್ದು ಮತ್ತು ಒಪ್ಪದವರನ್ನು ಬಗ್ಗುಬಡಿಯಲಾಗುತ್ತಿತ್ತು ಎಂಬ ಅಂಶವನ್ನು ಸೂಚ್ಯವಾಗಿ ಹೇಳಲಾಗಿದೆ. ಧರ್ಮವೆಂಬ ಅಫೀಮಿನ ಮತ್ತೇರಿಸಿಕೊಂಡವರ ಅಟ್ಟಹಾಸ ಕೇವಲ ಒಂದು ಕೋಮಿನದ್ದು ಮಾತ್ರವಲ್ಲ, ಎಲ್ಲಾ ಕೋಮಿನಲ್ಲೂ ಪ್ರಚಲಿತದಲ್ಲಿತ್ತು ಎಂಬುದು ಇತಿಹಾಸ. ಪ್ರಸ್ತುತ ಪರಿಸ್ಥಿತಿಯಲ್ಲಿಯೂ ಅಂತಹದ್ದೇ ವಾತಾವರಣವಿದ್ದು, ಮತಿಗೇಡಿಗಳು ತಮ್ಮ ಧರ್ಮಗಳನ್ನು ಒತ್ತಾಯಪೂರ್ವಕವಾಗಿ ಇತರರ ಮೇಲೆ ಹೇರುತ್ತಿರುವುದನ್ನು ನಾವು ಕಾಣುತ್ತಿರುವಾಗಲೇ ಚಿತ್ರ ಈ ಅಂಶದ ಬಗ್ಗೆ ಗಮನ ಹರಿಸುವುದಿಲ್ಲ. ಬದಲಿಗೆ ವಿಶ್ವ ಭೂಪಟದಲ್ಲಿ ತನ್ನ ಪ್ರಾಬಲ್ಯ ಸಾಧಿಸಲು ಹೊರಟಿರುವ ಅಮೆರಿಕನ್ ಯಜಮಾನಿಕೆಯ ಕಡೆ ಹೊರಳುತ್ತದೆ ಚಿತ್ರ ಕಥೆ.

ಜೈವಿಕ ತಂತ್ರಜ್ಞಾನದಲ್ಲಿ ಪರಿಣತಿ ಹೊಂದಿದ ಭಾರತೀಯ ವಿಜ್ಞಾನಿ ಗೋವಿಂದನ್ (ಕಮಲ್) ಅಮೆರಿಕಾ ಕಂಪನಿಯೊಂದರಲ್ಲಿ ಕಾರ್ಯನಿರ್ವಹಿಸುತ್ತಿರುತ್ತಾನೆ. ಜನಪರ ಉಪಯೋಗಕ್ಕಾಗಿ ತಾನು ಅವಿಷ್ಕರಿಸಿದ 'ಜೈವಿಕ ಅಣು'ವನ್ನು ಕಂಪನಿ ದುಷ್ಟರ ಕೈಗೊಪ್ಪಿಸಲು ಸಿದ್ಧವಾಗುತ್ತದೆ. ಇದರ ಹಿಂದಿರುವುದು Ex-CIA ನ ವ್ಯಕ್ತಿ. 'ಜೈವಿಕ ಅಣು'ವಿನ ದುರುಪಯೋಗವಾದಲ್ಲಿ ಕೋಟ್ಯಾಂತರ ಜನರ ಸರ್ವನಾಶಕ್ಕೆ ಬಳಕೆಯಾಗುವ ಸಾಧ್ಯತೆಯಿರುತ್ತದೆ. ಅಮೆರಿಕದ ಅಧ್ಯಕ್ಷ ಬುಶ್ (ಕಮಲ್) ಕೂಡಾ ಈ 'ಅಣು'ವಿನ ಬಗ್ಗೆ ಆಸಕ್ತಿ ವಹಿಸುತ್ತಾನೆ. ಗೋವಿಂದನ್ ಆ 'ಅಣು' ದುಷ್ಟರ ಕೈಗೆ ಸಿಗದಂತೆ ಹೇಗೆ ತಪ್ಪಿಸುತ್ತಾನೆ ಎಂಬುದು ಚಿತ್ರದ ಒಟ್ಟು ಕಥೆ.



ಚಿತ್ರ ಹಲವು ತಿರುವುಗಳನ್ನು ಪಡೆದು ಕೊಳುತ್ತಾ-ಭಾರತದಲ್ಲಿ ಕಥೆ ಮುಂದುವರಿಯುತ್ತದೆ. ದೇವರ ಪುಟ್ಟ ಮೂರ್ತಿಯೊಂದರಲ್ಲಿ 'ಅಣು', ಅದು ನಾಯಕಿಯ (ಅಸೀನ್)ಕೈಯಲ್ಲಿ, ಅದನ್ನು ಪಡೆಯಲು ಅವಳೊಂದಿಗೆ ಗೋವಿಂದನ್, ಅವನನ್ನು ಹಿಂಬಾಲಿಸಿ ಎಕ್ಸ್-ಸಿಐಎ, ಇವರಿಬ್ಬರನ್ನು ಹಿಡಿಯುವ ಸಲುವಾಗಿ ಪೋಲೀಸ್ ಅಧಿಕಾರಿ(ಕಮಲ್) ಇವರ ನಡುವೆ ಚಿತ್ರ ಸುತ್ತುತ್ತದೆ.

ಈ ಸಂದರ್ಭದಲ್ಲಿ ಗಂಭೀರತೆಯನ್ನು ಪಡೆದುಕೊಳ್ಳಬೇಕಿದ್ದ ಚಿತ್ರ ಹಾಸ್ಯ ಮಿಶ್ರಿತ ನಿರೂಪಣೆಯಿಂದಾಗಿ ಗಂಭೀರತೆ ಕಳೆದುಕೊಳ್ಳುತ್ತದೆ. ಪೋಲೀಸ್ ಅಧಿಕಾರಿಯ ವಿಡಂಬನಾತ್ಮಕ ವರ್ತನೆ ಕಥೆಗೆ ಪೂರಕವಲ್ಲ. ವಿಜ್ಞಾನಿ ಗೋವಿಂದನ್ ಮತ್ತು ಎಕ್ಸ್-ಸಿಐಎ ಏಜೆಂಟ್‌ಗೆ ಬಿಟ್ಟರೆ ಮಿಕ್ಕವರಾರಿಗೂ 'ಅಣು'ವಿನ ಭಯಂಕರತೆ ಅರ್ಥವಾಗುವುದೇ ಇಲ್ಲ! ಹಾಸ್ಯ ಸಿನಿಮಾಗಳಂತೆ ಒಬ್ಬರ ಹಿಂದೆ ಒಬ್ಬರು ಸುತ್ತುವ ಅಣುಕು ಪ್ರದರ್ಶನದಂತಾಗುವಲ್ಲಿ ಚಿತ್ರದ ವಿಫಲತೆ ಬಂದು ನಿಲ್ಲುತ್ತದೆ.

ಅಂತಿಮವಾಗಿ ಸಾಕಷ್ಟು ಮಾರಾಮರಿಯ ನಂತರ ಎಕ್ಸ್-ಸಿಐಎ ನಿಗೆ 'ಅಣು' ದೊರೆತರೂ ಅಲ್ಲಿಂದ ತಪ್ಪಿಸಿಕೊಳ್ಳಲು ಸಾಧ್ಯವಾಗದೇ ಅದನ್ನೇ ಹೊಡೆದು ಕುಡಿಯುತ್ತಾನೆ. ಆಗ ಅಣು ಎಲ್ಲೆಡೆ ವ್ಯಾಪಿಸುವ ಸಂದರ್ಭದಲ್ಲೇ ಸುನಾಮಿ ಬಂದು ಅಪ್ಪಳಿಸುತ್ತದೆ. ಉಪ್ಪು ನೀರಿನಲ್ಲಿ ಅಣು ನಾಶವಾದರೂ ಸುನಾಮಿಯಿಂದ ಸಾವಿರಾರು ಜನರು ಸಾವಿಗೀಡಾಗುತ್ತಾರೆ. ಇದರಿಂದ ದೊಡ್ಡ ಗಂಡಾಂತರ ತಪ್ಪಿತೆಂದು ಗೋವಿಂದನ್ ನಿಟ್ಟುಸಿರುಬಿಡುತ್ತಾನೆ. ತಾನು ನಂಬಿದ ದೈವವೇ ಇದಕ್ಕಲ್ಲ ಕಾರಣವೆಂದು ನಾಯಕಿ ವಾದಿಸಿದರೆ, ನಾಸ್ತಿಕನಾದ ಗೋವಿಂದನ್ ಆಸ್ತಿಕವಾದವನ್ನು ನಿರಾಕರಿಸುತ್ತಾನೆ.

ಈ ಮಧ್ಯೆ ಜಾತಿ ಪ್ರಶ್ನೆ, ಮತೀಯ ಸೌಹಾರ್ದತೆಯ ವಿಷಯಗಳು ಹಾದುಹೋಗುತ್ತವೆಯಾದರೂ ಅವ್ಯಾವೂ ಪ್ರೇಕ್ಷಕರಿಗೆ ತಲುಪದೇ ಹಾಗೇ ತೇಲಿಹೋಗಿಬಿಡುತ್ತವೆ. ಮತ್ತು ಮಲೆಯಾಳಿ ಕ್ರಿಶ್ಚಿಯನ್ ಸಾಮಾಜಿಕ ಕಾರ್ಯಕರ್ತ(ಕಮಲ್)ನೊಬ್ಬ ಮರಳು ಮಾಫಿಯಾದ ವಿರುದ್ಧ ಪ್ರತಿಭಟಿಸುವ ಸಾಮಾಜಿಕ ಕಳಕಳಿಯ ಸನ್ನಿವೇಶವು ಬಂದು ಹೋಗುತ್ತದೆ. ಕಮಲ್ ಹಿಂದು, ಮುಸ್ಲಿಂ, ಸಿಖ್, ಕ್ರಿಶ್ಚಿಯನ್ ಪಾತ್ರಗಳಲ್ಲದೇ ಪ್ರಾಂತೀಯ ಭಾಷೆಗಳಾದ ತಮಿಳಿಗನಾಗಿ, ತೆಲುಗು ಮತ್ತು ಮಲೆಯಾಳಿಗನಾಗಿಯೂ ತನ್ನ ಮತೀಯ ಸೌಹಾರ್ದತೆ ಮತ್ತು ಭಾಷಾ ಸೌಹಾರ್ದತೆಯ ಬಗೆಗೆ ತನ್ನ ಕಾಳಜಿಯನ್ನು ಮರೆದಿರುವುದು ಈ ಚಿತ್ರದ ಒಂದು ವಿಶೇಷತೆ.

ಈ ಚಿತ್ರದ ನಿರ್ದೇಶಕರು ಕೆ.ಎಸ್. ರವಿಕುಮಾರ್. ಚಿತ್ರಕಥೆಗೆ ಒಂದಿಷ್ಟು ಗಂಭೀರ ಸ್ವರೂಪ ನೀಡಿದ್ದರೆ ಅದರ ಪರಿಣಾಮ ಬೇರೆಯೇ ಆಗಿರುತ್ತಿತ್ತು. ಆದರೆ ಅವರು ತಾಂತ್ರಿಕತೆಯ ಬಳಕೆಯಲ್ಲಿ ನೈಪುಣ್ಯತೆ ಮೆರೆದಿದ್ದಾರೆ. ಅವರಿಗೆ ಸಮರ್ಥವಾಗಿ ಸಾಥ್ ನೀಡಿದ್ದಾರೆ ಛಾಯಾಗ್ರಹಕ ರವಿವರ್ಮನ್. ಮೊದಲಿಗೆ 12ನೇ ಶತಮಾನದ ಚಿತ್ರಣ ಮತ್ತು ಅಮೆರಿಕದಲ್ಲಿ ನಡೆಯುವ ಚೇಸಿಂಗ್ ದೃಶ್ಯಗಳು ಮತ್ತು ಅಂತಿಮವಾಗಿ ಸುನಾಮಿಯ ಭೀಕರತೆಯನ್ನು ಸೆರೆಹಿಡಿಯುವಲ್ಲಿ ಅವರ ಕೈಚಳಕ ಅದ್ಭುತ. ಇನ್ನು ಕಮಲ್‌ರ ಹತ್ತು ಅವತಾರಗಳಿಗೆ ರೂಪ ನೀಡಿರುವ ಮೇಕಪ್ ಕಲಾವಿದ ಮೈಕಲ್ ವಾಟ್ಮೋರ್ ಪ್ರತಿಭೆ ಮೆಚ್ಚುವಂತದ್ದೆ. ಕೆಲವೆಡೆ ಮೆಕಪ್ ಢಾಳಾಗಿ ಕಂಡರೂ ಕಮಲ್ ಅವರನ್ನು ಜಾರ್ಜ್ ಬುಶ್ ಆಗಿ, ಸಿಐಎನ ಎಜೆಂಟ್ ಆಗಿ ಮತ್ತು ಪೋಲೀಸ್ ಅಧಿಕಾರಿ ಬಲರಾಮ ನಾಯ್ಡು ಆಗಿ ಹಾಗೂ ಇತರ ಪಾತ್ರಗಳಲ್ಲಿ ತೋರಿರುವ ಅವರ ಕೈಚಳಕ ಅದ್ಭುತ!

ಈ ಎಲ್ಲಾ ಪಾತ್ರಗಳಲ್ಲೂ ಒಂದಕ್ಕೊಂದು ಸಾಮ್ಯತೆಯಿಲ್ಲದಂತೆ, ಧ್ವನಿಯೂ ಒಂದೇ ತೆರನಾಗಿ ಇರದಂತೆ ಅದ್ಭುತವಾಗಿ ನಟಿಸಿದ್ದಾರೆ ಕಮಲ್. ಕೆಲವು ಪಾತ್ರಗಳು ಚಿತ್ರಕ್ಕೆ ಪೂರಕವಾಗಿಲ್ಲ. ಆದರೂ ಈ ಪಾತ್ರಗಳ ನಿರ್ವಹಣೆಗಾಗಿ ಅವರು ಸಾಕಷ್ಟು ಶ್ರಮವಹಿಸಿರುವುದು ಎದ್ದುಕಾಣುತ್ತದೆ. ಇದು ಕಲಾವಿದರಾಗಿ ಅವರ ಹಿರಿಮೆಯನ್ನು ಮತ್ತಷ್ಟು ಹೆಚ್ಚಿಸಿದೆ.

JANASHAKTHI KANNADA VARA PATRIKE : Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12. 18th Cross, S.R.Nagar, BANGALORE - 560 027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor : S.Y.GURUSHANTH